# 3:5-14

# ಕ್ರಿಸ್ತನಲ್ಲಿ ಹೊಸ ಜೀವನ (ಭಾಗ 2)

## 3:5-14ರ ಮೇಲಿನ ಒಂದು ಸ್ಥೂಲ ಸಮೀಕ್ಷೆ

ಪೌಲನು ಸಾಲುಸಾಲಾಗಿ ಆಜ್ಞಾರ್ಥಕಗಳೊಂದಿಗೆ ಆರಂಭಿಸಿದನು ಮತ್ತು ಈ ಆಜ್ಞೆಗಳು ಮುಂಚೆಯ ಹೇಳಿಕೆಗಳ ಮೇಲೆ ಆಧಾರವಾಗಿರುತ್ತವೆಂಬುದನ್ನು ತೋರಿಸುವದಕ್ಕೆ "ಆದಕಾರಣ" (οὖν, *oun*) ಎಂದು ಬಳಸುತ್ತಾನೆ. ಕೊಲೊಸ್ಸೆಯವರು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿದ್ದರು, ಪ್ರಾಪಂಚಿಕ ಬಾಲಬೋಧೆಯ ಪಾಲಿಗೆ ಸತ್ತವರಾಗಿದ್ದರು, ಮತ್ತು ಕ್ರಿಸ್ತನೊಂದಿಗೆ ಪ್ರಭಾವದೊಡನೆ ಪ್ರತ್ಯಕ್ಷರಾಗುವದನ್ನು ನಿರೀಕ್ಷಿಸಬಲ್ಲವರಾಗಿದ್ದರು; "ಆದಕಾರಣ," ಅವರು ಅದಕ್ಕನುಗುಣವಾಗಿ ಜೀವಿಸಬೇಕಾಗಿತ್ತು. ಅವರು ಹೊಸ ಜನರಾಗಿದ್ದರಿಂದ, ಅವರು ಹೊಸ ಜನರಂತೆಯೇ ಜೀವಿಸಬೇಕಿತ್ತು. ಅವರು ಹೊಸಬರಾಗಿದ್ದರು ಆದರೆ ಪರಿಪೂರ್ಣರಾಗಿರಲಿಲ್ಲ, ಆದ್ದರಿಂದ ಅವರು ಆತ್ಮೀಕ ಪರಿಪಕ್ವತೆಯುಳ್ಳವರಾಗಿ ಅಭಿವೃದ್ಧಿಗೊಳ್ಳುವ ಅಗತ್ಯವಿತ್ತು. ಇದು ಸತ್ಯವೆಂಬುದಾಗಿ ಪೌಲನು ವೈಯಕ್ತಿಕ ಮಟ್ಟದಲ್ಲಿ ಅರಿತುಕೊಂಡಿದ್ದನು; ಕ್ರಿಸ್ತನಿಗೋಸ್ಕರ ಅನೇಕ ವರ್ಷಗಳ ಕಾಲ ಮಿಶನರಿಯಾಗಿದ್ದವನಾಗಿ, ಆತನು ಈಗಲೂ ಕ್ರೈಸ್ತ ಪರಿಪಕ್ವತೆಯ ಅತ್ಯುನ್ನತ ಗುರಿಯನ್ನು ತಲುಪುವದಕ್ಕಾಗಿ ಅಪೇಕ್ಷಿಸುವವನಾಗಿದ್ದನು (ಫಿಲಿಪ್ಪಿ 3:13, 14).

ಶಾರೀರಿಕ ಇಚ್ಛೆಗಳನ್ನು ವಿಸರ್ಜಿಸಬೇಕಾಗಿತ್ತು ಮತ್ತು ಹೀಗೆ ಈ ಕ್ರೈಸ್ತರನ್ನು ನಿಯಂತ್ರಿಸುವದಕ್ಕೆ ಇನ್ನು ಮೇಲೆ ಅವುಗಳಿಗೆ ಅನುಮತಿ ಕೊಡಬಾರದಿತ್ತು. ಅವರು ಭೂಮಿಯ ಶೂನ್ಯತೆಯನ್ನು ನಿಷ್ಫಲತೆಯನ್ನು ಅರಿತುಕೊಳ್ಳಬೇಕೆಂಬದು, ಕೊಡುವದಕ್ಕಾಗಿ ಲೋಕದ ಬಳಿಯಲ್ಲಿ ಏನೂ ಇರುವದಿಲ್ಲ ಎಂಬುದನ್ನು ಅವರು ಗ್ರಹಿಸಿಕೊಳ್ಳಬೇಕೆಂಬದು ಪೌಲನ ಬಯಕೆಯಾಗಿತ್ತು. ಅವರು ಪರಲೋಕದ ವಾಸ್ತವಿಕತೆಗಳ ಕಡೆಗೆ ದೃಷ್ಟಿಸುವ ಅಗತ್ಯವಿತ್ತು ಮತ್ತು ತಲುಪಬೇಕಾಗಿದ್ದ ಹಾಗೂ ಆನಂಧಿಸಬೇಕಾಗಿದ್ದ ಮಹಿಮೆಗಳನ್ನು ನೋಡುವದು ಅಗತ್ಯವಿತ್ತು. ಅವರ ಮನಸ್ಸುಗಳಲ್ಲಿ ಈ ಹೊಸ ಜೀವನವನ್ನು ಸ್ಥಾಪಿಸಿದ ಬಳಿಕ, ಪೌಲನು ಪರಲೋಕದ ಮಹಿಮೆಗಳನ್ನು ತಲುಪುವದಕ್ಕೋಸ್ಕರ ಅಭಿವೃದ್ಧಿಗೊಳಿಸಿಕೊಳ್ಳಬೇಕಾದ ವಾಸ್ತವಿಕತೆಯಿಂದ ಕೂಡಿದ ಗುಣಗಳನ್ನು ಮತ್ತು ನಿರ್ಮೂಲನೆ ಮಾಡಬೇಕಾದ ಆಚಾರಗಳನ್ನು ಅವರಿಗೆ ತಿಳಿಯಪಡಿಸುತ್ತಾನೆ.

ಕೊಲೊಸ್ಸೆಯವರು ನಕಾರಾತ್ಮನ ಗುಣಗಳನ್ನು ವಿಸರ್ಜಿಸಿ ಬಿಡಬೇಕಾಗಿತ್ತು (ವಚನಗಳು 5-11) ಮತ್ತು ಆತ್ಮೀಕವಾದವುಗಳನ್ನು ಧರಿಸಿಕೊಳ್ಳಬೇಕಿತ್ತು (ವಚನಗಳು 12-14). ನಕಾರಾತ್ಮಕ ಪಟ್ಟಿಯು ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಮೊದಲನೆಯದ್ದರಲ್ಲಿ ಶಾರೀರಿಕ ಇಚ್ಛೆಗಳು ಸೇರಿರುತ್ತವೆ, ಅವುಗಳಲ್ಲಿ ವಿಶೇಷವಾಗಿ ವಿಗ್ರಹಾರಾಧಕ

ಜನಾಂಗಗಳವರು ತೊಡಗಿಸಿಕೊಂಡಿರುತ್ತಿದ್ದರು (ವ. 5). ಅವರು ದೇವರ ಕೋಪದ ಕಾರಣದಿಂದಾಗಿ ಇವುಗಳನ್ನು ವಿಸರ್ಜಿಸಬೇಕಾಗಿತ್ತು (ವ. 6). ಎರಡನೆಯದ್ದರಲ್ಲಿ ಅಂಗೀಕಾರಾರ್ಹವಲ್ಲದ ಗುಣಗಳು ಸೇರಿರುತ್ತವೆ (ವಚನಗಳು 8, 9), ಅವುಗಳನ್ನು ನಿಗ್ರಹಿಸಿಕೊಳ್ಳುವದಕ್ಕೆ ಪೌಲನ ವಾಚಕರು ಕಲಿತುಕೊಳ್ಳಬೇಕಾಗಿತ್ತು ಯಾಕೆಂದರೆ ಅವರು ಪೂರ್ವಸ್ವಭಾವವನ್ನು ತೆಗೆದಿಟ್ಟು ನೂತನಸ್ವಭಾವವನ್ನು ಧರಿಸಿಕೊಂಡವರಾಗಿದ್ದರು (ವಚನಗಳು 9, 10).

ಬೇರೆ ಪತ್ರಿಕೆಗಳಲ್ಲಿ ಪೌಲನು ಇದೇ ರೀತಿಯ ದುರ್ಗುಣಗಳ ಪಟ್ಟಿಗಳನ್ನು ನೀಡುತ್ತಾನೆ. ಆತನು ಈ ಪಟ್ಟಿಗಳಲ್ಲಿ ದೇವರ ರಾಜ್ಯವನ್ನು ಪ್ರವೇಶಿಸುವದಕ್ಕೆ ತಡೆಯಾಗುವಂಥ ಪಾಪಗಳನ್ನು ಸೇರ್ಪಡೆಗೊಳಿಸಿರುತ್ತಾನೆ: ಅನೈತಿಕತೆ (ಹಾದರ), ನಾಚಿಕೆಗೇಡಿತನ, ಲೋಭ (ದುರಾಶೆ), ಮತ್ತು ವಿಗ್ರಹಾರಾಧನೆ (ಗಲಾತ್ಯ 5:19; 1 ಕೊರಿಂಥ 6:9). ಅನೈತಿಕರು, ಲೋಭಿಗಳು (ದುರಾಶೆ), ಮತ್ತು ವಿಗ್ರಹಾರಾಧಕರು ಸೇರಿದಂತೆ, ಈ ಕೆಲವೊಂದು ಪಾಪಗಳಲ್ಲಿ ಭಾಗಿಯಾಗಿರುವ ಸಹೋದರರು ಹಾಗೂ ಸಹೋದರಿಯರ ಜೊತೆಯಲ್ಲಿ ಸಹವಾಸವನ್ನು ಇಟ್ಟುಕೊಳ್ಳಬಾರದೆಂದು ಕ್ರೈಸ್ತರಿಗೆ ಆಜ್ಞಾಪಿಸಲಾಗಿರುತ್ತದೆ (1 ಕೊರಿಂಥ 5:11).

3:5-14ರಲ್ಲಿ ಪೌಲನು ತಾನು ಪ್ರಸ್ತಾಪ ಮಾಡುವದನ್ನು ಸಂಪೂರ್ಣವಾಗಿ ಸಾಧಿಸಿಕೊಳ್ಳುವಂತೆ ಕೊಲೊಸ್ಸೆಯವರಿಗೆ ವಿನಂತಿಸಿಕೊಳ್ಳಲು ಪೂರ್ಣವಾದ ಹಾಗೂ ನಿರ್ಣಾಯಕ ಕ್ರಮವನ್ನು ವ್ಯಕ್ತಪಡಿಸುವ ಮೂರು ಕ್ರಿಯಾಪದ ರೂಪಗಳನ್ನು ಬಳಸುತ್ತಾನೆ. ಮೊದಲನೆಯದಾಗಿ, ಅವರು ಕೆಲವೊಂದು ಪಾಪಕೃತ್ಯಗಳನ್ನು "ಸಾಯಿಸಬೇಕಿತ್ತು" (ವಚನಗಳು 5-7). ಎರಡನೆಯದಾಗಿ, ಕೆಲವೊಂದು ದುರ್ಗುಣಗಳ ವಿಷಯದಲ್ಲಿ ಅವರು ಅವುಗಳನ್ನು "ವಿಸರ್ಜಿಸಿಬಿಡಬೇಕು" ಎಂದು ಹೇಳಿದನು (ವಚನಗಳು 8, 9). ಮೂರನೆಯದಾಗಿ, ಕೆಲವೊಂದು ಸದ್ಗುಣಗಳಿಂದ ತಮ್ಮನ್ನು "ಧರಿಸಿಕೊಳ್ಳಬೇಕಿತ್ತು" (ವಚನಗಳು 10-14) — ಅವುಗಳಿಂದ ತಮ್ಮನ್ನು ಸಂಪೂರ್ಣ ತೊಡಿಸಿಕೊಳ್ಳಬೇಕಾಗಿತ್ತು.

## ಅನೈತಿಕವಾದ ಪೂರ್ವಜೀವಿತವನ್ನು ಸಾಯಿಸುವದು (3:5-7)

**5ಆದದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ. ಜಾರತ್ವ ಬಂಡುತನ ಕಾಮಾಭಿಲಾಷೆ ದುರಾಶೆ ವಿಗ್ರಹಾರಾಧನೆಗೆ ಸಮವಾಗಿರುವ ಲೋಭ ಇವುಗಳನ್ನು ವಿಸರ್ಜಿಸಿಬಿಡಿರಿ. 6ಇವುಗಳ ನಿಮಿತ್ತ ದೇವರ ಕೋಪವು ಉಂಟಾಗುತ್ತದೆ. 7ಪೂರ್ವದಲ್ಲಿ ನೀವು ಸಹ ಈ ದುರ್ಭಾವಗಳ ಅಧೀನದಲ್ಲಿದ್ದು ಈ ಕೆಲಸಗಳನ್ನು ನಡಿಸುತ್ತಿದ್ದಿರಿ.**

### "ಆದದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ" (3:5)

ಅವರು **ಆದದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಬೇಕಾಗಿತ್ತು** (3:5). ಒಳ್ಳೇ ಹಾಗೂ ಕೆಟ್ಟ ಕೃತ್ಯಗಳೆರಡೂ ದೇಹದ "ಅಂಗಗಳ" — ಭಾಗಗಳು — (μέλη, *melē*) ಮೂಲಕ ನಡಿಸಲ್ಪಡುತ್ತವೆ. ಕೈಗಳು ಕಳ್ಳತನ ಮಾಡಬಲ್ಲವು ಅಥವಾ ಇತರರಿಗೆ ಸಹಾಯ ಮಾಡಬಲ್ಲವು, ಕಾಲುಗಳು ಒಬ್ಬನನ್ನು ಕೆಟ್ಟತನಕ್ಕೆ

ನಡಿಸಬಹುದು ಅಥವಾ ದೇವರನ್ನು ಆರಾಧಿಸುವದಕ್ಕೆ ನಡಿಸಿಕೊಂಡು ಹೋಗಬಲ್ಲವು, ಕಣ್ಣುಗಳು ಶೋಧನೆಯೊಡ್ಡುವ ಕಾರ್ಯಗಳನ್ನು ಓದಬಲ್ಲವು ಮತ್ತು ನೋಡಬಲ್ಲವು ಅಥವಾ ದೇವರ ವಾಕ್ಯದ ಮೇಲೆ ದೃಷ್ಟಿಯನ್ನಿಡಬಲ್ಲವು, ನಾಲಿಗೆಯು ಕೆಟ್ಟದ್ದನ್ನು ಮಾತಾಡಬಲ್ಲದು ಅಥವಾ ಸಹಾಯಕವಾದ ಮತ್ತು ಆದರಣೆಯ ಮಾತುಗಳನ್ನಾಡಬಹುದು, ಕಿವಿಗಳು ತುಚ್ಛ ಸಂಭಾಷಣೆಯನ್ನು ಕೇಳಿಸಿಕೊಳ್ಳಬಲ್ಲದು ಅಥವಾ ಹಿತಕರ ಕಾರ್ಯಗಳನ್ನು ಆಲಿಸಬಲ್ಲದು, ಮತ್ತು ಮೆದಳು ಪಾಪವಾದದ್ದನ್ನು ಯೋಚಿಸಬಲ್ಲದು ಅಥವಾ ಪರಿಶುದ್ಧವಾದ ಯೋಚನೆಗಳನ್ನು ಮಾಡಬಲ್ಲದು. ಈ ಹಿನ್ನಲೆಯಲ್ಲಿ, ಪೌಲನು ದೇಹದ ಅಂಗಗಳು ಸಾಧಾರಣವಾಗಿ ಬಳಸಲ್ಪಡುವ ಉದಾಹರಣೆಗಳನ್ನು ಮಾತ್ರವೇ ತಿಳಿಸುತ್ತಾನೆ. ಕ್ರೈಸ್ತರು ಕೆಟ್ಟದ್ದನ್ನು ವಾಸ್ತವವಾದದ್ದು ಎಂಬದಾಗಿ ಪರಿಗಣಿಸಿದಾಗ ಮಾತ್ರವೇ ಕೆಟ್ಟದ್ದಕ್ಕೆ ಮರಣ ಸಾಧ್ಯವಿರುತ್ತದೆಂದು ಆತನು ಕಲಿಸಿದನು. "ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ" (ರೋಮಾ 6:11).

". . . ಸತ್ತವುಗಳೆಂದು ಎಣಿಸಿರಿ" (νεκρώσατε, *nekrōsate*) ಎಂಬುದು ಈ ವಚನದಲ್ಲಿ ಒಂದು ಆಜ್ಞಾರ್ಥಕವಾಗಿದ್ದು ಗ್ರೀಕ.ನಲ್ಲಿ ಬಲವಾದ ವ್ಯಕ್ತಗೊಳಿಸುವಿಕೆಯಾಗಿರುತ್ತದೆ, ಅದರ ಅಕ್ಷರಶಃ ಅರ್ಥವು "ಸಾಯಿಸಿರಿ" ಎಂದಾಗಿರುತ್ತದೆ. ಅವರು ದೀಕ್ಷಾಸ್ನಾನದ ವೇಳೆಯಲ್ಲಿ ಅಂತ್ಯಗೊಂಡಿರಬೇಕಾಗಿದ್ದಂಥ ಪಾಪದಿಂದ ಕೂಡಿದ ಶಾರೀರಿಕ ಕೃತ್ಯಗಳನ್ನು ಸಂಪೂರ್ಣವಾಗಿ ಕೊಲ್ಲಬೇಕೆಂಬುದು ಪೌಲನು ಅವರಿಗೆ ಕೊಟ್ಟ ಮಾರ್ಗಸೂಚನೆಯಾಗಿತ್ತು (ರೋಮಾ 6:1-6). ಅವರು ದೀಕ್ಷಾಸ್ನಾನ ಹೊಂದಿದ ವೇಳೆಯಲ್ಲಿ ತಮ್ಮ ಪೂರ್ವಜೀವಿತದ ಪಾಲಿಗೆ ಸತ್ತವರಾಗಿದ್ದರಾದರೂ, ಅವರು ಜೀವಿತಗಳನ್ನು ಮೋಹಕ್ಕೊಪಳಪಡಿಸುವ, ದುರ್ಗುಣಗಳು ಸತ್ತಿದ್ದವೆಂದು ಇದರ ಅರ್ಥವಾಗಿರಲಿಲ್ಲ. ಇವುಗಳು ಅಪಾಯಕರವಾಗಿ ಅವರ ಜೀವಿತಗಳಲ್ಲಿ ಪುನಃ ತಲೆಯೆತ್ತಬಹುದಾಗಿತ್ತಾದ್ದರಿಂದ, ಅವರು ಅವುಗಳನ್ನು "ಸಾಯಿಸಬೇಕಿತ್ತು," ಸಂಪೂರ್ಣ ನಿರ್ಮೂಲನೆ ಮಾಡಬೇಕಾಗಿತ್ತು.

Eduard Lohse ಹೀಗೆ ಬರೆಯುತ್ತಾನೆ, "ಸಾಯಿಸಿರಿ. ಅದರರ್ಥವೇನೆಂದರೆ: 'ಅದೇ ಪ್ರಕಾರವಾಗಿ ನೀವು ನಿಮ್ಮನ್ನು ಪಾಪದ ಪಾಲಿಗೆ ಸತ್ತವರೆಂದು ಮತ್ತು ಕ್ರಿಸ್ತನಲ್ಲಿ ದೇವರಿಗೋಸ್ಕರ ಜೀವಿಸುವವೆಂದು ಎಣಿಸಿಕೊಳ್ಳಬೇಕು.'"[1] ಆತನು ಇನ್ನೂ ವ್ಯಾಖ್ಯಾನಿಸಿ ಹೇಳಿದ್ದೇನೆಂದರೆ, ದೀಕ್ಷಾಸ್ನಾನದ ವೇಳೆ ಅನುಭವಿಸಿದ ಕ್ರಿಸ್ತನೊಂದಿಗೆ ಸಾಯುವಿಕೆಯನ್ನು, ಈಗ "ಭೂಸಂಬಂಧವಾದ ಅಂಗಗಳನ್ನು' ಸಾಯಿಸುವ ಮೂಲಕ ಯುಕ್ತಗೊಳಿಸಿಕೊಳ್ಳತಕ್ಕದ್ದು."[2]

ತಮ್ಮ ಪೂರ್ವಸ್ಥಿತಿ ಪಾಲಿಗೆ ಸಾಯುವ ಮೂಲಕ ಈಗಿನ ಸ್ಥಿತಿಯಲ್ಲಿ ಜೀವಿಸಬೇಕೆಂದು ಪೌಲನು ಈ ಕ್ರೈಸ್ತರಿಗೆ ಕರೆ ಕೊಡುತ್ತಿದ್ದಾನೆ. "ಸಾಯುವದು" ಎಂಬುದನ್ನು ಅವರು ಅಕ್ಷರಶಃ ಭಾವಿಸಿಕೊಳ್ಳಬೇಕೆಂಬದು ಆತನ ತಾತ್ಪರ್ಯವಾಗಿರಲಿಲ್ಲ, ಆತನು ಅದನ್ನು ಸಾಂಕೇತಿಕವಾಗಿ ಒಂದು ಜೀವನ ವಿಧವನ್ನು ನಿಲ್ಲಿಸಬೇಕು, ಒಬ್ಬನು ತನ್ನಿಂದ ಲೋಕದ ಕಲ್ಮಶವನ್ನು ತೊಲಗಿಸಿಕೊಳ್ಳಬೇಕು ಎಂಬ ಅರ್ಥದಲ್ಲಿ ಆತನು ಹೇಳಿದನು. ದೇಹದ ಇಚ್ಛೆಗಳನ್ನು – ಉದಾಹರಣೆಗೆ ಕಾಮ, ಹಸಿವೆ, ಮತ್ತು ದೈಹಿಕ ಸುಖಗಳು – ವಿಕೃತಗೊಳಿಸುವ ಮೂಲಕ ಪಾಪಗಳು ಉದ್ಭವವಾಗುತ್ತವೆ, ಅವುಗಳನ್ನು ದೇವರ

ಮಾನದಂಡಗಳೊಳಗೆ ಅನುಭವಿಸುವಾಗ, ಅವುಗಳು ಒಳ್ಳೆಯವುಗಳೇ. ಕೊಲೊಸ್ಸೆಯವರು ಈ ಶಾರೀರಿಕ ಇಚ್ಛೆಗಳಿಗೆ ಸರಿಯಾದ ದಿಕ್ಕನ್ನು ತೋರಿಸಬೇಕಾಗಿತ್ತು, ಹೀಗೆ ಅವುಗಳನ್ನು ನಿಗ್ರಹಿಸಿಕೊಂಡು ದೇವರಿಗಾಗಿ ಅವುಗಳನ್ನು ಬಳಸುವದಕ್ಕೆ ಸಾಧ್ಯವಾಗಿಸಿಕೊಳ್ಳಬೇಕಿತ್ತು. ದೇಹವು ಸ್ವತಃ ಕೆಟ್ಟದ್ದೇನೂ ಅಲ್ಲ; ಆದರೆ ಅದು ಪಾಪಭರಿತ ಆಕರ್ಷಣೆಗಳನ್ನು ಮಾಡಲ್ಪಡುವದಕ್ಕೆ ಒಂದು ದಾರಿಯಾಗಿರುತ್ತದೆ. ಅಲ್ಲದೆ ಅದರ ಮೂಲಕವಾಗಿ ಹೃದಯವು ಒಳ್ಳೇ ಕೃತ್ಯಗಳು ವ್ಯಕ್ತಪಡಿಸುವದಕ್ಕೆ ಅದು ಒಂದು ಸಾಧನ ಸಹ ಆಗಿರುತ್ತದೆ. ಒಬ್ಬ ವ್ಯಕ್ತಿಯಲ್ಲಿ ಒಳ್ಳೇದು ಅಥವಾ ಕೆಟ್ಟದ್ದರ ಮೂಲವು ಆ ವ್ಯಕ್ತಿಯೊಳಗೇ ಇರುತ್ತದೆ (ಮತ್ತಾಯ 15:19, 20). ನಿಜವಾದ ವ್ಯಕ್ತಿಯು ಆಂತರ್ಯದ ವ್ಯಕ್ತಿಯೇ ಆಗಿರುತ್ತಾನೆ.

ದೇಹದ ಅಂಗಗಳು ಕೆಟ್ಟ ಉದ್ದೇಶಗಳ ಪಾಲಿಗೆ ಸತ್ತವುಗಳಾಗಿರುವದಾದರೆ, ಫಲಿತವು ಅವುಗಳ ಹೊಸ ಬಳಕೆ ಮತ್ತು ಉದ್ದೇಶ ಆಗಿರತಕ್ಕದ್ದು. "ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ" (ರೋಮಾ 12:1); "ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ" (2 ಕೊರಿಂಥ 7:1). ಶಾರೀರಿಕ ದೇಹವನ್ನಲ್ಲ, ಶಾರೀರಭಾವದ ಸ್ವಭಾವವನ್ನು ನಿರ್ಮೂಲನೆ ಮಾಡಬೇಕಾಗಿರುತ್ತದೆ (ರೋಮಾ 6:6). ಅವರ ಅಂಗಗಳನ್ನು ಅನೀತಿ ನಡಿಸುವ ಸಾಧನಗಳನ್ನಾಗಿ ಬಳಸಿಕೊಳ್ಳುವ ಬದಲಾಗಿ, ಕೊಲೊಸ್ಸೆಯವರು, ಸತ್ತವರೊಳಗಿಂದ ಬದುಕಿಸಲ್ಪಟ್ಟವರಂತೆ, ತಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ ಬಳಸಬೇಕಿತ್ತು (ರೋಮಾ 6:13). ಅಂಗಗಳನ್ನು ಅಧರ್ಮ ಹಾಗೂ ಬಂಡುತನದ ದಾಸರನ್ನಾಗಿಸುವ ಬದಲಾಗಿ ನೀತಿಯ ದಾಸರನ್ನಾಗಿ ಬಳಸಬೇಕಾಗಿತ್ತು (ರೋಮಾ 6:19).

ಲೋಕದ ಜನರು ಸ್ವಲ್ಪ ಮಟ್ಟಿಗೆ, ತಮ್ಮ ಜೀವಿತಗಳಿಂದ ದುರ್ಗುಣಗಳನ್ನು ತೆಗೆದು ಹಾಕಿಕೊಳ್ಳಬಹುದು ಅಥವಾ ಪೌಲನು ಶಿಫಾರಸ್ಸು ಮಾಡಿದ ಹೊಸ ಜೀವನದ ಸ್ವಭಾವಗಳುಳ್ಳ ಕೆಲವು ಸದ್ಗುಣಗಳನ್ನು ಬೆಳೆಸಿಕೊಳ್ಳಲು ಶಕ್ತರಾಗಬಹುದು. ಹೇಗೂ, ಲೋಕದ ಬಳಿಯಲ್ಲಿ ಇಲ್ಲದಂಥ ಒಬ್ಬ ಸಹಾಯಕನು ಕ್ರೈಸ್ತರ ಬಳಿಯಲ್ಲಿರುತ್ತಾನೆ (ಯೋಹಾನ 14:17), ನಾವು ನಮ್ಮ ಜೀವಿತದಲ್ಲಿ ಪರಿಪೂರ್ಣವಾದ ಪರಿಶುದ್ಧತೆಯನ್ನು ಹೊಂದಲು ಪ್ರಯತ್ನಿಸುವಾಗ ನಮ್ಮನ್ನು ಬಲಗೊಳಿಸುವಾತನಾಗಿದ್ದಾನೆ (ಎಫೆಸ 3:16; 2 ಕೊರಿಂಥ 7:1). ಲೋಕವು ಅಂಥ ಬದಲಾವಣೆಗಳನ್ನು ಸ್ವಾರ್ಥ ಕಾರಣಗಳಿಗಾಗಿ ಅಪೇಕ್ಷಿಸಬಹುದಾಗಿದೆ, ಆದರೆ ಕ್ರೈಸ್ತರಾಗಿ ನಾವು ಯೇಸುವನ್ನು ಮೆಚ್ಚಿಸುವದಕ್ಕೂ ಮಹಿಮೆಪಡಿಸುವದಕ್ಕೂ ಬದಲಾವಣೆಗಳನ್ನು ಮಾಡಿಕೊಳ್ಳುತ್ತೇವೆ. ಇದನ್ನು ಮಾಡುವ ಮೂಲಕ, ನೈತಿಕವಾಗಿ ಭ್ರಷ್ಟಗೊಂಡಿರುವ ಮತ್ತು ಜಿಗುಪ್ಸೆಯುಂಟು ಮಾಡುವ ಸಮಾಜದ ದುರ್ನಾತಕ್ಕೆ ಪ್ರತಿರೋಧವಾಗಿ ನಡೆದುಕೊಳ್ಳಬಲ್ಲೆವು. 2 ಕೊರಿಂಥ 2:15, 16ರಲ್ಲಿ ಪೌಲನು ಹೀಗೆ ಬರೆಯುತ್ತಾನೆ, "ರಕ್ಷಣಾಮಾರ್ಗದಲ್ಲಿರುವವರಲ್ಲಿಯೂ ನಾಶನಮಾರ್ಗದಲ್ಲಿರುವವರಲ್ಲಿಯೂ ನಾವು ದೇವರ ಮುಂದೆ ಕ್ರಿಸ್ತನ ಪರಿಮಳವಾಗಿದ್ದೇವೆ. ನಾವು ನಾಶನಮಾರ್ಗದಲ್ಲಿರುವವರಿಗೆ ಮರಣದಿಂದ ಹುಟ್ಟಿ ಮರಣವನ್ನು ಹುಟ್ಟಿಸುವ

ವಾಸನೆಯಾಗಿಯೂ ರಕ್ಷಣಾಮಾರ್ಗದಲ್ಲಿ ರುವವರಿಗೆ ಜೀವದಿಂದ ಹುಟ್ಟಿ ಜೀವವನ್ನು ಹುಟ್ಟಿಸುವ ವಾಸನೆಯಾಗಿಯೂ ಇದ್ದೇವೆ."

### "ಜಾರತ್ವ ಬಂಡುತನ ಕಾಮಾಭಿಲಾಷೆ ದುರಾಶೆ" (3:5)

ಪೌಲನ ಮೊದಲನೆಯ ಪಟ್ಟಿಯಲ್ಲಿ ನೈತಿಕ ಪಾಪಗಳು ಸೇರಿರುತ್ತವೆ (ವ. 5), ಮತ್ತು ಎರಡನೆಯ ಪಟ್ಟಿಯು ಗುಣಸ್ವಭಾವದ ಪಾಪಗಳನ್ನು ಹೆಸರಿಸುತ್ತದೆ ಮತ್ತು ವ್ಯವಸ್ಥೆಗೊಳಿಸುತ್ತದೆ (ವಚನಗಳು 8, 9). ಈ ದುರ್ಗುಣಗಳನ್ನು ವಿಸರ್ಜಿಸಿ ಕ್ರೈಸ್ತ ಸದ್ಗುಣಗಳನ್ನು ಧರಿಸಿಕೊಳ್ಳುವ ಮೂಲಕ (ವಚನಗಳು 12-14), ಕೊಲೊಸ್ಸೆಯವರು ದೀಕ್ಷಾಸ್ನಾನದ ವೇಳೆಯಲ್ಲಿ ಪ್ರವೇಶಿಸಿದ್ದ ಹೊಸ ಜೀವನದ ಗುಣಸ್ವಭಾವಗಳನ್ನು ಬೆಳೆಸಿಕೊಳ್ಳುವವರಾಗಿದ್ದರು. ಮೊದಲ ಪಟ್ಟಿಯಲ್ಲಿರುವ ದುರ್ಗುಣಗಳು ದೇವರ ಕೋಪವನ್ನು ಮತ್ತು ನ್ಯಾಯತೀರ್ಪನ್ನು ತಂದುಕೊಳ್ಳಲಿದ್ದವು (ರೋಮಾ 1:29-31; 1 ಕೊರಿಂಥ 6:9, 10; ಗಲಾತ್ಯ 5:21; ಎಫೆಸ 5:5). ಇವುಗಳು ಕೊಲೊಸ್ಸೆಯಲ್ಲಿ ಮತ್ತು ಇತರ ಸ್ಥಳಗಳಲ್ಲಿದ್ದ ಕ್ರೈಸ್ತರು ತಮ್ಮ ಪೂರ್ವದಲ್ಲಿದ್ದ ವಿಗ್ರಹಾರಾಧಕ ಹಿನ್ನಲೆಯಲ್ಲಿರುವಾಗ ತೊಡಗಿಸಿಕೊಂಡಿದ್ದಂಥ ಕೃತ್ಯಗಳಾಗಿದ್ದವು.

ಆತನು ಮೊದಲನೆಯದಾಗಿ **ಜಾರತ್ವ**ವನ್ನು ಹೆಸರಿಸುತ್ತಾನೆ ಮತ್ತು πορνεία (*porneia*) ಎಂಬ ಪದವನ್ನು ಬಳಸುತ್ತಾನೆ, ಅದರಿಂದಲೇ "pornography" ಎಂಬುದು ಬಂದಿರುತ್ತದೆ. ಇತರ ತರ್ಜುಮೆಗಳು ಈ ಪದವನ್ನು "ಹಾದರ" ಎಂದು (KJV; NKJV; NRSV) ಅಥವಾ "ಲೈಂಗಿಕ ಅನೈತಿಕತೆ" (NIV; TNIV) ಎಂದು ಅನುವಾದಿಸಿರುತ್ತವೆ. "ಲೈಂಗಿಕ ಅನೈತಿಕತೆ," ಅಥವಾ ಲೈಂಗಿಕವಾಗಿ ಅಡ್ಡದಾರಿ ಹಿಡಿಯುವಿಕೆ ಎಂಬುದು "ಜಾರತ್ವ" ಎಂಬುದಕ್ಕಿಂತಲೂ ಉತ್ತಮವಾದ ಅನುವಾದವಾಗಿರುತ್ತದೆ, ಜಾರತ್ವ ಎಂಬುದು ಅರ್ಥದಲ್ಲಿ ಅತಿಯಾದ ವಿಸ್ತಾರತೆಯನ್ನು ಹೊಂದಿದೆ. *Porneia* ಎಂಬುದು ಕೇವಲ ಅನುಚಿತವಾದ ಲೈಂಗಿಕ ಸಂಬಂಧಗಳನ್ನು ಸೂಚಿಸುತ್ತದೆ; ಆದರೆ ಅದು ಪರಸ್ಪರ ವಿವಾಹವಾಗದಿರುವವರ ನಡುವಿನ ಲೈಂಗಿಕ ಸಂಭೋಗವಾಗಿರುವಂಥ ವ್ಯಭಿಚಾರಕ್ಕೆ ಎಂಬುದಕ್ಕೆ ಮಾತ್ರವೇ ಸೀಮಿತವಾಗಿರುವದಿಲ್ಲ. ಬದಲಾಗಿ, ಪೌಲನು ಬಳಸಿದಂಥ ಪದವು, ಸಲಿಂಗಕಾಮ, ಸಲಿಂಗ ಸ್ತ್ರೀಕಾಮ, ಮೃಗತ್ವ, ವ್ಯಭಿಚಾರ, ವೇಶ್ಯಾವೃತ್ತಿ, ಮತ್ತು ಪರಸ್ಪರ ವಿವಾಹವಾಗದವರ ನಡುವೆ ಸಂಭೋಗದಂತಹ ಎಲ್ಲಾ ವಿಧವಾಗಿರುವ ಕಾನೂನುಬಾಹಿರವಾದ ಲೈಂಗಿಕ ಕೃತ್ಯಗಳನ್ನು ಒಳಗೊಂಡಿರುತ್ತದೆ. ಹೊಸ ಒಡಂಬಡಿಕೆಯೊಳಗೆ ಬೇರೆ ಕಡೆಗಳಲ್ಲಿ ಈ ಪದದ ವಿವಿಧ ರೂಪಗಳು ಕಾಣಿಸಿಕೊಳ್ಳುತ್ತವೆ, ಅವು ಯಾವಾಗಲೂ ಇಂಥ ಕೃತ್ಯಗಳನ್ನು ಖಂಡಿಸುವಂಥ ಸನ್ನಿವೇಶದಲ್ಲಿಯೇ ಕಾಣಿಸಿಕೊಂಡಿರುತ್ತವೆ.[3] ಯೋಹಾನನು ಪ್ರಕಟನೆ ಪುಸ್ತಕದಲ್ಲಿ ಇದನ್ನು ಆಲಂಕಾರಿಕವಾಗಿ ಬಳಸುತ್ತಾನೆ, ಅದನ್ನು ಅಂತ್ಯಕಾಲದ ಬಾಬೇಲಿನೊಂದಿಗಿನ ಕೆಟ್ಟ ಪಾಲುಗಾರಿಕೆ ಮತ್ತು ಸಹವಾಸವನ್ನು ಸೂಚಿಸುವದಕ್ಕೆ ಬಳಸಿರುತ್ತಾನೆ (ಪ್ರಕಟನೆ 14:8; 17:2, 4; 18:3; 19:2).

ಗ್ರೀಕ್ ನಾಮಪದವಾದ μοιχεῖα (*moicheia*, "ವ್ಯಭಿಚಾರ"[4]) ಮತ್ತು ಕ್ರಿಯಾಪದವಾದ μοιχεύω (*moicheuō*, "ವ್ಯಭಿಚಾರ ಮಾಡು"[5]) ಎಂಬುವುಗಳನ್ನು *porneia* "ಅನೈತಿಕೆ [ಜಾರತ್ವ]" ಎಂಬದಾಗಿ ಗೊಂದಲ ಮಾಡಿಕೊಳ್ಳಬಾರದು. ಇವುಗಳನ್ನು ಒಬ್ಬ ವಿವಾಹಿತ ಹಾಗು ವಿವಾಹಿತನಲ್ಲದ ವ್ಯಕ್ತಿಯ ಅಥವಾ ವಿವಾಹ

ಸಂಗಾತಿಯಲ್ಲದ ಬೇರೊಬ್ಬ ವಿವಾಹಿತ ವ್ಯಕ್ತಿಯ ನಡುವಿನ ಲೈಂಗಿಕ ಸಂಭೋಗವನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತವೆ. *Porneia* ಒಂದು ವಿಸ್ತಾರ ಅರ್ಥವುಳ್ಳ ಪದವಾಗಿದ್ದು ಅದರೊಳಗೆ *moicheia* ಮತ್ತು *moicheuō* ಗಳನ್ನು ಸಹ ಸೇರ್ಪಡೆಗೊಳಿಸಬಹುದಾಗಿದೆ.

ಪೌಲನು ಕೊರಿಂಥದವರಿಗೆ *porneia*ದಲ್ಲಿ ತೊಡಗಿಸಿಕೊಂಡಿರುವರ ಸಹವಾಸವನ್ನು ಮಾಡಬಾರದೆಂದು ಬೋಧಿಸುತ್ತಾನೆ (1 ಕೊರಿಂಥ 5:11). "ವ್ಯಭಿಚಾರಿಗಳು . . . ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ" ಎಂದು ಆತನು ಅವರನ್ನು ಎಚ್ಚರಿಸುತ್ತಾನೆ (1 ಕೊರಿಂಥ 6:9, 10) ಮತ್ತು "ಜಾರತ್ವಕ್ಕೆ [ಲೈಂಗಿಕ ಅನೈತಿಕತೆಗೆ] ದೂರವಾಗಿ ಓಡಿಹೋಗಿರಿ" ಎಂದು ಅವರಿಗೆ ಬುದ್ಧಿವಾದ ಹೇಳುತ್ತಾನೆ (1 ಕೊರಿಂಥ 6:18). ಆತನು ಗಲಾತ್ಯ 5:19-21ರಲ್ಲಿ ಶರೀರಭಾವದ ಕರ್ಮಗಳ ಪಟ್ಟಿಯಲ್ಲಿ "ಜಾರತ್ವ"ವನ್ನು ಮೊದಲು ಸೇರಿಸುತ್ತಾನೆ.

ಕ್ರೈಸ್ತರೊಳಗೆ ಇನ್ನು ಮೇಲೆ ಲೈಂಗಿಕ ಇಚ್ಛೆಗಳು ಇರುವದೇ ಇಲ್ಲ ಎಂಬದಾಗಿ ಕಲಿಸುವ ಬದಲಾಗಿ, ಈ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳತಕ್ಕದ್ದು ಎಂಬದಾಗಿ ಪೌಲನು ಕಲಿಸುತ್ತಾನೆ. ಹಾದರದಿಂದ ದೂರವಿರಬೇಕೆಂದರೆ, ತಮ್ಮ ಕಾಮಾಭಿಲಾಷೆಗಳನ್ನು ನಿಯಂತ್ರಿಸಿಕೊಳ್ಳಲಾಗದವರು ತಾವು ದೇವರ ಮಾನದಂಡಗಳೊಳಗೆ ಮುಕ್ತವಾಗಿ ಲೈಂಗಿಕ ಸಂಬಂಧಗಳನ್ನು ಅನುಭವಿಸುವವರಾಗುವಂತೆ ವಿವಾಹ ಮಾಡಿಕೊಳ್ಳತಕ್ಕದ್ದು (1 ಕೊರಿಂಥ 7:1-5).

ಮುಂದಿನ ಎರಡು ಪದಗಳಲ್ಲಿ ಲೈಂಗಿಕ ವಿಕೃತಿಯು ಸೇರಿರಬಹುದಾಗಿದೆ, **ಬಂಡುತನ** ಮತ್ತು **ಕಾಮಾಭಿಲಾಷೆ**. "ಬಂಡುತನ" (ἀκαθαρσία, *akatharsia*) ಎಂಬುದು ಶುಚಿಯಾಗಿಲ್ಲದ, ಅಂದರೆ ದೇಹದ ತ್ಯಾಜ್ಯ ಅಥವಾ ಸಮಾಧಿಯಲ್ಲಿರುವ ವಸ್ತುಗಳ ಹಾಗೆ, ಹೊಲಸು ಹಾಗೂ ಅಶ್ಲೀಲವಾದದ್ದನ್ನು ಸೂಚಿಸುತ್ತದೆ (ಮತ್ತಾಯ 23:27). ನೈತಿಕ ಭ್ರಷ್ಟತೆ ಹಾಗೂ ಬಂಡುತನದ ವಿಷಯದಲ್ಲಿ ಆಲಂಕಾರಿಕವಾಗಿ ಬಳಸಲ್ಪಟ್ಟಾಗ, ಅದು ಸತತವಾಗಿ *porneia*ದೊಂದಿಗೆ ಸಂಬಂಧಿಸಲ್ಪಡುತ್ತದೆ. ಅದು ಗಲಾತ್ಯ 5:19ರಲ್ಲಿ ಶರೀರಭಾವದ ಕರ್ಮ ಎಂಬದಾಗಿ ಪಟ್ಟಿ ಮಾಡಲ್ಪಟ್ಟಿದೆ (ನೋಡಿರಿ 2 ಕೊರಿಂಥ 12:21; ಎಫೆಸ 5:3). ಈ ಪದವು ಪರಿಶುದ್ಧತೆ ("ಪರಿಶುದ್ಧಗೊಳಿಸಲ್ಪಡುವಿಕೆ"; 1 ಥೆಸಲೋನಿಕ 4:7) ಮತ್ತು ನೀತಿ (ರೋಮಾ 6:19) ಗಳಿಗೆ ವಿರುದ್ಧವಾಗಿರುವ ಅಸ್ವಾಭಾವಿಕವಾದ ಮತ್ತು ಅನೈತಿಕವಾದ ಕೃತ್ಯಗಳನ್ನು ಸೂಚಿಸುವದಕ್ಕೆ ಸಹ ಬಳಸಲ್ಪಡುತ್ತದೆ (ರೋಮಾ 1:24).

"ಕಾಮಾಭಿಲಾಷೆ" (πάθος, *pathos*) ಎಂಬುದು ಒಬ್ಬ ವ್ಯಕ್ತಿಯನ್ನು ವಶಪಡಿಸಿಕೊಳ್ಳುವಂತಹ ನಿಗ್ರಹಿಸಿಕೊಳ್ಳಲಾಗ ಇಚ್ಛೆಗಳನ್ನೊಳಗೊಂಡಿರುತ್ತದೆ. ಈ ಪದವು 3:5ರಲ್ಲಿ, ರೋಮಾ 1:26ರಲ್ಲಿ ("ತುಚ್ಛವಾದ ಕಾಮಾಭಿಲಾಷೆ"), ಮತ್ತು 1 ಥೆಸಲೋನಿಕ 4:5ರಲ್ಲಿ ("ಕಾಮಾಭಿಲಾಷೆ") ಕಾಣಿಸಿಕೊಳ್ಳುತ್ತದೆ. ಬಹುಪಾಲು ಬೈಬಲ್ ಹೊರಗಿನ ಬಳಕೆಯಲ್ಲಿ ಇದು "ಅನುಭವಿಸಿದ, ಸೈರಿಸಿಕೊಂಡ, ಅಥವಾ ಬಾಧೆಯನ್ನು ಹೊಂದಿದ ಸಂಗತಿ" (ಯೇಸು ಶಿಲುಬೆಯ ಮೇಲೆ ಅನುಭವಿಸಿದ ವಿಧದ ಬಾಧೆಯು ಸೇರಿದಂತೆ) ಎಂಬ ಅರ್ಥವನ್ನು ಕೊಡುತ್ತದೆ. ಭಾವಗಳಿಂದ ಆಳಲ್ಪಟ್ಟು ಜೀವನದ ಪ್ರಶಾಂತತೆಯನ್ನು ತಲುಪಲಾಗದಂಥ ವ್ಯಕ್ತಿಯನ್ನು ಸೂಚಿಸುವದಕ್ಕೆ ಸ್ತೋಯಿಕರು ಈ ಪದವನ್ನು ಬಳಸುತ್ತಿದ್ದರು. ಇಲ್ಲಿ ಇದು ಉತ್ಕಟ ಲೈಂಗಿಕ ಇಚ್ಛೆಗಳನ್ನು, ಕೆಟ್ಟ ಕಾಮಾಭಿಲಾಷೆಗಳು,

ಮತ್ತು ಜಾರತ್ವಕ್ಕೆ ಗುರುತಾದ ನಿಗ್ರಹಿಸಿಕ್ಕೊಳಪಡದ ಕಾಮಾಭಿಲಾಷೆಗಳು ಎಂಬುದನ್ನು ಸೂಚಿಸಲು ಬಳಸಲ್ಪಟ್ಟಿದೆ. "ಜಾರತ್ವ"ದಲ್ಲಿ ಶಾರೀರಿಕ ಕ್ರಿಯೆಯು ಸೇರಿದ್ದರೆ, "ಕಾಮಾಭಿಲಾಷೆ"ಯೆಂಬುದು ಮನಸ್ಸಿನಲ್ಲಿ ಯೋಚಿಸುತ್ತಿರುವ ಮತ್ತು ಒಬ್ಬನನ್ನು ಜಾರತ್ವದ ದೈಹಿಕ ಕೃತ್ಯಗಳನ್ನು ನಡಿಸುವಂತೆ ಮಾಡುವ ಇಚ್ಛೆಗಳು ಎಂಬುದನ್ನು ಸೂಚಿಸುತ್ತದೆ.

**ದುರಾಶೆ** ಎಂಬುದು ಗ್ರೀಕ್.ನ ಎರಡು ಪದಗಳಿಂದ ಅನುವಾದಿಸಲ್ಪಟ್ಟಿರುತ್ತದೆ, κακή (*kakē*, "ಕೆಟ್ಟ") ಮತ್ತು ἐπιθυμία (*epithumia*, "ಆಶೆಗಳು"). ಒಂದು ನಿರ್ದಿಷ್ಟವಾದ ಆಶೆಯು ಕೆಟ್ಟದ್ದೋ ಅಥವಾ ಒಳ್ಳೇದೋ ಎಂಬುದನ್ನು ನಿರ್ಧರಿಸುವದಕ್ಕೆ ಒಂದು ಸನ್ನಿವೇಶವವು ಅವಶ್ಯಕವಾಗಿರುತ್ತದೆ. ಈ ಸಂದರ್ಭದಲ್ಲಿ, "ಆಶೆ" ಎಂಬುದಕ್ಕೆ "ದುಷ್ಟ" ಎಂಬ ವಿಶೇಷಣ ಕೊಡಲ್ಪಡುತ್ತದೆ, ಪೌಲನು ಇಲ್ಲಿ ಪಾಪಭರಿತ ಇಚ್ಛೆಗಳು ಎಂಬ ತಾತ್ಪರ್ಯದಲ್ಲಿ ಹೇಳಿದನೆಂಬುದನ್ನು ಸೂಚಿಸುತ್ತದೆ.

*Epithumia*ದ ಮೂಲಭೂತ ಅರ್ಥವು ಯಾವದೋ ಒಂದನ್ನು ಮಾಡಬೇಕು ಅಥವಾ ಹೊಂದಿಕೊಳ್ಳಬೇಕು ಎಂಬ ರೀತಿಯಲ್ಲಿ "ಒಬ್ಬನ ಹೃದಯವನ್ನು ಯಾವದೋ ಒಂದರ ಮೇಲೆ ನೆಲೆಗೊಳಿಸುವದು" ಎಂದಾಗಿರುತ್ತದೆ. ಈ ಪದವು ದಶಾಜ್ಞೆಯಲ್ಲಿ ನಿಷೇಧಿಸಲ್ಪಟ್ಟಿರುವ ಕಾರ್ಯವಾಗಿರುವಂಥ, "ದುರಾಶೆ ಪಡುವದು" (ನೋಡಿರಿ ರೋಮಾ 7:7; 13:9) ಮತ್ತು ದುರಿಚ್ಛೆಗಳು ಎಂಬ ಕೆಟ್ಟ ಅರ್ಥದಲ್ಲಿ ಬಳಸಲ್ಪಟ್ಟಿರುತ್ತದೆ (1 ಕೊರಿಂಥ 10:6; ಗಲಾತ್ಯ 5:17; ಯಾಕೋಬ 4:2). ಪೌಲನು ಕೊಲೊಸ್ಸೆಯವರ ಬೆಳ್ಳಿ, ಬಂಗಾರ, ಅಥವಾ ಉಡುಪುಗಳಿಗಾಗಿ "ದುರಾಶೆ" ಪಟ್ಟಿರಲಿಲ್ಲ (ಅಪೊಸ್ತಲರ ಕೃತ್ಯಗಳು 20:33). ಯೇಸು ಈ ಪದವನ್ನು ನ್ಯಾಯಬಾಹಿರವಾದ ಲೈಂಗಿಕ ಇಚ್ಛೆಗಳನ್ನು ಸೂಚಿಸಿ ಬಳಸಿದನು (ಮತ್ತಾಯ 5:28). ಹೃದಯದಲ್ಲಿ ವ್ಯಭಿಚಾರದ ಯೋಚನೆಗಳಿಗೆ ಅವಕಾಶ ಕೊಡುವದು ವ್ಯಭಿಚಾರದ ಕ್ರಿಯೆಗಳಷ್ಟೆ ಪಾಪವಾಗಿರುತ್ತದೆ ಎಂದು ಆತನು ಕಲಿಸಿದನು. ಲೈಂಗಿಕವಾಗಿ ಪಾಲ್ಗೊಳ್ಳುವದು ಮಾತ್ರವೇ ಪಾಪ ಮಾಡುವದಕ್ಕೆ ದಾರಿಯಾಗಿರುವದಿಲ್ಲ; ಒಬ್ಬ ಸ್ತ್ರೀಯನ್ನು ನೋಡಿ ಆಕೆಯೊಂದಿಗೆ ಲೈಂಗಿಕ ಸಂಭೋಗವನ್ನು ಮಾಡಬೇಕೆಂದು ಬಯಕೆಯನ್ನಿಟ್ಟುಕೊಳ್ಳುವದು ಸಹ ಪಾಪವಾಗಿರುತ್ತದೆ. ಅಂಥ ಇಚ್ಛೆಗಳ ಪಾಲಿಗೆ ಸಾಯಬೇಕೆಂದು ಪೌಲನು ಕೊಲೊಸ್ಸೆಯವರಿಗೆ ಬೋಧಿಸಿದನು.

ಬೇರೆ ಸನ್ನಿವೇಶಗಳಲ್ಲಿ *epithumia* ಒಳ್ಳೇ ಬಯಕೆಗಳು ಅಥವಾ ಹಂಬಲಗಳು ಎಂಬ ಅರ್ಥವನ್ನು ಕೊಡಬಲ್ಲದು.[6] ಇದಕ್ಕೊಂದು ಉದಾಹರಣೆಯೆಂದರೆ ಸಭಾಧ್ಯಕ್ಷನ ಉದ್ಯೋಗವನ್ನು ಬಯಸುವ ಒಬ್ಬ ಮನುಷ್ಯನು; ಆತನು ಒಳ್ಳೇ ಕೆಲಸವನ್ನೇ "ಅಪೇಕ್ಷಿಸುವವನಾಗಿದ್ದಾನೆ" ಎಂದು ಪೌಲನು ಬರೆಯುತ್ತಾನೆ (1 ತಿಮೊಥೆ 3:1).

## "ವಿಗ್ರಹಾರಾಧನೆಗೆ ಸಮವಾಗಿರುವ ಲೋಭ" (3:5)

ಪೌಲನ ಮುಂದಿನ ಪದವು, πλεονεξία (*pleonexia*), ಎಂಬುದು KJV ಯಲ್ಲಿ "ದುರಾಶೆ ಪಡುವದು" ಎಂದು ಅನುವಾದಿಸಲ್ಪಟ್ಟಿದೆ ಆದರೆ NASBಯಲ್ಲಿ ಸಾಮಾನ್ಯವಾಗಿ "ಲೋಭ" ಎಂದು ಅನುವಾದಿಸಲ್ಪಟ್ಟಿದೆ.[7] KJV ಮತ್ತು NASBಗಳು ಒಂದೇ ಮೂಲ ಪದವಾದ (πλεονέκτης, *pleonektēs*) ಎಂಬದರಿಂದ ಬರುವ ಪದವನ್ನು "ಲೋಭಿ" ಎಂದು ಅನುವಾದಿಸುತ್ತವೆ (1 ಕೊರಿಂಥ 5:10, 11; 6:10; ಎಫೆಸ 5:5). ಇದು ಒಬ್ಬನು ಅಗತ್ಯಕ್ಕಿಂಥ ಅಥವಾ ಬರಬೇಕಾದದ್ದಕ್ಕಿಂತಲೂ ಅಧಿಕವಾಗಿ ಆಶಿಸುವದನ್ನು, ಅತಿಯಾಶೆ

ಮತ್ತು ಲೋಭವುಳ್ಳವನಾಗಿರುವದನ್ನು ಸೂಚಿಸುತ್ತದೆ. ಈ ಪದದ ಅನ್ವಯವು ಕೇವಲ ಲೈಂಗಿಕ ಪಾಪಗಳಿಗೆ ಮಾತ್ರವೇ ಆಗಿರುವದಿಲ್ಲ ಎಂಬುದನ್ನು ಖಚಿತ ಪಡಿಸಲು, ಪೌಲನು "ವಿಗ್ರಹಾರಾಧನೆ ಸಮವಾಗಿರುವ" ಎಂಬುದನ್ನು ಜೊತೆಯಲ್ಲಿ ಸೇರ್ಪಡೆಗೊಳಿಸುತ್ತಾನೆ. ಯೇಸು ತನ್ನ ಶಿಷ್ಯರಿಗೆ "ಎಲ್ಲಾ ಲೋಭಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ" ಎಂದು ಎಚ್ಚರಿಸಿದನು (ಲೂಕ 12:15).

ಯಾವದೋ ಒಂದನ್ನು ಹೊಂದಿಕೊಳ್ಳಬೇಕು, ಸ್ವಂತವಾಗಿಸಿಕೊಳ್ಳಬೇಕು, ಬಳಸಬೇಕು, ಅಥವಾ ಅನುಭವಿಸಬೇಕು ಎಂಬದಾಗಿ ವಿಪರೀತವಾದ ಹಂಬಲವನ್ನು ಹೊಂದಿದ್ದರೆ ಆ ಸಂಗತಿಯನ್ನು ವಿಗ್ರಹವಾಗಿಸುತ್ತದೆ. ಒಬ್ಬನು ಒಂದು ಅಭಿಲಾಷೆಯ ಮೂಲವಾದದ್ದನ್ನು ಗಳಿಸಿಕೊಳ್ಳಲು ಮುಖ್ಯವಾದ ಗಮನವನ್ನು ಕೇಂದ್ರಿಕರಿಸುವಾಗ, ಅದೊಂದು ಭಕ್ತಿಯ ವಸ್ತುವಾಗುತ್ತದೆ. ಈ ಲೋಭವು ಲೈಂಗಿಕವಾದ ಹಪಹಪಿಸುವಿಕೆಯಲ್ಲಿ ವ್ಯಕ್ತಗೊಳಿಸಲ್ಪಟ್ಟರೂ ಸರಿಯೇ, ಅಥವಾ ದೇವರಿಗೆ ಸೇರಿರುವಂಥ ಸೇವೆ ಹಾಗೂ ಸಮರ್ಪಣೆಯ ಸ್ಥಾನವನ್ನು ವಹಿಸಿಕೊಳ್ಳುವ ಬೇರೆ ಯಾವದೇ ಬಯಕೆಯಿದ್ದರೂ ಸರಿಯೇ, ಅದು ವಿಗ್ರಹಾರಾಧನೆಯಾಗುವದು. ಅದಕ್ಕೆ ಹಣದ ಮೇಲಿನ ಆಶೆಯು ಒಂದು ಉದಾಹರಣೆಯಾಗಿದೆ: ಅದು ಲೋಭದ ಮೇಲೆ ಆಧಾರವಾಗಿದೆ ಮತ್ತು "ಸಕಲವಿಧವಾದ ಕೆಟ್ಟತನಕ್ಕೆ" ಮೂಲವಾಗಿದೆ (1 ತಿಮೊಥೆ 6:10).

ತಾನು ಸುವಾರ್ತೆಯನ್ನು ಸಾರುವದರ ಉದ್ದೇಶವು ಲೋಭವಾಗಲಿ ಅಥವಾ ಐಶ್ವರ್ಯವಂತನಾಗಬೇಕೆಂಬ ದಾಗಲಿ ಆಗಿರುವದಿಲ್ಲ ಎಂದು ಪೌಲನು ಬರೆಯುತ್ತಾನೆ (1 ಥೆಸಲೋನಿಕ 2:4, 5). ಕೊರಿಂಥದಲ್ಲಿ ಕೆಲವರು "ದೇವರ ವಾಕ್ಯವನ್ನು ಕಲಬೆರಿಕೆಮಾಡುವದರ" ಮೂಲಕ ತಮ್ಮ ಲೋಭವನ್ನು ತೋರಿಸಿದರು (2 ಕೊರಿಂಥ 2:17).

**ವಿಗ್ರಹಾರಾಧನೆ**ಯು ಇಸ್ರಾಯೇಲ್ಯರ ಆರಾಧನೆಯೊಳಗೆ ಆಗಾಗ ನುಸುಳಿ ಬರುತ್ತಲೇ ಇದ್ದ ಒಂದು ಸಾಂಕ್ರಾಮಿಕ ವ್ಯಾಧಿಯಂತಿತ್ತು. ದೇವರು ಅದನ್ನು ಕಠೋರವಾಗಿ ಖಂಡಿಸಿದನು ಮತ್ತು ಜನರನ್ನು ಅದರ ವಿರುದ್ಧವಾಗಿ ಎಚ್ಚರಿಸುವದಕ್ಕಾಗಿ ಸತತವಾಗಿ ಪ್ರವಾದಿಗಳನ್ನು ಕಳುಹಿಸುತ್ತಲೇ ಇದ್ದನು. ಬಹುಶಃ ದೇವರು ವಿಗ್ರಹಾರಾಧಕರಿಗೆ ನೀಡುವ ಎಚ್ಚರಿಕೆಯನ್ನು ಪ್ರತಿಫಲನಗೊಳಿಸುವಂಥ ಹೇಳಿಕೆಯನ್ನು ದಾವೀದನು ನೀಡುತ್ತಾನೆ: "ಸುಳ್ಳು ವಿಗ್ರಹಗಳನ್ನು ಅವಲಂಬಿಸಿದವರನ್ನು ನಾನು ದ್ವೇಷಿಸುತ್ತೇನೆ" (ಕೀರ್ತನೆ 31:6). ಇಸ್ರಾಯೇಲ್ಯರು ವಿಗ್ರಹಗಳನ್ನು ಮಾಡಿಕೊಳ್ಳುವದರ ವಿಷಯದಲ್ಲಿ ಯೆಶಾಯನು ಹೀಗೆ ಬರೆದನು, "ನೀವು ನಿಮ್ಮ ಕೈಯಿಂದ ರೂಪಿಸಿಕೊಂಡಿರುವ ಬೆಳ್ಳಿಯ ಮತ್ತು ಬಂಗಾರದ ವಿಗ್ರಹಗಳನ್ನು ಆ ದಿನದಲ್ಲಿ ಪ್ರತಿಯೊಬ್ಬನೂ ಬಿಸಾಟುಬಿಡುವನು; ಅವುಗಳನ್ನು ರೂಪಿಸಿದ್ದು ಪಾಪವಷ್ಟೆ" (ಯೆಶಾಯ 31:7). ಆತನ್ನು ಇನ್ನೂ ಹೇಳಿದ್ದೇನೆಂದರೆ, "ಕೆತ್ತಿದ ವಿಗ್ರಹಗಳಲ್ಲಿ ಭರವಸವಿಟ್ಟು ನೀವೇ ನಮ್ಮ ದೇವರುಗಳು ಎಂದು ಎರಕದ ಬೊಂಬೆಗಳಿಗೆ ಅರಿಕೆಮಾಡುವವರು ಹಿಂದೆ ಬಿದ್ದು ಕೇವಲ ಅವಮಾನಕ್ಕೆ ಈಡಾಗುವರು" (ಯೆಶಾಯ 42:17; ನೋಡಿರಿ ಯೆರೆಮೀಯ 10:14). ದೇವರು ಯೆಹೆಜ್ಕೇಲನ ಮೂಲಕ ಆ ಆರಾಧನೆಯ ವಸ್ತುಗಳನ್ನು "ಹೇಯ ವಿಗ್ರಹಗಳು" ಎಂದು ಕರೆಯುತ್ತಾನೆ (ಯೆಹೆಜ್ಕೇಲ 5:11).

ಇಸ್ರಾಯೇಲ್ಯರು ವಿಗ್ರಹಗಳನ್ನು ಪೂಜಿಸಬಾರದೆಂದು ದೇವರು ದಶಾಜ್ಞೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದನು (ವಿಮೋಚನಕಾಂಡ 20:3-5; ಧರ್ಮೋಪದೇಶಕಾಂಡ 5:7-9).

ಅದೇ ರೀತಿಯಲ್ಲಿ ಕ್ರೈಸ್ತರಿಗೆ ಸಹ ಅವುಗಳನ್ನು ಸೇವಿಸಬಾರದೆಂದು ಎಚ್ಚರಿಸಲಾಗಿರುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 15:20). ಯಾರ ಜೀವಿತದ ಪ್ರಾಥಮಿಕ ಗುರಿಯು ಸ್ವತ್ತುಗಳನ್ನು ಗಳಿಸಿಕೊಳ್ಳುವದಾಗಿರುತ್ತದೋ ಅವರು ಆ ಆದ್ಯತೆಯನ್ನು ದೇವರ ಸೇವೆಗಿಂತಲೂ ಅಗ್ರಸ್ಥಾನದಲ್ಲಿಡುವವರಾಗಿದ್ದಾರೆ, ಸ್ವತ್ತುಗಳನ್ನು ತಮ್ಮ ದೇವರುಗಳಾಗಿ, ತಮ್ಮ ವಿಗ್ರಹಗಳಾಗಿ ಮಾಡಿಕೊಳ್ಳುವವರಾಗಿದ್ದಾರೆ. ಆದಿ ಸಭೆಗೆ ಹೀಗೆ ಬೋಧನೆ ಮಾಡಲ್ಪಟ್ಟಿತ್ತು "ವಿಗ್ರಹಕ್ಕೆ ನೈವೇದ್ಯ ಮಾಡಿದ್ದನ್ನೂ . . . ವಿಸರ್ಜಿಸುವದು ಅವಶ್ಯವಾಗಿದೆ" (ಅಪೊಸ್ತಲರ ಕೃತ್ಯಗಳೂ 15:29) ಮತ್ತು ವಿಗ್ರಹಗಳ ಪೂಜೆಯಿಂದ ದೂರವಿರಿ ಎಂದು ತಿಳಿಸಲಾಗಿತ್ತು (ನೋಡಿರಿ 1 ಕೊರಿಂಥ 10:14; ಗಲಾತ್ಯ 5:20, 21; 1 ಯೋಹಾನ 5:21).

ಆರಾಧನೆಯಲ್ಲಿ ಪ್ರತಿಮೆಗಳು ಹಾಗೂ ಮೂರ್ತಿಗಳನ್ನು ಬಳಸುವವರು ಸಹ ವಿಗ್ರಹಾರಾಧನೆಯ ವಿರುದ್ಧ ದೇವರು ನೀಡಿರುವ ಎಚ್ಚರಿಕೆಯನ್ನ ಉಲ್ಲಂಘಿಸುವವರಾಗಿರುತ್ತಾರೆ. ಆಕಾಶದಲ್ಲಾಗಲಿ ಭೂಮಿಯ ಮೇಲಾಗಲಿ ಇರುವ ಯಾವುದರ ರೂಪವನ್ನೂ ಆರಾಧನೆಯಲ್ಲಿ ಬಳಸಬಾರದೆಂಬುದಕ್ಕೆ ಕಾರಣವನ್ನು ದೇವರು ಮೋಶೆಗೆ ತಿಳಿಸುತ್ತಾನೆ: "ಹೋರೇಬಿನಲ್ಲಿ ಯೆಹೋವನು ಬೆಂಕಿಯ ಜ್ವಾಲೆಯೊಳಗಿಂದ ನಿಮ್ಮ ಸಂಗಡ ಮಾತಾಡಿದಾಗ ನಿಮಗೆ ಯಾವ ಆಕಾರವೂ ಕಾಣಿಸಲಿಲ್ಲವಷ್ಟೆ" (ಧರ್ಮೋಪದೇಶಕಾಂಡ 4:15). ದೇವರು ಅದೃಶ್ಯನಾಗಿರುವದರಿಂದ (ಕೊಲೊಸ್ಸೆ 1:15; 1 ತಿಮೊಥೆ 6:16), ಆತನನ್ನು ಯಾವದೇ ಶಾರೀರಿಕ ಪ್ರತಿಕೃತಿಗಳಿಲ್ಲದೆ, ಅದೃಶ್ಯ ಜೀವಿಯಾಗಿಯೇ ಆರಾಧಿಸಬೇಕು. ಆತ್ಮಸ್ವರೂಪನಾಗಿರುವ ಆತನನ್ನು, ಆತ್ಮದಲ್ಲಿಯೂ ಸತ್ಯದಲ್ಲಿಯೂ ಆರಾಧಿಸತಕ್ಕದ್ದು (ಯೋಹಾನ 4:23, 24). ಮನುಷ್ಯನು ರೂಪಿಸುವಂಥ ಯಾವದೂ ದೇವರನ್ನು ನಿಖರವಾಗಿ ಪ್ರತಿನಿಧಿಸುವದಕ್ಕೆ ಸಾಧ್ಯವಿಲ್ಲ, ಮತ್ತು ಮನುಷ್ಯನು ರೂಪಿಸುವಂಥ ಯಾವದನ್ನೂ ಆರಾಧನೆಯಲ್ಲಿ ಬಳಸಕೂಡದು.

### "ಇವುಗಳ ನಿಮಿತ್ತ ದೇವರ ಕೋಪವು ಉಂಟಾಗುತ್ತದೆ" (3:6)

**ಕೋಪ** ಎಂಬ ಪದವು ಗ್ರೀಕ್.ನ ὀργή (*orgē*) ಎಂಬದರಿಂದ ಬಂದಿರುತ್ತದೆ, ಇದನ್ನು "ಸಿಟ್ಟು" ಎಂದು ಅನುವಾದಿಸಬಹುದಾಗಿದೆ. (3:8ರ ಮೇಲಿನ ಚರ್ಚೆಯನ್ನು ನೋಡಿರಿ.) ಹಳೆಯ ಒಡಂಬಡಿಕೆಯ ಪುಸ್ತಕಗಳಲ್ಲೆಲ್ಲಾ "ದೇವರ ಕೋಪ"ವು ಪ್ರಧಾನ ಚರ್ಚೆಯಾಂಶವಾಗಿರುತ್ತದೆ.[8] ಇದು "ದೇವರ ರೌದ್ರ"ದ ವಿಷಯದಲ್ಲಿ ಸಹ ಸತ್ಯವಾಗಿದೆ.[9] ಹೊಸ ಒಡಂಬಡಿಕೆಯು ಸಹ ದೇವರಿಗೆ ಸಿಟ್ಟು ಹಾಗೂ ಕೋಪದ ಗುಣಗಳನ್ನು ಅನ್ವಯಿಕೆ ಮಾಡುತ್ತದೆ.[10] ಕೋಪವು ದೇವರ ಗುಣಗಳಲ್ಲೊಂದಾಗಿದ್ದು ಅದನ್ನು ಅಲ್ಲಗಳೆಯುವದಕ್ಕೆ ಸಾಧ್ಯವಿಲ್ಲ, ಅದು ಹಳೆಯ ಮತ್ತು ಹೊಸ ಎರಡೂ ಒಡಂಬಡಿಕೆಗಳಿಂದ ಸ್ಪಷ್ಟವಾಗಿ ತಿಳಿಸಲ್ಪಟ್ಟಿರುತ್ತದೆ. (ನೋಡಿರಿ "ಹೆಚ್ಚಿನ ಅಧ್ಯಯನಕ್ಕಾಗಿ: 'ದೇವರ ಕೋಪ' [3:6]" ಪುಟ 109.)

ನಿರಂತರವಾಗಿ ದೇವರ ಪ್ರೀತಿ, ಕರುಣೆ, ಮತ್ತು ಒಳ್ಳೇತನಗಳ ಬಗ್ಗೆಯೇ ಯೋಚಿಸುತ್ತಿರುವದರಿಂದಾಗಿ ಕೆಲವರು ಆತನ ಸಿಟ್ಟು ಮತ್ತು ಕೋಪಾಗ್ನಿಯನ್ನು ನಿರ್ಲಕ್ಷಿಸುವಂತಾಗಿರುತ್ತದೆ. ಒಬ್ಬ ಕೋಪವುಳ್ಳ ದೇವರಾಗಿ, ಹಳೆಯ ಒಡಂಬಡಿಕೆಯ ದೇವರು, ಹೊಸ ಒಡಂಬಡಿಕೆಯ ಪ್ರೀತಿಸ್ವರೂಪನಾದ ದೇವರು ಒಂದೇ ಆಗಿರುವದಿಲ್ಲ ಎಂಬದಾಗಿ ಗ್ನಾಸ್ಟಿಕ್‌ರು ಬೋಧಿಸುತ್ತಿದ್ದರು. ಧರ್ಮಶಾಸ್ತ್ರಕ್ಕೆ ಅವಿಧೇಯರಾಗುವವರಿಗೆ

ದೇವರು ನೀಡಿದಂಥ ದಂಡನೆಯು ಹಳೆಯ ಒಡಂಬಡಿಕೆಯ ದೇವರು ಹೊಸ ಒಡಂಬಡಿಕೆಯ ದೇವರಿಗಿಂತ ಬೇರೆಯಾದವನು ಎಂಬುದಕ್ಕೆ ಪುರಾವೆಯಾಗಿರುತ್ತದೆ ಎಂದು ಅವರು ಕಲಿಸಿದರು.

ಅಂಥ ನಿರ್ಧಾರಕ್ಕೆ ಬರುವದು ಯೇಸುವಿನ ಕೋಪವನ್ನು (ಮಾರ್ಕ 3:5) ಮತ್ತು ಅನನೀಯ ಹಾಗೂ ಸಪ್ಫೈರಳ ಮೇಲೆ (ಅಪೊಸ್ತಲರ ಕೃತ್ಯಗಳು 5:1-10), ಹೆರೋದನ ಮೇಲೆ (ಅಪೊಸ್ತಲರ ಕೃತ್ಯಗಳು 12:21-23), ಮತ್ತು ಎಲುಮನ ಮೇಲೆ (ಅಪೊಸ್ತಲರ ಕೃತ್ಯಗಳು 13:6-11) ಮೇಲೆ ದೇವರು ಬರಮಾಡಿದ ದಂಡನೆಯನ್ನು ನಿರ್ಲಕ್ಷಿಸುವದಾಗಿರುತ್ತದೆ. ಅದು ದುಷ್ಟತನವನ್ನು ನಡಿಸುವವರಿಗಾಗುವ ಕೋಪಾಗ್ನಿಭರಿತ ನಾಶನವನ್ನು ಲೆಕ್ಕಕ್ಕೆ ತೆಗೆದುಕೊಳ್ಳದ್ದಾಗಿರುತ್ತದೆ (ರೋಮಾ 2:6-11). ಯೇಸು ಹಾಗೂ ಹಳೆಯ ಒಡಂಬಡಿಕೆಯ ದೇವರು ಸ್ವಭಾವದಲ್ಲಿ ಏಕರೀತಿಯಾಗಿರುತ್ತಾರೆ. ಯೇಸು ಅವಿಧೇಯರ ಮೇಲೆ ಪ್ರತಿಕಾರವನ್ನು ಸಲ್ಲಿಸುವನು (2 ಥೆಸಲೋನಿಕ 1:7-9).

ಇಸ್ರಾಯೇಲ್ಯರೆಡೆಗೆ ವ್ಯಕ್ತಪಡಿಸಲ್ಪಟ್ಟ ದೇವರ ಕೋಪದ ರೋಷವು ತನಗೆ ವಿಧೇಯರಾಗದವರನ್ನು ದೇವರು ದಂಡಿಸುವನು ಎಂಬುದಕ್ಕೆ ಕ್ರೈಸ್ತ ಯುಗದಲ್ಲಿರುವವರಿಗೊಂದು ಎಚ್ಚರಿಕೆ ಮತ್ತು ಒಂದು ಭರವಸೆಯಾಗಿರುತ್ತದೆ (ಇಬ್ರಿಯ 10:28, 29). ಆತನು ಇಸ್ರಾಯೇಲ್ಯರ ವಿರುದ್ಧ ತೆಗೆದುಕೊಂಡ ಕ್ರಮವು ತನ್ನನ್ನು ಗೌರವಿಸದ ಅಥವಾ ತನ್ನ ಚಿತ್ತಕ್ಕೆ ಪ್ರತಿಕ್ರಿಯೆ ನೀಡದ ಎಲ್ಲಾ ಜನರಿಗೆ ಏನು ಮಾಡುವನೆಂಬುದಕ್ಕೆ ಉದಾಹರಣೆಗಳಾಗಿರುತ್ತವೆ. “ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ” (1 ಕೊರಿಂಥ 10:11); “ಅದನ್ನು ಮೀರಿ ಮಾಡಿದ ಪ್ರತಿಯೊಂದು ತಪ್ಪಿಗೂ ಅವಿಧೇಯತ್ವಕ್ಕೂ ನ್ಯಾಯವಾದ ಪ್ರತಿಫಲವುಂಟಾದ ಮೇಲೆ” (ಇಬ್ರಿಯ 2:2).

ದೇವರ ಸಿಟ್ಟು ಮತ್ತು ಕೋಪಗಳನ್ನು ಇಷ್ಟವಾಗದ್ದೊಂದಕ್ಕೆ ತಾರ್ಕಿಕವಲ್ಲದ ಪ್ರತಿಕ್ರಿಯೆಯನ್ನು ತೋರಿಸುವದಕ್ಕೆ ಸಮಾನಗೊಳಿಸಕೂಡದು. ದೇವರನ್ನ ಸೂಚಿಸುವಾಗ ಕೆಲವು ವ್ಯಾಖ್ಯಾನಕಾರರು ಈ ಪದಗಳನ್ನು ಕೈ ಬಿಟ್ಟಿರುತ್ತಾರೆ ಮತ್ತು ಬದಲಾಗಿ “ದೇವರ ನಾಶನ,” “ಭಯಾನಕ ದಂಡನೆ,” “ದೇವರ ನ್ಯಾಯತೀರ್ಪು,” ಮತ್ತು “ದೇವರ ಭಯಂಕರವಾದ ದಂಡನೆ” ಎಂಬ ಪದಗಳನ್ನು ಬಳಸಿರುತ್ತಾರೆ. ಈ ಮಾತುಗಳು ಸತ್ಯಗಳನ್ನೊಳಗೊಂಡಿವೆ ಆದರೆ ದುಷ್ಕೃತ್ಯ ನಡಿಸುವವರ ವಿರುದ್ಧವಾಗಿರುವ ದೇವರ ಮನಸ್ಸನ್ನು ನ್ಯಾಯವಾಗಿ ಪ್ರತಿನಿಧಿಸುವದಿಲ್ಲ.

ಇದು ವಿಚಿತ್ರವೇನಿಸಿದರೂ, ಕೋಪವು ಪ್ರೀತಿಯ ಫಲಿತವಾಗಿರುತ್ತದೆ. ಒಬ್ಬ ಮನುಷ್ಯನು ತನ್ನ ಹೆಂಡತಿಯನ್ನು ಅತಿಯಾಗಿ ಪ್ರೀತಿಸುವವನಾಗಿರುವಾಗ, ಆಕೆಯು ಮತ್ತೊಬ್ಬನನ್ನು ಪ್ರೀತಿಸಿ ಈತನನ್ನು ಬಿಟ್ಟು ಹೋಗುವಾಗ ಬಹಳ ಕೋಪಗೊಳ್ಳುವನು. ಆಕೆಯ ಮೇಲೆ ಅವನಿಗೆ ಪ್ರೀತಿಯಿಲ್ಲವಾಗಿದ್ದರೆ, ಆಕೆಯು ಆತನನ್ನು ಬಿಟ್ಟುಹೋಗುವದರಿಂದ ಆತನಿಗೆ ಕೋಪ ಬರುತ್ತಿರಲಿಲ್ಲ. ದೇವರು ತನ್ನ ಪ್ರೀತಿಯ ನಿಮಿತ್ತದಿಂದಲೇ, ತನ್ನನ್ನು ಬಿಟ್ಟು ಪೌಲನು ಪಟ್ಟಿ ಮಾಡಿರುವಂಥ ಪಾಪಕೃತ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಪಿಶಾಚನನ್ನು ಹಿಂಬಾಲಿಸುವವರ ಮೇಲೆ ಕೋಪಗೊಳ್ಳುತ್ತಾನೆ (1 ಯೋಹಾನ 3:8).

**“ಅವಿಧೇಯರಾಗುವ ಮಕ್ಕಳ ಮೇಲೆ ಬರುವದು” (3:6)**

ಪೌಲನು ದೇವರ ಕೋಪವು ಖಚಿತವಾಗಿ ಬರುವದೆಂಬುದನ್ನು ἔρχομαι (*erchomai*, **ಬರುವದು**) ಎಂಬ ಕ್ರಿಯಾಪದದಿಂದ ವ್ಯಕ್ತಗೊಳಿಸುತ್ತಾನೆ. 6ನೇ ವಚನದಲ್ಲಿ ಮತ್ತು ಎಫೆಸ 5:6ರಲ್ಲಿನ *erchomai* ಎಂಬದು ವರ್ತಮಾನಕಾಲ ರೂಪದಲ್ಲಿರುವದರಿಂದ (ಅದು ಭವಿಷ್ಯದಲ್ಲಿ ಸಂಭವಿಸುವ ಘಟನೆಯನ್ನು ಸೂಚಿಸುತ್ತಾದರೂ), ಕೆಲವು ವೇದಪಂಡಿತರು ಕೋಪವು ಈಗ ಸದ್ಯಕ್ಕೆ ಅವಿಧೇಯರಾಗಿರುವವರ ಮೇಲೆ ಇರುತ್ತದೆಂಬ ಅರ್ಥದಲ್ಲಿ ಪೌಲನು ಹೇಳಿದನೆಂಬ ನಿರ್ಧಾರಕ್ಕೆ ಬಂದಿರುತ್ತಾರೆ. William Hendriksen ಹೀಗೆ ವಿವರಿಸುತ್ತಾನೆ, “ಕೆಲವು ಸಾರಿ ‘ಪ್ರವಾದನಾತ್ಮಕ ವರ್ತಮಾನ ಕಾಲ ರೂಪ’ ಕರೆಯಲ್ಪಡುವಂಥದ್ದರ (cf. ಯೋಹಾನ 4:21; 14:3) ಮೂಲಕ, ಅಂಥ ಪಾಪಗಳಲ್ಲಿ ಜೀವಿಸುವವರ ಮೇಲೆ ಬರಲಿರುವ ದೇವರ ಕೋಪವು, ಈಗಾಗಲೇ ಬಂದಿರುತ್ತದೋ ಎಂಬಷ್ಟರ ಮಟ್ಟಿಗೆ ಖಚಿತವಾಗಿರುತ್ತದೆಂಬ ವಾಸ್ತವಾಂಶವನ್ನು ಪೌಲನು ಒತ್ತಿ ಹೇಳುತ್ತಿದ್ದಾನೆ.”[11]

ದೇವರ ಕೋಪವು ಭವಿಷ್ಯದಲ್ಲಿ ಸಂತೃಪ್ತಗೊಳಿಸಲ್ಪಡುವ ವರ್ತಮಾನ ಕಾಲದ ವಾಸ್ತವಿಕತೆಯಾಗಿರುತ್ತದೆ (1 ಥೆಸಲೋನಿಕ 1:10). “ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು” (ಯೋಹಾನ 3:36).

ಮೂಲ ವಾಕ್ಯದಲ್ಲಿ **ಅವಿಧೇಯರಾಗುವ ಮಕ್ಕಳು** ಎಂಬ ಪದಗುಚ್ಛವು ಇರುವದೋ ಇಲ್ಲವೋ ಎಂಬುದನ್ನು ವೇದ ಪಂಡಿತರು ಪ್ರಶ್ನೆ ಮಾಡುತ್ತಾರೆ. ಯುನೈಟೆಡ್ ಬೈಬಲ್ ಸೋಸೈಟಿಗಳಿಂದ ಪ್ರಕಾಶನಗೊಳಿಸಲ್ಪಟ್ಟ ಗ್ರೀಕ್ ಹೊಸ ಒಡಂಬಡಿಕೆಯಲ್ಲಿ ಇದರ ಸೇರ್ಪಡೆಯ ವಿಷಯದಲ್ಲಿ, Bruce Metzger ಹೀಗೆ ಹೇಳುತ್ತಾನೆ, “. . . ಸಮಿತಿಯಲ್ಲಿನ ಬಹುತೇಕರು ಈ ಪದಗಳನ್ನು ಉಳಿಸಿಕೊಳ್ಳಬೇಕೆಂದು ಆದರೆ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಅವುಗಳ ನೈಜತೆಯ ಬಗ್ಗೆ ಸ್ವಲ್ಪ ಮಟ್ಟಿನ ಸಂಶಯವನ್ನು ಸೂಚಿಸುವದಕ್ಕಾಗಿ ಅವುಗಳಿಗೆ ಸಮಭುಜ ಆವರಣಗಳನ್ನು ಹಾಕಬೇಕೆಂದು ನಿರ್ಣಯಿಸಲಾಯಿತು.”[12]

ಈ ಪದಗುಚ್ಛದ ವಿವಿಧ ರೂಪಗಳು ಹಲವಾರು ತರ್ಜುಮೆಗಳಲ್ಲಿ ಕಾಣಿಸಿಕೊಳ್ಳುತ್ತವೆ (NASB; KJV; NKJV; TEV). ಇನ್ನು ಕೆಲವು ತರ್ಜುಮೆಗಳಲ್ಲಿ ಇದು ಕೈಬಿಡಲ್ಪಟ್ಟಿದೆ ಆದರೆ ಪಾರ್ಶ್ವ ಟಿಪ್ಪಣಿಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತದೆ (1977 NASB; ASV; NEB; NIV; TNIV; RSV; NRSV). ಪ್ರಮುಖ ಹಸ್ತಪ್ರತಿಗಳಲ್ಲಿ (ಉದಾಹರಣೆಗೆ, Sinaiticus, the Alexandrinus, ಮತ್ತು minusculesನ ಬಹುಪಾಲು) ಪದಗುಚ್ಛವು ಮೂಲವಾಕ್ಯದಲ್ಲಿತ್ತು ಎಂಬುದಕ್ಕೆ ಪುಷ್ಟಿಯನ್ನು ನೀಡುತ್ತವೆ. “ಪದಗುಚ್ಛವನ್ನು ಉಳಿಸಿಕೊಂಡಿರುವದಕ್ಕೆ ಆಗಾಧಪ್ರಮಾಣದಲ್ಲಿ ಹಸ್ತಪ್ರತಿಗಳ ಪ್ರಮಾಣೀಕರಣವು” ಇರುತ್ತದೆಂದು ಕೆಲವು ವ್ಯಾಖ್ಯಾನಕಾರರು ಪ್ರತಿಪಾದಿಸುತ್ತಾರೆ.[13]

ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯ ಮೂಲ ವಾಕ್ಯದಲ್ಲಿ ಅದು ಕಾಣಿಸಿಕೊಂಡರೂ ಸರಿಯೇ ಅಥವಾ ಕಾಣಿಸಿಕೊಳ್ಳದಿದ್ದರೂ ಸರಿಯೇ, ಎಫೆಸ 5:6ರಲ್ಲಂತೂ ಅದು ಕಾಣಿಸಿಕೊಳ್ಳುತ್ತದೆ: “ಹುರುಳಿಲ್ಲದ ಮಾತುಗಳನ್ನಾಡುವವರಿಗೆ ಕಿವಿಗೊಟ್ಟು ಮೋಸಹೋಗಬೇಡಿರಿ; ಅಂಥ ಕೃತ್ಯಗಳ ನಿಮಿತ್ತವಾಗಿ ದೇವರ ಕೋಪವು ಆತನಿಗೆ

ಅವಿಧೇಯರಾಗುವವರ ಮೇಲೆ ಬರುತ್ತದೆ." ಈ ಕಾರಣಕ್ಕಾಗಿ, ಅವಿಧೇಯತೆಯ ಮೇಲೆ ಉಂಟಾಗುವ ದೇವರ ನ್ಯಾಯತೀರ್ಪಿಗೆ ಆ ಪದಗಳು ನಿಜವಾದ ಪ್ರತಿನಿಧಿತ್ವವನ್ನು ಒದಗಿಸುತ್ತವೆಂದು ನಾವು ಬಲ್ಲೆವು.

"ಅವಿಧೇಯರಾದ ಮಕ್ಕಳು" ಎಂಬದರ ಅರ್ಥವು ಈಗ ಅವರ ಸ್ವಭಾವವಾಗಿ ಮಾರ್ಪಟ್ಟಿರುವಂಥ ಅವಿಧೇಯತೆಯ ಉತ್ಪನ್ನಗಳಾಗಿರುವ ಗುಂಪಿನಲ್ಲಿರುವವರು ಎಂದಾಗಿರುತ್ತದೆ. ಅವರು ಅವಿಧೇಯರಾದ ತಂದೆತಾಯಿಗಳಿಗೆ ಹುಟ್ಟಿದವರು ಅಥವಾ ಪಾಪಸ್ವಭಾವದಿಂದ ಹುಟ್ಟಿರುವವರು ಎಂಬ ಅರ್ಥದಲ್ಲಿ ಪೌಲನು ಹೇಳಲಿಲ್ಲ. "ಮಕ್ಕಳು" ಅಥವಾ "ಯ ಮಕ್ಕಳು" ಎಂಬುದು ಹೇಳಲ್ಪಟ್ಟಿರುವ ಯಾವದೇ ಸಂಗತಿಯ ಸ್ವಭಾವವನ್ನು ವ್ಯಕ್ತಪಡಿಸುವದಕ್ಕೆ ಬಳಸಲ್ಪಟ್ಟದ್ದಾಗಿರುತ್ತದೆ, ಉದಾಹರಣೆಗೆ, "ನರಕದ ಮಗನನ್ನಾಗಿ" (ಮತ್ತಾಯ 23:15), "ಗುಡುಗಿನ ಮರಿಗಳು" (ಮಾರ್ಕ 3:17), "ಲೋಕದ ಮಕ್ಕಳು" (ಲೂಕ 16:8), "ಬೆಳಕಿನ ಮಕ್ಕಳು" (ಲೂಕ 16:8), "ನಾಶನದ ಮಗನು" (ಯೋಹಾನ 17:12), "ಆದರಣೆಯ ಮಗನು" (ಅಪೊಸ್ತಲರ ಕೃತ್ಯಗಳು 4:36), "ಸೈತಾನನ ಮಗ" (ಅಪೊಸ್ತಲರ ಕೃತ್ಯಗಳು 13:10).

### "ಪೂರ್ವದಲ್ಲಿ ನೀವು ಸಹ ಈ ದುರ್ಭಾವಗಳ ಅಧೀನದಲ್ಲಿದ್ದು ಈ ಕೆಲಸಗಳನ್ನು ನಡಿಸುತ್ತಿದ್ದಿರಿ" (3:7)

ಗತಕಾಲದಲ್ಲಿ ಕೊಲೊಸ್ಸೆಯವರು ಪ್ರಾಪಂಚಿಕ ಆಚಾರಗಳನ್ನು ಅನುಸರಿಸುವವರಾಗಿದ್ದರು, ಆದರೆ ಈಗ ಅವರು ಅಂಥ ನಡವಳಿಕೆಗಳೊಂದಿಗೆ ಯಾವ ಸಂಬಂಧವನ್ನೂ ಹೊಂದಿರಲಿಲ್ಲ. ಅವರು ಹಿಂದಿನ ಕಾಲದಲ್ಲಿ "ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರೂ ದ್ವೇಷಮನಸ್ಸುಳ್ಳವರೂ" ಆಗಿದ್ದರು (1:21). ಅವರು ಕ್ರಿಸ್ತನಲ್ಲಿ ಹೊಸ ಜೀವನವನ್ನು ಆರಂಭಿಸಿದ್ದರೆಂಬ ವಾಸ್ತವಾಂಶದ ಅರ್ಥವು ಅವರು ಇನ್ನು ಮೇಲೆ ಪೂರ್ವದಲ್ಲಿ **ನಡಿಸುತ್ತಿದ್ದ** ಕೃತ್ಯಗಳಿಗೆ ಹಿಂದಿರುಗುವದು ಅಸಾಧ್ಯವಾಗಿತ್ತೆಂಬದಾಗಿ ಆಗಿರಲಿಲ್ಲ. ಹೇಗೂ, ಇಲ್ಲಿ ಬಳಸಲಾಗಿರುವ ಕ್ರಿಯಾರೂಪದ (περιεπατήσατε, *periepatēsate*) ಪದವು ಕ್ರಿಯೆಯನ್ನು ಹಿಂದಿನ ಕಾಲದಲ್ಲಿ ಪೂರ್ತಿಗೊಂಡದ್ದು ಅಥವಾ ಅಂತ್ಯಗೊಂಡದ್ದು ಎಂಬದಾಗಿ ಕಾಣತಕ್ಕದ್ದೆಂಬುದಾಗಿ ಸೂಚಿಸುತ್ತದೆ. ಪೌಲನ ಪತ್ರಿಕೆಯನ್ನು ಸ್ವೀಕರಿಸಿಕೊಂಡವರು ಈ ಪಾಪಗಳ ಪಾಲಿಗೆ ಸತ್ತಿದ್ದರು, ಹೀಗೆ ಅವರ ಮುಂಚಿನ ಜೀವನ ಶೈಲಿಯನ್ನು ಅಂತ್ಯಗೊಳಿಸಿದ್ದರು.

"ನಡಿಸುತ್ತಿದ್ದಿರಿ" ಎಂಬುದು ಕ್ರಿಯೆಯನ್ನು, ಅಥವಾ ಚಲನೆಯನ್ನು ಸೂಚಿಸುತ್ತದೆ, ಅದು ಗತಕಾಲದಲ್ಲಿ ಸಂಭವಿಸಿರಬೇಕು ಅಥವಾ ವರ್ತಮಾನಕಾಲದಲ್ಲಿ ಮುಂದುವರೆದಿರುವಂಥದ್ದಾಗಿರಬಹುದು; ಹೇಗೂ, **ಪೂರ್ವದಲ್ಲಿ** (πότε, *pote*) ಎಂಬುದು ಅವರು ಗತಕಾಲದಲ್ಲಿ ಈ ಪಾಪಗಳಲ್ಲಿ ನಿರಂತರವಾಗಿ ನಡೆಯುವವರಾಗಿದ್ದರೆಂಬುದನ್ನು ತಿಳಿಯ ಪಡಿಸುತ್ತದೆ. ನಡೆಯುವದು ಎಂಬುದು ಕೆಲವೊಂದು ವಿಧದಲ್ಲಿ ಜೀವಿಸುವದನ್ನು ಪ್ರತಿನಿಧಿಸುತ್ತದೆ, ಅದು ಕೆಟ್ಟ ವಿಧ ಅಥವಾ ಒಳ್ಳೇ ವಿಧ ಆಗಿರಬಹುದಾಗಿದೆ. ಅದು ಒಂದು ಒಳ್ಳೇ ಅರ್ಥದಲ್ಲಿ[14] ಅಥವಾ ಒಂದು ಕೆಟ್ಟ ಅರ್ಥದಲ್ಲಿಯಾಗಲಿ[15] ಬಳಸಲ್ಪಡಬಲ್ಲದಾಗಿದೆ (ನೋಡಿರಿ ರೋಮಾ 8:4).

ಪೌಲನು ತಿಳಿಸಿದ ಈ ರೀತಿಯ ಪಾಪಗಳು ಜನರ ಜೀವಿತಗಳಲ್ಲಿ ನಿಯಂತ್ರಣ

ಮಾಡುವ ವಾಸ್ತವಾಂಶಗಳಾಗಬಲ್ಲವು. ಕೊಲೊಸ್ಸೆಯವರು ಲೈಂಗಿಕ ಅನೈತಿಕತೆ, ಬಂಡುತನ, ಕಾಮಾಭಿಲಾಷೆ, ದುರಾಶೆ, ಮತ್ತು ಲೋಭಗಳಲ್ಲಿ ನಿರಂತರವಾಗಿ ನಡೆಯುವವರಾಗಿದ್ದರು. ಪಾಪದಲ್ಲಿಯೇ ಮುಂದುವರೆಯುವವನು "ಪಾಪಕ್ಕೆ ದಾಸನು" ಎಂಬದಾಗಿ ಯೇಸು ಹೇಳಿದನು (ಯೋಹಾನ 8:34). ಪೌಲನು ಹಾಗೂ ಪೇತ್ರನು ಸಹ ಅದೇ ಸತ್ಯವನ್ನು ಕಲಿಸಿದರು (ರೋಮಾ 6:16; 2 ಪೇತ್ರ 2:19). ಕೊಲೊಸ್ಸೆಯವರು ಜಾಗ್ರತೆಯಿಂದಿಲ್ಲವಾದಲ್ಲಿ, ಅವರು ತಮ್ಮ ಪೂರ್ವ ಜೀವನ ಶೈಲಿಯಲ್ಲಿದ್ದ ವೇಳೆ ಮಾಡುತ್ತಿದ್ದ ಕೃತ್ಯಗಳಿಗೆ ಹಿಂದಿರುಗುವ ಸಾಧ್ಯತೆಯಿರುತ್ತದೆಂಬುದನ್ನು ಗ್ರಹಿಸಿಕೊಳ್ಳಬೇಕೆಂಬುದು ಪೌಲನ ಬಯಕೆಯಾಗಿತ್ತು. ಅವರು ಈ ಪಾಪಗಳಲ್ಲಿ ಜೀವಿಸಿದ್ದರು ಮತ್ತು ಅವುಗಳು ಜೀವನದ ರೀತಿಯೆಂಬಂತೆ ಅವುಗಳಲ್ಲಿ ನಡೆಯುತ್ತಿದ್ದರು ಆದರೆ ಇನ್ನು ಮೇಲೆ ಆ ವಿಧದಲ್ಲಿ ಅವರು ಜೀವಿಸಬಾರದಿತ್ತು.

## ಭಕ್ತಿಹೀನ ಗುಣವನ್ನು ವಿಸರ್ಜಿಸಿ ಬಿಡುವದು (3:8, 9)

**[8]ಈಗಲಾದರೋ ಕ್ರೋಧ ಕೋಪ ಮತ್ಸರ ದೂಷಣೆ ಬಾಯಿಂದ ಹೊರಡುವ ದುರ್ಭಾಷೆ ಇವುಗಳನ್ನು ವಿಸರ್ಜಿಸಿಬಿಡಿರಿ. [9]ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪುರ್ವಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ.**

### "ಈಗಲಾದರೋ ಇವುಗಳನ್ನು ವಿಸರ್ಜಿಸಿಬಿಡಿರಿ" (3:8)

3:5ರಲ್ಲಿ ಪೌಲನು ಕ್ರೈಸ್ತರಿಗೆ ಅವರ ಗತಕಾಲದ ದುಷ್ಕೃತ್ಯಗಳನ್ನು "ಸತ್ತವುಗಳೆಂದು ಎಣಿಸಿರಿ," ಅಥವಾ "ಸಾಯಿಸಿರಿ" ಎಂದು ಹೇಳಿದನು. ಈ ನಡವಳಿಕೆಯನ್ನು ಅವರು ಮರೆತು ಬಿಟ್ಟಿದ್ದರು, ಆದರೆ ಕೆಟ್ಟ ಬೀಜಗಳನ್ನು ಸಾಯಿಸದಿದ್ದಲ್ಲಿ ಅವುಗಳು ಮೊಳಕೆಯೊಡೆದು ಜೀವಂತಗೊಳ್ಳಬಹುದಿತ್ತು. ಇತರ ವಾಕ್ಯಭಾಗಗಳು ಕ್ರೈಸ್ತರಿಗೆ ತಾವು ಪೂರ್ವದಲ್ಲಿ ಜೀವಿಸುತ್ತಿದ್ದ ರೀತಿಗಳನ್ನು ತೆಗೆದಿಡಬೇಕೆಂದು ಬೋಧಿಸುತ್ತವೆ (ರೋಮಾ 13:12; ಎಫೆಸ 4:22, 25; ಇಬ್ರಿಯ 12:1; ಯಾಕೋಬ 1:21). ಕೊಲೊಸ್ಸೆಯವರು ತಮ್ಮ ಪೂರ್ವದ ಜೀವಿತದ ಪಾಲಿಗೆ ಸತ್ತವರಾಗಿದ್ದರಾದರೂ, ಅವರ ಹಿಂದಿನ ಜೀವನ ಶೈಲಿಗಳನ್ನು ವಿಸರ್ಜಿಸಿ ಬಿಟ್ಟು ಇನ್ನೊಂದು ವಿಧವಾದ ಜೀವನವನ್ನು ಅಳವಡಿಸಿಕೊಳ್ಳಬೇಕಿತ್ತು. ಒಂದು ಅರ್ಥದಲ್ಲಿ, ಅವರು ತಮ್ಮ ಕಪಾಟುಗಳಲ್ಲಿನ ಹಳೇ ಬಟ್ಟೆಗಳನ್ನೆಲ್ಲಾ ಬಿಸಾಡಿ ಬಿಟ್ಟು ಹೊಸ ಉಡುಪುಗಳನ್ನು ಧರಿಸಿಕೊಳ್ಳಲಾರಂಭಿಸಬೇಕಾಗಿತ್ತು.

ಕ್ರಿಸ್ತನಲ್ಲಿ ಹೊಸ ಸೃಷ್ಟಿಗಳಾಗಿರುವದು (2 ಕೊರಿಂಥ 5:17; ಗಲಾತ್ಯ 3:27) ಕ್ರೈಸ್ತರನ್ನು ಪಾಪರಹಿತರನ್ನಾಗಿ ಮಾಡುವದಿಲ್ಲ. ಅದು ಕೇವಲ ನಮ್ಮನ್ನು ಒಂದು ಮಂಡಲದೊಳಗೆ ವರ್ಗಾಯಿಸುವದಾಗಿದ್ದು ಅಲ್ಲಿ ಪಾಪರಹಿತತೆಯನ್ನು ನಾವು ನಮ್ಮ ಗುರಿಯನ್ನಾಗಿ ಮಾಡಿಕೊಳ್ಳಬೇಕಾಗಿರುತ್ತದೆ. ನಾವು ಎಲ್ಲಾ ಅನೈತಿಕ ಕೃತ್ಯಗಳನ್ನು ಮತ್ತು ದುರ್ಗುಣಗಳನ್ನು ಪಕ್ಕಕ್ಕೆ ತೆಗೆದಿಟ್ಟು ನಮ್ಮ ಜೀವಿತಗಳನ್ನು ಸ್ವನಿಗ್ರಹವನ್ನು ತೋರ್ಪಡಿಸಬೇಕಾಗಿರುತ್ತದೆ (ವಚನಗಳು 5, 8, 9). ಇವುಗಳು ನಮಗೆ ಹಾನಿಯನ್ನುಂಟು ಮಾಡುವದು ಮಾತ್ರವೇ ಆಗಿರುವದಿಲ್ಲ, ಆದರೆ ಬೇರೆಯವರಿಗೆ ಸಹ

ಹಾನಿಕರವಾಗಿರಬಲ್ಲವು ಮತ್ತು ಸಂಬಂಧಗಳನ್ನು ವಿನಾಶಗೊಳಿಸಲಬಲ್ಲವು.

"ಕ್ರೋಧ" ಬೇರೆಯವರಿಗೆ ಹಾನಿ ಮಾಡುವಂತೆ ಜನರನ್ನು ನಡಿಸಬಲ್ಲದು ಮತ್ತು ಕೊಲೆ ಮಾಡುವದಕ್ಕೆ ಇಚ್ಛಿಸುವಂತೆ ಸಹ ಮಾಡಬಲ್ಲದು. ಅದು ಹೆಚ್ಚುಕಡಿಮೆ "ಕೋಪ" ಎಂಬುದಕ್ಕೆ ಪರ್ಯಾಯವಾಗಿರುತ್ತದೆ ಆದರೆ ವ್ಯತ್ಯಾಸವೇನೆಂದರೆ ಅದು ಕೋಪದಂತೆ ಏಕಾಏಕಿಯಾಗಿ ಬರುವಂಥದ್ದೂ ಅಲ್ಲ ಅದರಷ್ಟು ಸ್ಫೋಟಕಕಾರಿಯೂ ಆಗಿರುವದಿಲ್ಲ. ಕ್ರೋಧದಲ್ಲಿರುವ ವೇಳೆ, ಜನರು ತಮಗೆ ದಂಡನೆಯನ್ನು ತರಬಲ್ಲಂಥ ಕಾರ್ಯಗಳನ್ನು ಮಾಡುವವರು ಮತ್ತು ಹೇಳುವವರು ಆಗಿದ್ದಾರೆ (ಮತ್ತಾಯ 5:22).

ಮನುಷ್ಯ "ಕೋಪ"ವು ಕೆರಳಿಸಲ್ಪಟ್ಟವರ ಪ್ರತಿಕ್ರಿಯೆಯಾಗಿದ್ದು ಏಕಾಏಕಿ ಮತ್ತು ನಿಯಂತ್ರಿಸಿಕೊಳ್ಳಲಾಗದ ಭಾವದಿಂದ ವರ್ತಿಸುವವರಾಗಿರುತ್ತಾರೆ.

"ಮತ್ಸರ"ವು ಜನರನ್ನು ಹಗೆತನ ಮತ್ತು ಹೊಟ್ಟೆಯುರಿಯ ಮನೋಭಾವವಗಳನ್ನು ಬೆಳೆಸಿಕೊಳ್ಳುವಂತೆ ನಡಿಸಬಲ್ಲದು, ಆ ಮನೋಭಾವಗಳು ಇತರರಿಗೆ ಕೇಡು ತರುವಂತೆ ಅಥವಾ ಇತರರು ನೋವುಗೊಳ್ಳುವದನ್ನು ನೋಡಿ ಆನಂದಿಸುವಂತೆ ಕಾರ್ಯಮಾಡುವ ಹಾಗೆ ಅವರನ್ನು ಪ್ರೇರಣೆಗೊಳಿಸುವವು.

"ದೂಷಣೆ" ಸಾಮಾನ್ಯವಾಗಿ ಹೊಟ್ಟೆಕಿಚ್ಚಿನ, ಮತ್ಸರವುಳ್ಳ, ಮತ್ತು ಕನಿಕರವಿಲ್ಲದ ಹೃದಯಗಳೊಳಗಿಂದ ಬರುವಂಥದ್ದಾಗಿದೆ. ದೂಷಣೆ ಮಾಡುವವರು ಬೇರೆಯವರಿಗೆ ನಿಂದನೆಗಳನ್ನು ಮಾಡುವರು ಅಥವಾ ಜನರು ಯಾರೋ ಒಬ್ಬರ ಅಥವಾ ಯಾವದೋ ಒಂದರ ಬಗ್ಗೆ ಕೆಟ್ಟದ್ದಾಗಿ ಯೋಚಿಸುವವರಾಗಲು ಕಾರಣವಾಗುತ್ತದೆ.

"ದುರ್ಭಾಷೆ," ಅಸಭ್ಯ ಭಾಷೆ ಬೇರೆಯವರಿಗೆ ಹಾನಿಕರವಾಗಿರುತ್ತದೆ. ಅದು ಜನರ ಮನಸ್ಸುಗಳನ್ನು ದುರಾಲೋಚನೆಗಳಿಂದ ತುಂಬಿಸಬಲ್ಲದು ಅಥವಾ ಅವರು ನಿರಾಶೆ ಇಲ್ಲವೆ ಹತಾಶೆಗೊಳ್ಳುವಂತೆ ಮಾಡಬಲ್ಲದು.

ಸುಳ್ಳಾಡುವದು ಸಮಾಜಕ್ಕೆ ನಿರ್ಣಾಯಕವಾಗಿರುತ್ತದೆ ಯಾಕೆಂದರೆ ಅದು ಸಮಾಜವು ಕಟ್ಟಲ್ಪಟ್ಟಿರುವ ಅಸ್ತಿವಾರ ಹಾಗೂ ವಿನ್ಯಾಸವನ್ನು ಅದು ಒಳಗೊಳಗೆ ಹಾಳು ಮಾಡುವದಾಗಿದೆ. ಅದು ಸುಳ್ಳಾಡುವವನನ್ನು ವಿಶ್ವಾಸಾರ್ಹನಲ್ಲದವನ್ನಾಗಿ ಮಾಡುತ್ತದೆ ಮತ್ತು ಆತನಲ್ಲಿ ಬೇರೆಯವರು ಇಟ್ಟಿದ್ದಿರಬಹುದಾದ ವಿಶ್ವಾಸವನ್ನು ನಾಶಗೊಳಿಸುವದು.

ಈ ಅಭ್ಯಾಸಗಳ ಪರಿಣಾಮಗಳ ನಿಮಿತ್ತವಾಗಿ, ಕೊಲೊಸ್ಸೆಯವರು ಅವುಗಳನ್ನು ನಿರ್ಮೂಲಗೊಳಿಸಬೇಕಿತ್ತು; ಅವರು ತಮ್ಮ ಇಡೀ ಮನೋಭಾವಗಳನ್ನು ಮತ್ತು ಜೀವನಕ್ಕೆ ಅನುಸರಿಸುವ ದಾರಿಗಳನ್ನು ಬದಲಾಯಿಸಿಕೊಳ್ಳಬೇಕಾಗಿತ್ತು. ದೀಕ್ಷಾಸ್ನಾನದ ವೇಳೆಯಲ್ಲಿ ಸಂಭವಿಸಿದ ರೂಪಾಂತರವು (2:11-13) ಗತವನ್ನು ಸಂಪೂರ್ಣವಾಗಿ ತೆಗೆದು ಹಾಕಲಿಲ್ಲ. ಈಗ ಬೆಳವಣಿಗೆಯು ಸಂಭವಿಸಬೇಕಿತ್ತು.

> ಈಗಾಗಲೇ ತೋರಿಸಿ ಕೊಟ್ಟಿರುವ ಹಾಗೆ (ನೋಡಿರಿ 2:11, 12), ಅವರು ದೀಕ್ಷಾಸ್ನಾನ ಮಾಡಿಸಿಕೊಂಡ ವೇಳೆ ಕೊಲೊಸ್ಸೆಯವರು "ಪೂರ್ವಸ್ವಭಾವವನ್ನು," ಅಂದರೆ, "ಪಾಪಾಧೀನಸ್ವಭಾವವನ್ನು," ಅವರ ಹಿಂದಿನ ಜೀವನ ಸ್ಥಿತಿಯನ್ನು, ಅವರ ಮುಂಚಿನ ಕೆಟ್ಟಸ್ವಭಾವಗಳನ್ನು, "ಅದರ ಕೃತ್ಯಗಳ ಕೂಡ," 3:5, 8, 9aರಲ್ಲಿ ಪಟ್ಟಿಮಾಡಲಾಗಿರುವ ಅದೇ ಕೃತ್ಯಗಳ ಸಮೇತ ನಿರ್ಣಾಯಕವಾಗಿ ತ್ಯಜಿಸಿ ಬಿಟ್ಟಿದ್ದರು — *ಬಿಚ್ಚಿ ಹಾಕಿದ್ದರು* ಮತ್ತು *ತೆಗೆದು ಹಾಕಿದ್ದರು* (ರೋಮಾ 6:6; ಎಫೆಸ 4:22) ಮತ್ತು ನೂತನ ಸ್ವಭಾವವನ್ನು,

ಕ್ರಿಸ್ತನನ್ನು (ಗಲಾತ್ಯ 3:27), ಅಂದರೆ, ಕ್ರಿಸ್ತನ ಅಂಗಗಳಾಗಿ ವಿಶ್ವಾಸಿಗಳು ಹೊಂದಿರುವಂಥ ಹೊಸ ಸ್ವಭಾವವನ್ನು *ಧರಿಸಿಕೊಂಡಿದ್ದರು*. ಆದ್ದರಿಂದ, ಅವರು ಈಗ ತಮ್ಮ ದೀಕ್ಷಾಸ್ನಾನದಲ್ಲಿ ಮಾಡಿದ ನಂಬಿಕೆಯ ಅರಿಕೆಯನ್ನು ಒಂದು ಭಕ್ತಿಯ ಜೀವನದಿಂದ ಶೃಂಗರಿಸಲಿ.[16]

**ಇವುಗಳನ್ನು ವಿಸರ್ಜಿಸಿಬಿಡಿರಿ** (3:8) ಎಂಬ ಮತ್ತು ನಂತರದಲ್ಲಿನ "ಧರಿಸಿಕೊಳ್ಳಿರಿ" (3:12) ಎಂಬ ಮಾತುಗಳು ಪೌಲನ ಬೇಡಿಕೆಗಳಿಗೆ ಕೊಲೊಸ್ಸೆಯವರನ್ನು ಪ್ರತಿಕ್ರಿಯಿಸುವಂತೆ ಮಾಡುವಂಥ ಬಲವಾದ ಹೇಳಿಕೆಗಳಾಗಿರುತ್ತವೆ. ಇವುಗಳು ಸಹೋದರರು ಯೋಚಿಸಿಕೊಳ್ಳಬೇಕಾದ ಆಯ್ಕೆಗಳಾಗಿರಲಿಲ್ಲ; ಅವುಗಳು ಅಗತ್ಯಗಳಾಗಿದ್ದವು. ಅವುಗಳನ್ನು ನೆರವೇರಿಸುವದಕ್ಕಾಗಿ ತನ್ನ ವಾಚಕರು ಯಥಾರ್ಥವಾದ ಪ್ರಯಾಸ ಪಡಬೇಕೆಂಬುದು ಪೌಲನು ಅಪೇಕ್ಷಿಸಿದ್ದನು. "ಇವುಗಳನ್ನು ವಿಸರ್ಜಿಸಿಬಿಡಿರಿ" ಎಂಬುದು ಸಾರಭೂತವಾಗಿ "ಸತ್ತವುಗಳೆಂದು ಎಣಿಸಿರಿ" ಅಥವಾ ಅಕ್ಷರಶಃ, "ಸಾಯಿಸಿರಿ" ಎಂದರ್ಥವನ್ನು ಹೊಂದಿರುತ್ತದೆ (3:5).

## "ಕ್ರೋಧ ಕೋಪ ಮತ್ಸರ ದೂಷಣೆ ಬಾಯಿಂದ ಹೊರಡುವ ದುರ್ಭಾಷೆ" (3:8)

**ಕ್ರೋಧ** ಎಂಬುದು ὀργή (*orgē*) ಎಂಬ ಪದದ ಅನುವಾದವಾಗಿರುತ್ತದೆ, ಇದು 3:16ರಲ್ಲಿ "ಕೋಪ" ಎಂದು ಸಹ ಅನುವಾದಿಸಲ್ಪಟ್ಟಿರುತ್ತದೆ.[17] ಕೆಲವು ಸಾರಿ ಇದು ದಂಡನೆ ಅಥವಾ ಪ್ರತಿಕಾರದಲ್ಲಿ ಫಲಿತಗೊಳ್ಳಬಹುದಾದ ತಪ್ಪು ಮಾಡುವಿಕೆ ವಿಷಯವಾಗಿ ಒಂದು ಬಲವಾದ ಮತ್ತು ಆಳವಾದ ಬೇಸರವನ್ನು ವ್ಯಕ್ತಗೊಳಿಸುವದು ಎಂಬ ಅರ್ಥವನ್ನು ಕೊಡುತ್ತದೆ. *Orgē*ಯು ಒಂದು ಮನುಷ್ಯ ಭಾವವನ್ನು ಸೂಚಿಸಬಹುದು, ಆದರೆ ಹೆಚ್ಚಾಗಿ ಈ ಪದವು ಅವಿಧೇಯತೆ ಹಾಗೂ ಪಾಪಕ್ಕೆ ವಿರುದ್ಧವಾಗಿ ದೇವರ ತೀರ್ಪನ್ನು ಸೂಚಿಸುವದಕ್ಕಾಗಿ ಬಳಸಲ್ಪಟ್ಟಿರುತ್ತದೆ (ಯೋಹಾನ 3:36; ರೋಮಾ 1:18; 13:4; ಇಬ್ರಿಯ 3:11; 4:3). ಆತನ ಕೋಪವು ನ್ಯಾಯತೀರ್ಪು ಮತ್ತು ದಂಡನೆಯಲ್ಲಿ ಫಲಿತಗೊಳ್ಳುತ್ತದೆ.[18] ಧರ್ಮಶಾಸ್ತ್ರವು "ಕೋಪಕ್ಕೆ" ಗುರಿ ಮಾಡುವದಾಗಿದೆ (*orgē*; ರೋಮಾ 4:15). ಒಂದು ಸರ್ಕಾರಕ್ಕೆ ದಂಡನೆಯನ್ನು ಜಾರಿಗೆ ತರುವ, ಕೆಟ್ಟದ್ದನ್ನು ಮಾಡುವವರ ಮೇಲೆ 'ಕೋಪ'ವನ್ನುಂಟು ಮಾಡುವ ಅಧಿಕಾರವಿರುತ್ತದೆ; ಕ್ರೈಸ್ತರು ಸರ್ಕಾರಕ್ಕೆ ಅಧೀನರಾಗಿರತಕ್ಕದ್ದು ಮತ್ತು ಅಂಥ "ಕೋಪ"ಕ್ಕೆ ಗುರಿ ಪಡಿಸಿಕೊಳ್ಳಕೂಡದು (*orgē*; ರೋಮಾ 13:4, 5). ಕೆಲವೊಂದು ಪರಿಸ್ಥಿತಿಗಳಲ್ಲಿ, ಕ್ರೈಸ್ತರು ಕೋಪಗೊಳ್ಳುವ ಹಕ್ಕು ಹೊಂದಿದ್ದಾರೆ (ಎಫೆಸ 4:26); ಸಾಮಾನ್ಯವಾಗಿ, ಹೇಗೂ, ನಾವು ಕೋಪಗೊಳ್ಳುವದರಿಂದ ದೂರವಿರತಕ್ಕದ್ದು (ಎಫೆಸ 4:31; ಯಾಕೋಬ 1:19, 20). ವಾಡಿಕೆಯ ಪ್ರಕಾರ, ಶಾಸ್ತ್ರಗಳಲ್ಲಿ ಬಣ್ಣಿಸಲಾಗಿರುವ ಕ್ರೋಧವು ಒಂದು ನಿಯಂತ್ರಣದಲ್ಲಿರುವ ಮನೋಭಾವವಾಗಿರುತ್ತದೆ.

ಮುಂದಿನ ಪದ, **ಕೋಪ** (θυμός, *thumos*) ಎಂಬುದು ಒಂದು ಆಳವಾದ ರೋಷದ ಭಾವನೆಗಳು ಎಂಬ ಯೋಚನೆಯನ್ನೊಳಗೊಂಡಿರುತ್ತದೆ. ಕೆಲವು ಸಂದರ್ಭಗಳಲ್ಲಿ ಇದು *orgē* ಯೊಂದಿಗೆ ಪರ್ಯಾಯವಾಗಿ ಕಾಣುತ್ತದೆ; ಆದ್ದರಿಂದ ಇದಕ್ಕೆ ಪ್ರತ್ಯೇಕವಾದ ಅರ್ಥವನ್ನು ಕಲ್ಪಿಸುವದು ಕಷ್ಟಕರವಾಗಿರುತ್ತದೆ. ಈ ಗ್ರೀಕ್ ಪದದ ವಿವಿಧ ರೂಪಗಳು ಕೆಲವೊಂದು ವಾಕ್ಯಭಾಗಗಳಲ್ಲಿ ಒಟ್ಟಾಗಿ ಕಾಣಿಸಿಕೊಳ್ಳುತ್ತವೆ (ರೋಮಾ 2:8; ಎಫೆಸ 4:31;

ಪ್ರಕಟನೆ 16:19; 19:15). ದೇವರ ಕೋಪ ಎಂಬುದಕ್ಕೆ ಅನ್ವಯಿಸಲ್ಪಡುವ ಪ್ರಕಟನೆ ಪುಸ್ತಕ ಮತ್ತು ರೋಮಾ 2:8ರಲ್ಲಿನ ಸಂದರ್ಭಗಳನ್ನು ಹೊರತು ಪಡಿಸಿ, *thumos* ಮನುಷ್ಯನ ಕೋಪ ಅಥವಾ ಸಿಟ್ಟಿಗೆ ಅನ್ವಯಸಲ್ಪಡುತ್ತದೆ (ಲೂಕ 4:28; ಅಪೊಸ್ತಲರ ಕೃತ್ಯಗಳು 19:28; 2 ಕೊರಿಂಥ 12:20; ಗಲಾತ್ಯ 5:20; ಎಫೆಸ 4:31; ಕೊಲೊಸ್ಸೆ 3:8; ಇಬ್ರಿಯ 11:27). ಪ್ರಕಟನೆ ಪುಸ್ತಕದಲ್ಲಿ ಅದು ಸೈತಾನನ ಕೋಪವನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ (ಪ್ರಕಟನೆ 12:12), ಪ್ರಕಟನೆ ಗ್ರಂಥದಲ್ಲಿನ ಬಾಬೇಲಿನ "ಅತಿಜಾರತ್ವ"ವನ್ನು ಸೂಚಿಸಿ (ಪ್ರಕಟನೆ 14:8; 18:3), ಮತ್ತು ದೇವರ ಕೋಪವನ್ನು ಸೂಚಿಸಿ ಬಳಸಲ್ಪಟ್ಟಿದೆ (ಪ್ರಕಟನೆ 14:10, 19; 15:1, 7).

*Orgē* ಯೊಂದಿಗೆ ಜೊತೆಗೂಡುವಾಗ, *thumos* ಎಂಬ ಪದವು ಅರ್ಥವನ್ನು ತೀಕ್ಷ್ಣಗೊಳಿಸುವದಾಗಿದ್ದು ಅದರ ಫಲಿತವಾಗಿ "ಉಗ್ರ ಕೋಪ" ಎಂಬಂತಹ ಅನುವಾದ ಮಾಡಲ್ಪಡುತ್ತದೆ (ಪ್ರಕಟನೆ 16:19; 19:15). ಬೇರೆ ಹಿನ್ನಲೆಗಳೊಳಗೆ ಗ್ರೀಕ್ ಪದವು ದುರ್ಗುಣಗಳ ಪಟ್ಟಿಯಲ್ಲಿ ಕಾಣಿಸಿಕೊಳ್ಳುವ ಸಂದರ್ಭದಲ್ಲಿ (2 ಕೊರಿಂಥ 12:20; ಗಲಾತ್ಯ 5:20; ಎಫೆಸ 4:31; ಕೊಲೊಸ್ಸೆ 3:8), ಅದು "ತೀವ್ರ ಅಸಮಾಧಾನ," "ರೋಷ," ಅಥವಾ "ಕಡುಕೋಪ" ಎಂಬರ್ಥವನ್ನು ಸೂಚಿಸುತ್ತದೆ. ಇದು *orgē* ಗಿಂತ ವ್ಯತ್ಯಾಸವಾಗಿದ್ದು ಹೆಚ್ಚು ತೀವ್ರ ಹಾಗೂ ತೀಕ್ಷ್ಣವಾಗಿರುವದಾಗಿ ಪ್ರತಿಕಾರವನ್ನು ಮಾಡಲು ಹುಡುಕುವದಾಗಿದೆ ಮತ್ತು ನಿಯಂತ್ರಣ ಮಾಡಿಕೊಳ್ಳಲ್ಪಟ್ಟಿರುವ ಕಡುಕೋಪ ಎಂಬ ಯೋಚನೆಯನ್ನೊಳಗೊಂಡಿರಬಹುದು (ಲೂಕ 4:28; ಅಪೊಸ್ತಲರ ಕೃತ್ಯಗಳು 19:28; ಇಬ್ರಿಯ 11:27).

**ಮತ್ಸರ** (κακία, *kakia*) ಎಂಬುದು ನೀಚ, ಭ್ರಷ್ಟ, ಮತ್ತು ದುಷ್ಟತನಗಳಂತಹ ಕೆಳಮಟ್ಟದ ಇಚ್ಛೆಗಳು ವ್ಯಕ್ತಗೊಳ್ಳುವಿಕೆಗಳ ಒಂದು ವರ್ಣನೆಯಾಗಿರುತ್ತದೆ. ಇದು ಬದ್ಧ ದ್ವೇಷವುಳ್ಳ ಹೃದಯಗಳಲ್ಲಿರುವ ಒಂದು ದುಷ್ಟ ಮತ್ತು ಹಾನಿಕಾರಕ ಮನೋಭಾವವಾಗಿರುತ್ತದೆ. ಮತ್ಸರವುಳ್ಳ ಜನರು ತುಚ್ಛ ಭಾವನೆ, ಹೊಟ್ಟೆಯುರಿ, ದುರ್ನೀತಿಯ, ಮತ್ತು ಹಗೆತನವುಳ್ಳಂಥವರಾಗಿರುತ್ತಾರೆ (ರೋಮಾ 1:29; ಎಫೆಸ 4:31; ತೀತನಿಗೆ 3:3; 1 ಪೇತ್ರ 2:1). "ಪ್ರಾಚೀನ ಗ್ರೀಕ್ ನಿಘಂಟುಕಾರನಾದ Suidasನು *kakia*ದ ಅರ್ಥನಿರೂಣೆಯನ್ನು ಹೀಗೆ ಮಾಡಿರುತ್ತಾನೆ: 'ಒಬ್ಬನ ನೆರೆಯವನಿಗೆ ಹಾನಿಯುಂಟು ಮಾಡುವದಕ್ಕೆ ಅತ್ಯುತ್ಸಾಹದಿಂದಿರುವದು.'"[19] ಈ ಪದವು "ಇತರರು ಬಾಧೆ ಪಡುವದನ್ನು ನೋಡುವದಕ್ಕೋಸ್ಕರ ಅವರಿಗೆ ನೋವು, ಗಾಯ, ಅಥವಾ ನಾಶನ ಉಂಟು ಮಾಡುವದು" ಎಂಬುದನ್ನು ಸೂಚಿಸುತ್ತದೆ.

**ದೂಷಣೆ** (βλασφημία, *blasphēmia*, ಇದರಿಂದಲೇ "blasphemy" — ದೇವದೂಷಣೆ ಎಂಬ ಪದವು ಬಂದಿರುತ್ತದೆ), ಎಂಬುದರ ಅರ್ಥವು ಇತರರಿಗೆ ಗಾಯ ಮತ್ತು ಅಪಕೀರ್ತಿಯುಂಟು ಮಾಡುವ ಉದ್ದೇಶದೊಂದಿಗೆ ಮಾತಾಡಲಾದ ಮಾತುಗಳು ಎಂದಾಗಿರುತ್ತದೆ. ಜನರು ಬೇರೆಯವರ ಬಗ್ಗೆ ಕೆಟ್ಟದ್ದಾಗಿ ಯೋಚಿಸುವಂತೆ ಮಾಡುವದಕ್ಕೋಸ್ಕರ ಕೆಟ್ಟ ಸಂಗತಿಗಳನ್ನು ಹೇಳುವವರು ಚಾಡಿಹೇಳುವವರಾಗಿದ್ದಾರೆ ಅಥವಾ ಅವರ ಬಗ್ಗೆ ದೂಷಣೆ ಮಾಡುವವರಾಗಿದ್ದಾರೆ. ಚಾಡಿ ಹೇಳುವದರಲ್ಲಿ ಅಪಪ್ರಚಾರ ಮತ್ತು ಹೀನೈಸುವಂಥ ರೀತಿಯಲ್ಲಿ ಅಗೌರವಕರವಾಗಿ ಅಥವಾ ತುಚ್ಛವಾಗಿ ಮಾತಾಡುವದು

ಸೇರಿರುತ್ತದೆ, ಅದು ಮತ್ತೊಬ್ಬನ ಬಗ್ಗೆ ಕೆಟ್ಟದ್ದಾಗಿ ಮಾತಾಡುವದಕ್ಕೆ ಸಮವಾಗಿರುತ್ತದೆ (ನೋಡಿರಿ ಮತ್ತಾಯ 12:32). ಚಾಡಿ ಹೇಳುವಿಕೆಯಲ್ಲಿ ಒಂದು ಉದ್ದೇಶವು ಇರುತ್ತದೆ: ಯಾರೋ ಒಬ್ಬರ ಅಥವಾ ಯಾವದೋ ಒಂದರ ಬಗ್ಗೆ ಬೇರೆಯವರು ಕೆಟ್ಟದ್ದಾಗಿ ಯೋಚಿಸುವ ರೀತಿಯಲ್ಲಿ ಮಾಡಬೇಕೆಂದು ಉದ್ದೇಶಪೂರ್ವಕವಾಗಿ ಕೆಟ್ಟದ್ದಾಗಿ ಮಾತಾಡುವವರು ಚಾಡಿ ಹೇಳುವವರಾಗಿರುತ್ತಾರೆ. ಈ ಪದವು ದೇವರನ್ನು (ಪ್ರಕಟನೆ 13:6; 16:11, 21), ನಾಮವನ್ನು (ರೋಮಾ 2:24; 1 ತಿಮೊಥೆ 6:1; ಪ್ರಕಟನೆ 16:9), ಆತನ ವಾಕ್ಯವನ್ನು (1 ತಿಮೊಥೆ 6:1; ತೀತನಿಗೆ 2:5), ಪವಿತ್ರಾತ್ಮನನ್ನು (ಮತ್ತಾಯ 12:31; ಮಾರ್ಕ 3:28, 29; ಲೂಕ 12:10), ಅಥವಾ ಇತರ ಜನರನ್ನು (ತೀತನಿಗೆ 3:2) ಬಯ್ಯುವದು ಅಥವಾ ದೂಷಿಸುವದು ಎಂಬದಕ್ಕೆ ಅನ್ವಯವಾಗಬಲ್ಲದು. *Blasphēmia*ದ ವಿವಿಧ ರೂಪಗಳು ಅಪರಾಧಗಳ ವಿವಿಧ ಪಟ್ಟಿಗಳೊಳಗೆ ಸೇರ್ಪಡೆಗೊಳಿಸಲ್ಪಟ್ಟಿರುತ್ತವೆ.[20]

ಕೆಲವರು ಮನಃಪೂರ್ವಕವಾಗಿ ದೇವರನ್ನು ಹಾಗೂ ಬೇರೆಯವರನ್ನು ಅಪನಿಂದೆ ಮಾಡುತ್ತಾರೆ. ಪೌಲನು ಕೊಲೊಸ್ಸೆಯವರನ್ನು ಹಿಂಸೆಗೋಸ್ಕರ ಸಿದ್ಧಗೊಳಿಸುವದಕ್ಕೋಸ್ಕರ ಈ ಪಾಪವನ್ನು ಕುರಿತು ಪ್ರಸ್ತಾಪಿಸಿರಬಹುದಾಗಿದೆ; ದೇವರನ್ನು ದೂಷಿಸುವಂತೆ ಅವರು ಹಿಂಸಕರಿಂದ ಒತ್ತಾಯಿಸಲ್ಪಡುವದು ಆತನಿಗೆ ಇಷ್ಟವಿರಲಿಲ್ಲ. ತಾನು ಕ್ರೈಸ್ತನಾಗುವದಕ್ಕೆ ಮುಂಚೆ, ಸೌಲನು – ಅಪೊಸ್ತಲನಾದ ಪೌಲನು – ದೂಷಿಸುವಂತೆ ಕ್ರೈಸ್ತರ ಮೇಲೆ ಒತ್ತಡ ಹೇರಿದನು (ಅಪೊಸ್ತಲರ ಕೃತ್ಯಗಳು 26:11) ಮತ್ತು ಸ್ವತಃ ತಾನೇ ಒಬ್ಬ ದೂಷಕನಾಗಿದ್ದನು (1 ತಿಮೊಥೆ 1:13).

**ಬಾಯಿಂದ ಹೊರಡುವ ದುರ್ಭಾಷೆ** (αἰσχρολογία, *aischrologia*) ಎಂಬುದು ಗ್ರೀಕ್ ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಇದು ಕೀಳು ಅಭಿರುಚಿಯ ಬಾಷೆಯನ್ನು ಸೂಚಿಸುತ್ತದೆ: ಕೆಟ್ಟ ಮತ್ತು ಮಲೀನ ಸಂಭಾಷಣೆ; ಅಸಂಸ್ಕೃತ ಹಾಸ್ಯೋಕ್ತಿಗಳು; ಅಶ್ಲೀಲ ಭಾವನೆ ಮೂಡಿಸುವ, ಅಸಭ್ಯವಾದ ಮತ್ತು ಲಂಪಟದ ಭಾಷೆ; ನಾಚಿಕೆಗೇಡಿತನದ ಮಾತಾಡುವಿಕೆ; ಮತ್ತು ಹೊಲಸುಹೊಲಸಾಗಿ ಬೈಯುವದು ಎಂಬುದನ್ನು ಸೂಚಿಸುತ್ತದೆ. ಅಷ್ಟುಮಾತ್ರವಲ್ಲದೆ, ಈ ಪದವನ್ನು ಅಶ್ಲೀಲ ಭಾಷೆ, ನಿಂದನೆಯ ಮಾತುಗಳು, ಮತ್ತು ಪೌಲನು ಎಫೆಸ 5:4ರಲ್ಲಿ ತಿಳಿಸಿರುವ ಪ್ರಕಾರ, ಕುಚೋದ್ಯ ಮಾತು ಎಂಬದಾಗಿ ಅರ್ಥನಿರೂಪಿಸಬಹುದು. ಈ ಲಕ್ಷಣವುಳ್ಳಂಥ ಮಾತುಗಳು ಕೊಲೊಸ್ಸೆಯವರ ಬಾಯೊಳಗಿಂದ ಬರಕೂಡದಾಗಿತ್ತು. ಬದಲಾಗಿ, ಪೌಲನು ನಂತರದಲ್ಲಿ ಬರೆದ ಪ್ರಕಾರ, ಅವರ ಸಂಭಾಷಣೆಯು “ಇಂಪಾಗಿಯೂ ರಸವತ್ತಾಗಿಯೂ” ಇರಬೇಕಿತ್ತು (ಕೊಲೊಸ್ಸೆ 4:6). ಒಂದೇ ಬಾಯೊಳಗಿಂದ ಕೆಟ್ಟ ಮಾತು ಮತ್ತು ಒಳ್ಳೇ ಮಾತು ಎರಡೂ ಹೊರಡುವದದು ಸ್ವಾಭಾವಿಕವಾದದ್ದು ಎಂಬದಾಗಿ ಯಾಕೋಬನು ಬರೆಯುತ್ತಾನೆ (ಯಾಕೋಬ 3:9-12).

ಬಹುಶಃ ಪೌಲನು ಅಂಥ ಯೋಚನೆಗಳು – ಅವುಗಳು ಹೃದಯವನ್ನು ಪ್ರವೇಶಿಸಿದಾಗ್ಯೂ – ಬಾಯೊಳಗಿಂದ ಬರಕೂಡದು ಎಂಬದನ್ನು ಸೂಚಿಸುವದಕ್ಕೆ ನಿಮ್ಮ **ಬಾಯಿಂದ ಹೊರಡುವ** ಎಂದು ಬರೆದಿರಬಹುದಾಗಿದೆ. ಅಂಥ ಭಾಷೆಯನ್ನು ಬಳಸದಂತೆ ಇರುವದಕ್ಕೆ ದಾರಿಯೆಂದರೆ ಒಬ್ಬನು ತನ್ನ ಯೋಚನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವದೇ ಆಗಿದೆ.

### “ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪೂರ್ವಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು” (3:9)

9ನೇ ವಚನವು ಪೌಲನು ಅತ್ಯಂಥ ದೀರ್ಘವಾದ ವಾಕ್ಯಗಳಲ್ಲೊಂದರ ಆರಂಭವಾಗಿರುತ್ತದೆ, ಮತ್ತು ಅದು 11ನೇ ವಚನದ ವರೆಗೂ ಮುಂದುವರೆಯುತ್ತದೆ. ಆತನು ತನ್ನ ವಾಚಕರು ಒಬ್ಬರಿಗೊಬ್ಬರು **ಸುಳ್ಳಾಡಬೇಡಿರಿ** (ψεύδομαι, *pseudomai*) ಎಂದಿ ಬರೆದಾಗ, ಆತನು ಕ್ರೈಸ್ತ ಸಮುದಾಯವನ್ನು ಉದ್ದೇಶಿಸಿ ಹೇಳಿದನು. ಹಾಗೆ ಮಾಡುವ ಮೂಲಕ, ಕ್ರೈಸ್ತೇತರರಿಗೆ ಸುಳ್ಳಾಡುವದು ಅಂಗೀಕಾರವಾದದ್ದು ಎಂಬದು ಆತನ ತಾತ್ಪರ್ಯವಾಗಿರಲಿಲ್ಲ. “ಆದಕಾರಣ ಸುಳ್ಳಾಡುವದನ್ನು ಬಿಟ್ಟುಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ” (ಎಫೆಸ 4:25). ದೇವರು ಸುಳ್ಳಾಡುವದಕ್ಕೆ ನೇಮಿಸಿರುವ ದಂಡನೆಯು ಆತನ ದೃಷ್ಟಿಯಲ್ಲಿ ಸುಳ್ಳಾಡುವದು ಎಷ್ಟು ಗಂಭೀರವಾದದ್ದೆಂಬುದನ್ನು ತೋರಿಸುತ್ತದೆ. “ಆದರೆ . . . ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು” (ಪ್ರಕಟನೆ 21:8).

ದಶಾಜ್ಞೆಯಲ್ಲಿ ಸುಳ್ಳು ಹೇಳುವದನ್ನು ನಿಷೇಧಗೊಳಿಸಲಾಗಿದೆ (ವಿಮೋಚನಕಾಂಡ 20:16; ಧರ್ಮೋಪದೇಶಕಾಂಡ 5:20). ಈ ಕಾರಣಕ್ಕಾಗಿ, ಕೆಲವರು ಇದನ್ನು ಕ್ರೋಧ, ಮತ್ಸರ, ದೂಷಣೆ, ಮತ್ತು ದುರ್ಭಾಷೆಗಳಿಗಿಂತಲೂ ಹೆಚ್ಚು ಗಂಭೀರವಾದದ್ದೆಂದು ಭಾವಿಸುತ್ತಾರೆ. 8ನೇ ವಚನದಲ್ಲಿ ಪಟ್ಟಿ ಮಾಡಲಾಗಿರುವ ಐದು ದುರ್ಗುಣಗಳು, ವ್ಯಭೀಚಾರ, ಲೈಂಗಿಕ ಅತ್ಯಾಚಾರ, ಮತ್ತು ಕೊಲೆಗಳಷ್ಟೇ ಪಾಪಭರಿತವಾಗಿರುತ್ತವೆ ಎಂಬುದನ್ನು ಕ್ರೈಸ್ತರು ಗ್ರಹಿಸಿಕೊಳ್ಳತಕ್ಕದ್ದು.

9 ಮತ್ತು 10 ವಚನಗಳಲ್ಲಿ, **ತೆಗೆದಿಟ್ಟು** ಮತ್ತು “ಧರಿಸಿಕೊಳ್ಳಿರಿ” ಎಂಬ ಪದಗಳು ಅನಿಶ್ಚಿತಭೂತಕಾಲ ಕೃದಂತಗಳಾಗಿರುತ್ತವೆ.

> 9-10 ವಚನಗಳಲ್ಲಿ ಎರಡು ಅನಿಶ್ಚಿತಭೂತಕಾಲ ಕೃದಂತಗಳು (“ಕಳಚಿಬಿಟ್ಟು” ಮತ್ತು “ನಿಮ್ಮನ್ನು ಧರಿಸಿಕೊಳ್ಳಿರಿ” [AB]) ಈಗಾಗಲೇ ಸಂಭವಿಸಿರುವ ವಾಸ್ತವಾಂಶವನ್ನು ಒತ್ತಿಹೇಳುತ್ತವೆಂದು ಅರ್ಥಮಾಡಿಕೊಂಡರೆ ಉತ್ತಮವಾಗಿರುತ್ತದೆ: ನಂಬಿಕೆ ಮತ್ತು ದೀಕ್ಷಾಸ್ನಾನದ ಮೂಲಕವಾಗಿ ಎಲ್ಲಾ ವಿಶ್ವಾಸಿಗಳು ಈಗಾಗಲೇ “ಪೂರ್ವಸ್ವಭಾವವನ್ನು” ಕಳಚಿ ಹಾಕಿದ್ದಾರೆ (ಮತ್ತು 3:5, 8-9ರಲ್ಲಿ ಹೆಸರಿಸಲಾಗಿರುವ ದುರ್ಗುಣಗಳ ಸಮೇತವಾಗಿ) ಮತ್ತು “ನೂತನಸ್ವಭಾವವನ್ನು” (ಧರಿಸಿಕೊಂಡಿರುತ್ತಾರೆ ವಚನಗಳು 12-17ರಲ್ಲಿ ಸವಿಸ್ತಾರವಾಗಿ ವಿವರಿಸಲ್ಪಡಲಿರುವ ಜೀವನ ರೀತಿಯನ್ನು ಅಳವಡಿಸಿಕೊಳ್ಳುವದರೊಂದಿಗೆ).[21]

“ತೆಗೆದಿಟ್ಟು” (ἀπεκδύομαι, *apekduomai*) ಮತ್ತು “ಧರಿಸಿಕೊಳ್ಳಿರಿ” (ἐνδύω, *enduō*) ಎಂಬ ಪದಗಳು ಸಾಮಾನ್ಯವಾಗಿ ಬಟ್ಟೆಯನ್ನು ಕಳಚಿಬಿಟ್ಟು ಬೇರೆ ಬಟ್ಟೆಗಳನ್ನು ಧರಿಸಿಕೊಳ್ಳುವದು ಎಂಬದಾಗಿ ಸೂಚಿಸಲು ಬಳಸಲ್ಪಡುತ್ತವೆ. **ಪೂರ್ವಸ್ವಭಾವವು** ತೆಗೆದು ಹಾಕಲ್ಪಟ್ಟಿದೆ, ಮತ್ತು ನೂತನಸ್ವಭಾವವು ಆರಂಭಗೊಂಡಿರುತ್ತದೆ. ಕೊಲೊಸ್ಸೆಯವರ ಹಿಂದಿನ ಭ್ರಷ್ಟ ಜೀವಿತಗಳನ್ನು ಬಣ್ಣಿಸುವವನಾಗಿ ಪಟ್ಟಿ ಮಾಡಿರುವಂಥ ಗುಣಗಳನ್ನು ತೆಗೆದು ಹಾಕತಕ್ಕದ್ದು. ಈ ಜನರು “ದ್ವೇಷ ಮನಸ್ಸುಳ್ಳವರು” ಆಗಿದ್ದರ ಕಾರಣದಿಂದ ಅಂಥ

ಜೀವನಗಳನ್ನು ನಡಿಸಿದರು (1:21), ಆದರೆ ಅವರು ತಾವಿದ್ದಂಥ ಹಳೇ ಜೀವಿತವನ್ನು ತೆಗೆದಿಟ್ಟಿದ್ದರು. ಅವರ ಹಿಂದಿನ ತಪ್ಪುಗಳು ಮತ್ತು ಕೃತ್ಯಗಳು ಇನ್ನು ಮೇಲೆ ಇರಕೂಡದಿತ್ತು; "ಪೂರ್ವಸ್ವಭಾವವು" ತೆಗೆದಿಡಲ್ಪಟ್ಟು ಅದರ ಬದಲಾಗಿ "ನೂತನಸ್ವಭಾವವು" ಧರಿಸಿಕೊಳ್ಳಲ್ಪಟ್ಟಿತ್ತು. ಪೌಲನು ಇದೇ ಯೋಚನೆಯನ್ನು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ವ್ಯಕ್ತಪಡಿಸುತ್ತಾನೆ: "ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತು" (ರೋಮಾ 6:6).

ಪೌಲನು ವ್ಯಕ್ತಿತ್ವವನ್ನು ಸೂಚಿಸುವದಕ್ಕೆ "ಸ್ವಭಾವ" ಎಂಬುದನ್ನು ಬಳಸಿದನು, ಹೊರತು ಒಬ್ಬ ವ್ಯಕ್ತಿಯ ಶಾರೀರಿಕ ಭಾಗವನ್ನು ಸೂಚಿಸುವದಕ್ಕಲ್ಲ. ಒಬ್ಬನು ಕ್ರೈಸ್ತನಾಗುವಾಗ, ಕೆಟ್ಟದ್ದರಿಂದ ಭ್ರಷ್ಟಗೊಂಡು ಪಾಪಕ್ಕೆ ವಶವಾಗಿರುವಂಥ ಪೂರ್ವಸ್ವಭಾವವನ್ನು ತೆಗೆದು ಹಾಕತಕ್ಕದ್ದು. ಪೂರ್ವಸ್ವಭಾವದ ಸ್ಥಾನದಲ್ಲಿ ನೀತಿ ಮತ್ತು ಪರಿಶುದ್ಧತೆಯುಳ್ಳ ವ್ಯಕ್ತಿತ್ವವನ್ನು ಧರಿಸಿಕೊಳ್ಳತಕ್ಕದ್ದು.

ಬೇರೊಂದು ಕಡೆಯಲ್ಲಿ, ಪೌಲನು ಹಿಂದಿನದನ್ನು ತೆಗೆದಿಟ್ಟು ಹೊಸ ಜೀವನವನ್ನು ಧರಿಸಿಕೊಳ್ಳುವ ಯೋಚನೆಯನ್ನು ಬಳಸುತ್ತಾನೆ.[22] ಆತನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ (ಗಲಾತ್ಯ 6:14) ಮತ್ತು ಶರೀರಭಾವದ ಅಭಿಲಾಷೆಗಳು ಹಾಗೂ ಇಚ್ಛೆಗಳ ಸಮೇತ ಅದರ ಪಾಲಿಗೆ (ಗಲಾತ್ಯ 5:24) ಸಾಯುವದರ ಕುರಿತು ಹೇಳುತ್ತಾನೆ. ಆತನು ಆಂತರ್ಯವು ಹೊಸದಾಗುವದರ ಕುರಿತು ಬರೆಯುತ್ತಾನೆ (2 ಕೊರಿಂಥ 4:16; ಎಫೆಸ 3:16). ಅದೇ ಧಾಟಿಯಲ್ಲಿ, ಪೇತ್ರನು ಬರೆದದ್ದೇನೆಂದರೆ ಸ್ತ್ರೀಯರಿಗೆ ಅವರ ಒಳಗಣ ಭೂಷಣವೇ ಅಲಂಕಾರವಾಗಿರಲಿ ಎಂಬದೆ (1 ಪೇತ್ರ 3:4). ನೂತನ ಆಂತರ್ಯವು ಹಳೇ ಉಡುಪನ್ನು ತೆಗೆದಿಟ್ಟು ಹೊರಗಿನ ಹೊಸ ಉಡುಪನ್ನು ಧರಿಸಿಕೊಳ್ಳಬೇಕು.

## ಕ್ರಿಸ್ತನ ಸಾರೂಪ್ಯವುಳ್ಳವರಾಗುವಂತೆ ದಿನೇ ದಿನೇ ನೂತನಗೊಳ್ಳುವದು (3:10, 11)

**10ನೂತನಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ. 11ಇದನ್ನು ಧರಿಸಿಕೊಂಡಿರುವದರಲ್ಲಿ ಗ್ರೀಕನು ಯೆಹೂದ್ಯನು ಎಂಬ ಭೇದವಿಲ್ಲ; ಸುನ್ನತಿ ಮಾಡಿಸಿಕೊಂಡವರು ಸುನ್ನತಿಮಾಡಿಸಿಕೊಳ್ಳದವರು ಎಂಬ ಭೇದವಿಲ್ಲ; ಮ್ಲೇಚ್ಛ ಹೂಣ ಎಂಬ ಹೆಸರುಗಳಿಲ್ಲ; ಆಳು ಒಡೆಯ ಎಂಬ ಭೇದವಿಲ್ಲ. ಆದರೆ ಕ್ರಿಸ್ತನೇ ಸಮಸ್ತರಲ್ಲಿಯೂ ಸಮಸ್ತವೂ ಆಗಿರುವನು.**

### "ನೂತನಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ" (3:10)

10 ಮತ್ತು 11 ವಚನಗಳು ಇತರ ಪತ್ರಿಕೆಗಳಲ್ಲಿ ಪೌಲನು ನೀಡಿರುವ ಹೇಳಿಕೆಗಳೊಂದಿಗೆ ಪರಸ್ಪರ ಸಂಬಂಧ ಹೊಂದಿರುತ್ತವೆ. ಗಲಾತ್ಯದವರು ಕ್ರಿಸ್ತನನ್ನು "ಧರಿಸಿಕೊಂಡರು" ಅಥವಾ ತೊಟ್ಟುಕೊಂಡವರಾದರು ಎಂಬದಾಗಿ ಬರೆದನು. ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ, ಒಂದು ಆತ್ಮೀಕ ಅರ್ಥದಲ್ಲಿ, ಆತನು **ನೂತನಸ್ವಭಾವ** ಮತ್ತು

ಕ್ರಿಸ್ತನನ್ನು ಧರಿಸಿಕೊಳ್ಳುವವನಾಗಿದ್ದಾನೆ (2:12, 13; ಗಲಾತ್ಯ 3:27). ಕೊಲೊಸ್ಸೆಯವರು ಕ್ರಿಸ್ತನಲ್ಲಿ ನೂತನಗೊಂಡಿದ್ದರು. ಅವರು ತಮ್ಮ ಹಳೇ ಉಡುಪಗಳನ್ನು ತೆಗೆದು ಬಿಟ್ಟು ಹೊಸ ಉಡುಪನ್ನು "ಧರಿಸಿಕೊಂಡಿದ್ದರು."

ಈ ಬದಲಾವಣೆಯು ಒಂದು ವ್ಯತ್ಯಾಸವಾದ ಜೀವನ ಶೈಲಿಯಲ್ಲಿ ಫಲಿತಗೊಳ್ಳಬೇಕಿತ್ತು. ನಿಗ್ರಹಿಸಿಕೊಳ್ಳಲಾಗದ ಇಚ್ಛೆಗಳನ್ನು ಹೊಂದಿದ್ದ ಪೂರ್ವಸ್ವಭಾವವು ಇನ್ನು ಮೇಲೆ ಇರಕೂಡದಿತ್ತು; ನೂತನಸ್ವಭಾವವು ಸ್ವನಿಗ್ರಹವನ್ನು ಮಾಡಿಕೊಳ್ಳಬೇಕಿತ್ತು. ಅವರ ಜೀವಿತಗಳಲ್ಲಿ ಕೆಟ್ಟದ್ದಕ್ಕೆ ಅವಕಾಶ ಕೊಡುವದರ ಬದಲಾಗಿ, ಕೊಲೊಸ್ಸೆಯವರು ಒಳ್ಳೇದನ್ನು ಮಾಡುವದಕ್ಕೆ ಅವಕಾಶವನ್ನು ಸೃಷ್ಟಿಸಿಕೊಳ್ಳಬೇಕಾಗಿತ್ತು. ಐಶ್ವರ್ಯವಂತನಾದ ಯೌವನಸ್ಥನಲ್ಲಿದ್ದಂಥ ಸಮಸ್ಯೆಯು ಆತನು ಕೊಲೆಗಾರ, ವ್ಯಭಿಚಾರಿ, ಅಥವಾ ಸುಳ್ಳು ಸಾಕ್ಷಿಗಾರ ಆಗಿದ್ದನೆಂಬುದಾಗಿರಲಿಲ್ಲ, ಆದರೆ ಆತನು ಬಡವರ ಬಗ್ಗೆ ಕಾಳಜಿ ಮಾಡುವಂತಹ ಒಳ್ಳೇ ಕಾರ್ಯಗಳಲ್ಲಿ ಆತನು ಸಕ್ರಿಯನಾಗಿ ಭಾಗಿಯಾಗಿರಲಿಲ್ಲ ಎಂಬುದೇ ಆಗಿತ್ತು (ಮತ್ತಾಯ 19:22).

ಕ್ರಿಸ್ತನ ಹಿಂಬಾಲಕರೆಂದು ಹೇಳಿಕೊಳ್ಳುವ ಅನೇಕರು ಲೋಕದ ದುರ್ಗುಣಗಳನ್ನು ತೆಗೆದು ಹಾಕಿಕೊಂಡಿದ್ದಾರೆ, ಆದರೆ ಅದಷ್ಟೆ ಸಾಕಾಗುವದಿಲ್ಲ. ಯೇಸುವನ್ನು ಹಿಂಬಾಲಿಸುವವರು ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು ಮತ್ತು ಕ್ರೈಸ್ತ ಸೇವೆಯಲ್ಲಿ ಮತ್ತು ಕ್ರೈಸ್ತ ಜೀವಿತದ ಇನ್ನಿತರ ಸಕಾರಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು.

ಕೊಲೊಸ್ಸೆಯವರು ನೂತನಸ್ವಭಾವವನ್ನು ಧರಿಸಿಕೊಂಡಿದ್ದು ಮಾತ್ರವಲ್ಲದೆ, ಅವರು ಶಿಲುಬೆಯ ಮೇಲೆ ಕ್ರಿಸ್ತನು ಹೊಂದಿದ ಮರಣದ ಮೂಲಕ ಸೃಷ್ಟಿಸಲ್ಪಟ್ಟಿದ್ದಂಥ ಸಮುದಾಯದ ಅಂಗವೂ ಸಹ ಆಗಿದ್ದರು (ಎಫೆಸ 2:13). ಆತನ ಮರಣವು ಧರ್ಮಶಾಸ್ತ್ರವನ್ನು ಮತ್ತು ಯೆಹೂದ್ಯರು ಹಾಗೂ ಅನ್ಯಜನರ ಮಧ್ಯದಲ್ಲಿನ ವಿಭಜನೆಗಳನ್ನು ಅಳಿಸಿ ಹಾಕಿತು, ಅವರಿಗೆ ಸಭೆಯೆಂಬ ಒಂದೇ ದೇಹವನ್ನು ಒದಗಿಸಿತ್ತು. ಮುಂಚಿನ ವಿಭಜನೆಗೆ ಕಾರಣಗಳು ಏನೇ ಆಗಿದ್ದಾಗ್ಯೂ, ಜನರು ಕ್ರಿಸ್ತನಲ್ಲಿ ಐಕ್ಯವಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ ಒಂದೇ ದೇಹದಲ್ಲಿ, ಅಂದರೆ ಆತನಲ್ಲಿ ಒಂದಾಗುವ ಹಾಗೆ ಯೇಸುವು ವ್ಯಾಜ್ಯವನ್ನು ಇತ್ಯರ್ಥಗೊಳಿಸಿದನು (ರೋಮಾ 12:5; 1 ಕೊರಿಂಥ 12:13).

### "ಈ ಸ್ವಭಾವವು . . . ದಿನೇದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ" (3:10)

ಪೂರ್ವಸ್ವಭಾವವು ತೆಗೆದಿಡಲ್ಪಟ್ಟು ನೂತನಸ್ವಭಾವವು ಧರಿಸಿಕೊಳ್ಳಲ್ಪಟ್ಟಿದ್ದಾಗ್ಯೂ, ಅನೇಕ ವೇಳೆಗಳಲ್ಲಿ ನೂತನಸ್ವಭಾವಕ್ಕೆ ಹೊಸ ಚೈತನ್ಯವನ್ನು ನೀಡುವದು ಅವಶ್ಯಕವಾಗಿರುತ್ತದೆ. **ದಿನೇದಿನೇ ನೂತನವಾಗುತ್ತಾ** (ἀνακαινούμενον, *anakainoumenon*) ಎಂಬುದು ಗ್ರೀಕ್‌ನಲ್ಲಿ ವರ್ತಮಾನಕಾಲ ರೂಪದ ಕೃದಂತವಾಗಿರುತ್ತದೆ, ನಿರಂತರವಾಗಿರುವ ಕ್ರಿಯೆಯನ್ನು ಸೂಚಿಸುತ್ತದೆ. ನೂತನಸ್ವಭಾವವು ನಿರಂತರವಾಗಿ ವಿನೂತನಗೊಳಿಸಲ್ಪಡುತ್ತದೆ. ದೀಕ್ಷಾಸ್ನಾನದ ವೇಳೆಯಲ್ಲಿ ಜನಿಸಿರುವ ನೂತನಸ್ವಭಾವವು, ಒಂದು ನವಜಾತ ಕೂಸು ಇದ್ದಂತೆ. ಪೂರ್ಣವಾಗಿ ಬೆಳೆದ ಕ್ರೈಸ್ತನಾಗುವ ಸಂಭಾವ್ಯತೆಯು ಇರುತ್ತದೆ, ಆದರೆ ಪರಿಪಕ್ವತೆಯು

ಸಾಧಿಸಲ್ಪಡುವದಕ್ಕೆ ಮುಂಚೆ ಬೆಳವಣಿಗೆಗೆ ಸಮಯವು ಅವಶ್ಯಕವಾಗಿರುತ್ತದೆ.

ರಭಸವಾಗಿ ಹರಿಯುತ್ತಿರುವ ನದಿಯೊಂದರಲ್ಲಿ ಒಬ್ಬನು ಪ್ರವಾಹಕ್ಕೆ ಎದುರಾಗಿ ತನ್ನ ದೋಣಿಯನ್ನು ತಿರುಗಿಸುವದಕ್ಕೆ ಹುಟ್ಟುಹಾಕಲು ವಿಫಲನಾಗುವದಾದರೆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವನು. ಒಂದು ದುರ್ಬಲ ಪ್ರಯಾಸವು ದೋಣಿಯನ್ನು ನಿಲ್ಲುವಂತೆ ಮಾಡಬಹುದು, ಆದರೆ ಅದು ಮುಂದಕ್ಕೆ ಸಾಗುವಂತೆ ಮಾಡಲು ಸಾಕಾದದ್ದಾಗಿರುವದಿಲ್ಲ. ಪ್ರವಾಹದ ಎದುರಾಗಿ ಮುಂದೆ ಸಾಗಬೇಕಿದ್ದರೆ, ನಿರಂತರವಾಗಿ ಹುಟ್ಟುಹಾಕುವದು ಅಗತ್ಯವಾಗಿರುತ್ತದೆ. ಅದೇ ರೀತಿಯಲ್ಲಿಯೇ, ಕ್ರಿಸ್ತನ ಹಿಂಬಾಲಕರಿಗೆ ಇರತಕ್ಕಂಥ ಸದ್ಗುಣಗಳನ್ನು ವೃದ್ಧಿಗೊಳಿಸಿಕೊಳ್ಳುವ ನಿರಂತರವಾದ ಸ್ಥಿತಿಯೊಂದರಲ್ಲಿ ಕ್ರೈಸ್ತರು ಇರಬೇಕಾಗಿರುತ್ತದೆ (2 ಕೊರಿಂಥ 3:18; 10:15; ಎಫೆಸ 4:13, 16; 1 ಥೆಸಲೋನಿಕ 3:12; 4:9, 10; 2 ಥೆಸಲೋನಿಕ 1:3; 1 ತಿಮೊಥೆ 4:15). ಕ್ರಿಸ್ತನು ತನ್ನ ಜೀವಿತವನ್ನು ಅನುದಿನವೂ ನೂತನಗೊಳಿಸುವನೆಂಬದನ್ನು ಪೌಲನು ಕಂಡುಕೊಂಡನು (2 ಕೊರಿಂಥ 4:16). ಕ್ರೈಸ್ತರು ಪವಿತ್ರಾತ್ಮನ ಸಹಾಯದಿಂದ ಬಲಗೊಳಿಸಲ್ಪಡುವರು ಮತ್ತು ನೂತನಗೊಳಿಸಲ್ಪಡುವರು ಎಂಬದಾಗಿ ಆತನು ಕಲಿಸಿದನು (ಎಫೆಸ 3:16; ತೀತನಿಗೆ 3:5).

ನೂತನಗೊಳಿಸಲ್ಪಡುವದು ಕ್ರೈಸ್ತನಿಗೆ **ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ**. ಈ ಪದಗುಚ್ಛದಲ್ಲಿರುವ "ಗೆ" ಎಂಬುದು εἰς (*eis*) ಎಂಬದರ ಅನುವಾದವಾಗಿದ್ದು, ಅದು "ಒಳಗೆ" ಎಂಬ ಮೂಲ ಅರ್ಥವನ್ನೊಳಗೊಂಡಿರುತ್ತದೆ. ಅದು ಒಂದು ಗುರಿಯನ್ನು ತಲುಪುವದು ಅಥವಾ "ದಿಕ್ಕಿನ ಕಡೆಗೆ" ಸಾಗುವದು ಎಂಬ ಅರ್ಥವನ್ನು ಸೂಚಿಸುತ್ತದೆ. ನೂತನಗೊಂಡ ವ್ಯಕ್ತಿಯು ತನ್ನನ್ನು ಸೃಷ್ಟಿಸಿದಾತನ ಸಾರೂಪ್ಯದ "ಪೂರ್ಣಜ್ಞಾನದೊಳಗೆ" ಪ್ರವೇಶಿಸುವನು ಎಂಬದಾಗಿ ಪೌಲನು ಕಲಿಸುತ್ತಿದ್ದಾನೆ. ಪೌಲನು ಈ ಯೋಚನೆಯನ್ನು ಆದಿಯಲ್ಲಿನ ಸೃಷ್ಟಿಕಾರ್ಯದಿಂದ ತೆಗೆದುಕೊಂಡಿರಬಹು ದಾಗಿದೆ (ಆದಿಕಾಂಡ 1:26, 27). ನೂತನಸ್ವಭಾವವು ಕ್ರಿಸ್ತನ "ಸಾರೂಪ್ಯ"ವನ್ನು ಧರಿಸಿಕೊಳ್ಳಲು ಸೃಷ್ಟಿಸಲ್ಪಟ್ಟಿರುತ್ತದೆ ಮತ್ತು ಅನುದಿನವೂ ನೂತನಗೊಳಿಸುವ ಅಗತ್ಯತೆಯನ್ನು ಹೊಂದಿರುತ್ತದೆ. ಈ ನೂತನಗೊಳಿಸುವಿಕೆಯಿಲ್ಲದಿದ್ದಲ್ಲಿ ಹೊಸ ಜೀವನವು ನಿಂತು ಹೋಗುವದು ಮತ್ತು ವ್ಯಕ್ತಿಯು ತನ್ನ ಹಳೇ ದಾರಿಗಳಿಗೆ ಹಿಂದಿರುಗುವನು.

"ಜ್ಞಾನ" (ἐπίγνωσις, *epignōsis*) ಎಂಬುದು ಸುಳ್ಳು ಬೋಧಕರ ರಂಜನಾತ್ಮಕ ನಕಲಿ – ಜ್ಞಾನಕ್ಕೆ ವಿರುದ್ಧ ಹೋಲಿಕೆಯಾಗಿ ಹೇಳಲ್ಪಟ್ಟಿರುತ್ತದೆ. ಜ್ಞಾನ ಮತ್ತು ಕ್ರಿಸ್ತನ ಸಾರೂಪ್ಯ ಹೊಂದಿಕೊಳ್ಳುವದು ಸತತ ನಡೆಯುವಂಥದ್ದು ಮತ್ತು ಪ್ರಗತಿಪರ ಎರಡೂ ಆಗಿರುತ್ತದೆ. ಒಬ್ಬ ವ್ಯಕ್ತಿಯು ಯೇಸುವನ್ನು ಎಷ್ಟು ಉತ್ತಮವಾಗಿ ತಿಳುಕೊಳ್ಳುತ್ತಾನೋ, ಅಷ್ಟು ಅಧಿಕವಾಗಿ ಆತನು ಯೇಸುವಿನಂತಾಗುವನು; ಮತ್ತು ಯೇಸುವಿನ ಹಾಗೆ ಹೆಚ್ಚೆಚ್ಚು ರೂಪಗೊಂಡ ಹಾಗೆ, ಆತನ ಕುರಿತಾದ ಜ್ಞಾನವು ಅವನಿಗೆ ಅಷ್ಟೊಂದು ಅಧಿಕವಾಗುವದು. ಒಬ್ಬ ಕ್ರೈಸ್ತನಿಗೆ ಯೇಸುವಿನ ಸ್ವಭಾವದ ಕುರಿತು ಜ್ಞಾನವಿದ್ದರೆ ಮಾತ್ರವೇ ಆತನು ಯೇಸುವಿನ ಸಾರೂಪ್ಯವುಳ್ಳವನಾಗಬಲ್ಲನು.

## "ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ" (3:10)

ಕೊಲೊಸ್ಸೆಯವರು ತಮ್ಮನ್ನು **ಸೃಷ್ಟಿಸಿದಾತನ** ಕುರಿತ ಜ್ಞಾನವನ್ನು ಗಳಿಸಿಕೊಳ್ಳುವ ಮೂಲಕ ನೂತನಗೊಳ್ಳುವಿಕೆಯನ್ನು ಹುಡುಕಬೇಕಿತ್ತು. ನೂತನಗೊಳಿಸಲ್ಪಡುವಿಕೆಯು

ಜ್ಞಾನವನ್ನುಂಟು ಮಾಡುವದು, ಮತ್ತು ಜ್ಞಾನವು ಇನ್ನಷ್ಟು ನೂತನಗೊಳ್ಳುವದಕ್ಕೆ ತಳಹದಿಯನ್ನು ಒದಗಿಸುತ್ತದೆ. ಈ ಜ್ಞಾನದ ಉದ್ದೇಶವು ಅವರನ್ನು ತನ್ನಲ್ಲಿ ನೂತನ ಜನರನ್ನಾಗಿ ಮಾಡಿದ್ದ ಯೇಸುವಿನ ಸಾರೂಪ್ಯವುಳ್ಳವರಾಗುವ ಹಾಗೆ ಅವರಿಗೆ ಸಹಾಯವನ್ನು ಮಾಡುವದಾಗಿತ್ತು (2 ಕೊರಿಂಥ 5:17). ಇದು ಯೇಸುವಿನ ಮರಣದಲ್ಲಿ ಆತನಿಗೆ ಸರೂಪನಾಗುವದಕ್ಕೆ ಮತ್ತು ದೇವರು ಕ್ರಿಸ್ತ ಯೇಸುವಿನ ಮೂಲಕ ಮೇಲಕ್ಕೆ ಕರೆದು ಇಟ್ಟಿದ್ದ ಗುರಿಯನ್ನು ಮುಟ್ಟುವದಕ್ಕಾಗಿ ಪೌಲನು ಅನುಸರಿಸಿದ ರೀತಿಯಾಗಿತ್ತು (ಫಿಲಿಪ್ಪಿ 3:10-14). ಸತ್ಯಜ್ಞಾನದಲ್ಲಿ ಸ್ಥಿರವಾಗಿ ವೃದ್ಧಿಯಾಗುವ ಮೂಲಕ ನಿರಂತರವಾದ ನೂತನಗೊಳ್ಳುವಿಕೆಯನ್ನು ಉಂಟು ಮಾಡಿಕೊಳ್ಳಬಹುದಾಗಿದೆ. ಒಬ್ಬ ನಟನು ವ್ಯಕ್ತಿಯೊಬ್ಬನ ಪಾತ್ರವನ್ನು ವಾಸ್ತವಿಕತೆಯೊಂದಿಗೆ ನಟಿಸಬೇಕಾದರೆ ಆ ವ್ಯಕ್ತಿಯ ಗುಣಗಳನ್ನು ತಿಳಿದಿರಬೇಕು. ಇನ್ನು ಹೆಚ್ಚಾದ ರೀತಿಯಲ್ಲಿ, ನಾವು ಕ್ರಿಸ್ತನ ಸಾರೂಪ್ಯವುಳ್ಳವರಾಗುವ ಹಾಗೆ ನೂತನಗೊಳ್ಳುವದಕ್ಕೆ ಮುಂಚೆ ಆತನು ಏನಾಗಿದ್ದಾನೆಂಬುದನ್ನು ಅರಿತುಕೊಂಡವರಾಗಿರಬೇಕು.

ಯೇಸುವನ್ನು ಸೇರಿಕೊಂಡು ಆತನನ್ನು ಧರಿಸಿಕೊಂಡ ಬಳಿಕ (ಗಲಾತ್ಯ 3:27), ತಮ್ಮ ಜೀವಿತಗಳು ಯಾರಲ್ಲಿ ಅಳವಡಿಸಲ್ಪಟ್ಟಿರುತ್ತವೋ ಆತನ ಸಾರೂಪ್ಯವುಳ್ಳವರಾಗಿ ಕೊಲೊಸ್ಸೆಯವರು ಹೆಚ್ಚೆಚ್ಚಾಗಿ ಮಾರ್ಪಡಬೇಕಾಗಿತ್ತು. ಪರಿವರ್ತನೆಗೊಂಡಿರುವ ಪ್ರತಿಯೊಬ್ಬರಿಗಿರುವ ಗುರಿಯೇನೆಂದರೆ ಯೇಸುವಿನ ಸ್ವಭಾವವನ್ನು ಬೆಳೆಸಿಕೊಳ್ಳುವ ಹಾಗೆ ಆತನನ್ನೇ ದೃಷ್ಟಿಸುತ್ತಿರುವದೇ. 2 ಕೊರಿಂಥ 3:18ರಲ್ಲಿ ಪೌಲನು ತನ್ನ ಗುರಿಯನ್ನು ಈ ವಿಧದಲ್ಲಿ ವ್ಯಕ್ತಪಡಿಸುತ್ತಾನೆ: "ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ." ಈ ಗುರಿಯನ್ನು ತಲುಪಬೇಕೆಂದರೆ, ನಾವು ಹಿಂದಿನದನ್ನು ಮರೆತುಬಿಟ್ಟು "ದೇವರು ಕ್ರಿಸ್ತನ ಮೂಲಕ ಮೇಲಕ್ಕೆ ಕರೆದು" ನಮ್ಮ ಮುಂದಿಟ್ಟಿರುವ ಗುರಿಯ ಮೇಲೆ ದೃಷ್ಟಿಯನ್ನಿಡಬೇಕು (ಫಿಲಿಪ್ಪಿ 3:13, 14). ನಮ್ಮನ್ನು ಸೃಷ್ಟಿಸಿದಾತನನ್ನು ಅರ್ಥಮಾಡಿಕೊಳ್ಳಬೇಕೆಂದರೆ, ನಾವು ಆತನ ಗುಣಗಳನ್ನು ಬೆಳೆಸಿಕೊಳ್ಳಲಾರಂಭಿಸಬಹುದು.

> . . . ನೂತನಗೊಳಿಸಲ್ಪಡುವಿಕೆಯು ಸೃಷ್ಟಿಕರ್ತನ ಹೋಲಿಕೆಯ ಅನುಗುಣವಾಗಿ ಸಂಭವಿಸುತ್ತದೆ. ಹೀಗೆ ಒಂದು ಕಡೆಯಲ್ಲಿ ಆತನು ಇದು ಒಂದು ಹೊಸ ಸೃಷ್ಟಿಯ ಪ್ರಶ್ನೆಯಾಗಿದ್ದು ಕೆಲವೊಂದು ದುರ್ಗುಣಗಳನ್ನು ಬಿಟ್ಟುಬಿಟ್ಟು ಕೆಲವು ಸದ್ಗುಣಗಳನ್ನು ಧರಿಸಿಕೊಳ್ಳುವದಷ್ಟೆ ಅಲ್ಲ ಎಂಬುದನ್ನು ಆತನು ಒತ್ತಿ ಹೇಳುತ್ತಾನೆ. ಇನ್ನೊಂದು ಕಡೆಯಲ್ಲಿ, ಅದು ಜ್ಞಾನಕ್ಕೆ ನಡಿಸತಕ್ಕದ್ದು ಎಂದು ಆತನು ಹೇಳುತ್ತಾನೆ.[23]

ಕೊಲೊಸ್ಸೆಯವರಿಗೆ ಯಾವ ಜ್ಞಾನದ ಅಗತ್ಯವಿತ್ತು? ಮೋಶೆಯ ಧರ್ಮಶಾಸ್ತ್ರವು ಸಿನಾಯ್ ಪರ್ವತದಲ್ಲಿ ಆತನ ಮೂಲಕವಾಗಿ ಕೊಡಲ್ಪಟ್ಟ ಒಡಂಬಡಿಕೆಯನ್ನೊಳಗೊಂಡಿತ್ತು (ಧರ್ಮೋಪದೇಶಕಾಂಡ 4:2-8, 13), ಅದು ಅವರ ಜೀವಿತಗಳಿಗೆ ಮಾನದಂಡ ಆಗಿರಬಾರದಿತ್ತು. ಯೇಸುವಿನಲ್ಲಿ ಎಲ್ಲಾ ಜ್ಞಾನ ಮತ್ತು ತಿಳುವಳಿಕೆಗಳಿರುತ್ತವೆ; ಆತನು ಅವರನ್ನು ತನ್ನಲ್ಲಿ ಪರಿಪೂರ್ಣಗೊಳಿಸಿದ್ದನು, ಮತ್ತು ಆತನು ಅವರಿಗೋಸ್ಕರ

"ಸಮಸ್ತರಲ್ಲಿಯೂ ಸಮಸ್ತನು" ಆಗಿದ್ದನು (3:11). ಅವರಿಗೆ ಬೇರೆ ಯಾವನೂ ಮತ್ತು ಬೇರೆ ಯಾವದೂ ಅಗತ್ಯವಿರಲಿಲ್ಲ, ಯಾಕೆಂದರೆ ಕ್ರೈಸ್ತ ಜೀವಿತದಕ್ಕೆ ಯೇಸುವೇ ಏಕೈಕ ಮೂಲ ಮತ್ತು ಮಾದರಿ ಆಗಿರುತ್ತಾನೆ. ಯೆಹೂದಿ ಸಂಪ್ರದಾಯಗಳು, ಅತೀಂದ್ರಿಯವಾದ ಧರ್ಮಗಳು, ಗ್ರೀಕ್ ತತ್ವಜ್ಞಾನಗಳು, ಮತ್ತು ವಿಗ್ರಹಾರಾಧಕ ಧರ್ಮಗಳ ಬಳಿಯಲ್ಲಿ ಅವರಿಗೆ ಕೊಡುವದಕ್ಕೆ ಏನೂ ಇರಲಿಲ್ಲ.

ಪವಿತ್ರಾತ್ಮನ ಮೂಲಕವಾಗಿ ಅಪೊಸ್ತಲರಿಗೆ ಮತ್ತು ಪ್ರವಾದಿಗಳಿಗೆ ಕೊಡಲ್ಪಟ್ಟಿದ್ದ ದೇವರ ಪ್ರಕಟನೆಯನ್ನು ಓದುವ ಮೂಲಕ, ಜನರು ಇಂದು ಕ್ರಿಸ್ತನ ಮರ್ಮವನ್ನು "ತಿಳುಕೊಳ್ಳಬಹುದು" (ಎಫೆಸ 3:4). ದೇವಕುಮಾರನ ಜ್ಞಾನದ ಮುಖಾಂತರ, "ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ" ಬೆಳೆಯುವಂತೆ ಕ್ರೈಸ್ತರಿಗೆ ಸಹಾಯ ಮಾಡುವದಕ್ಕೋಸ್ಕರ ದೇವರು ಸಭೆಯಲ್ಲಿ ನಾಯಕರನ್ನು ಹಾಗೂ ಬೋಧಕರನ್ನು ಇಟ್ಟಿರುತ್ತಾನೆ (ಎಫೆಸ 4:13). ನಾವು ದೇವರ ಪ್ರತಿರೂಪವಾಗಿರುವ ಯೇಸುವಿನ ಸ್ವಭಾವವನ್ನು ಧರಿಸಿಕೊಳ್ಳುವದಾದರೆ, ನಾವು ಪರಿಶುದ್ಧರಾಗುವೆವು; ಯಾಕೆಂದರೆ ದೇವರು ಪರಿಶುದ್ಧನಾಗಿದ್ದಾನೆ (1 ಪೇತ್ರ 1:16).

ನಂಬಿಗಸ್ತ ಕ್ರೈಸ್ತರಾಗಿದ್ದರೂ, ನಮ್ಮ ಕ್ರೈಸ್ತ ನಡೆಯ ಬಗ್ಗೆ ಸ್ವಸಂತುಷ್ಠತೆಯುಳ್ಳವರಾಗುವ ಮೂಲಕ ಸ್ಥಿರಮಟ್ಟದ ಸ್ಥಿತಿಯನ್ನು ತಲುಪಕೂಡದು. ಜೀವನಕ್ಕಾಗಿ ನಮಗಿರುವ ಉದಾಹರಣೆಯು — ನಮ್ಮ ಬೆಳವಣಿಗೆಯನ್ನು ಅಳತೆಮಾಡಿಕೊಳ್ಳಬೇಕಾದ ಅಳತೆಗೋಲಾಗಿರುವ ಯೇಸು ಕ್ರಿಸ್ತನು — ನಮಗಿಂತ ಎಷ್ಟೋ ಉನ್ನತ ಮತ್ತು ನಮ್ಮನ್ನು ಮೀರಿದ್ದಾಗಿದೆ. ನಾವು ಯಾವಾಗಲೂ ಮೇಲಕ್ಕೆ ಏರುವವರಾಗಿದ್ದು ಪಕ್ವಗೊಳ್ಳುವದಕ್ಕೆ ಸವಾಲುಗೊಳಿಸಲ್ಪಡುತ್ತೇವೆ, ಆದರೆ ಕ್ರಿಸ್ತನಲ್ಲಿರುವ ಪರಿಪೂರ್ಣತೆಯನ್ನು ನಾವು ಎಂದಿಗೂ ಸಾಧಿಸಿಕೊಳ್ಳಲು ಆಗುವದಿಲ್ಲ. ಯೇಸು ನಮ್ಮಿಂದ ಯಾವದು ನ್ಯಾಯವೋ ಅದನ್ನು ಕೇಳುತ್ತಾನೆ, ಹೊರತು ಯಾವದು ಸುಲಭವೋ ಅದನ್ನು ಅಲ್ಲ.

### "ಇದನ್ನು ಧರಿಸಿಕೊಂಡಿರುವದರಲ್ಲಿ ಗ್ರೀಕನು ಯೆಹೂದ್ಯನು ಎಂಬ ಭೇದವಿಲ್ಲ" (3:11)

ಪೌಲನು ತಿಳಿಸಿದ **ನೂತನವಾಗುವಿಕೆಯು** ಪೂರ್ವಸ್ವಭಾವವನ್ನು ನೂತನಪಡಿಸಿಕೊಳ್ಳುವಿಕೆ ಎಂದಾಗಿರುವದಿಲ್ಲ; ಪೂರ್ವಸ್ವಭಾವವು ಸತ್ತುಹೋಗಿರುತ್ತದೆ. ಬದಲಾಗಿ, ನಿರಂತರವಾಗಿ ನೂತನಗೊಳ್ಳುವ ಅಗತ್ಯವಿರುವದು ನೂತನಸ್ವಭಾವಕ್ಕೇ ಆಗಿರುತ್ತದೆ. ಒಂದು ಕಾರು ಹೊಸದಾಗಿದ್ದಾಗ್ಯೂ, ಚಾಲಕನು ಇಂಧನವನ್ನು ಖಾಲಿ ಮಾಡುವನು ಮತ್ತು ಅದು ಪುನಃ ಪುನಃ ಇಂಧನದಿಂದ ತುಂಬಿಸಲ್ಪಡುವದು ಅಗತ್ಯವಿರುತ್ತದೆ; ಕೆಲವು ಸಂದರ್ಭಗಳಲ್ಲಿ, ಆತನು ಚಕ್ರಗಳನ್ನು, ಬ್ಯಾಟರಿ, ಅಥವಾ ಇನ್ನಿತರ ಭಾಗಗಳನ್ನು ಬದಲಾಯಿಸಿ ಹೊಸ ಭಾಗಗಳನ್ನು ಹಾಕಿಸಿಬೇಕಾಗಬಹುದು.

**ಇದನ್ನು** ಎಂಬುದು ಗ್ರೀಕ್ ಕ್ರಿಯಾವಿಶೇಷಣವಾದ ὅπου (*hopou*) ಎಂಬುದನ್ನು "ಅಲ್ಲಿ" ಎಂದು ಅನುವಾದಿಸುತ್ತದೆ. ಈ ನೂತನಗೊಳಿಸುವಿಕೆಯನ್ನು ಅನುಭವಿಸುವವರು ಒಂದು ಹೊಸ ಆತ್ಮೀಕ ಮಂಡಲದಲ್ಲಿರುವವರಾಗಿದ್ದು "ಅದರಲ್ಲಿ" — ಅಥವಾ "ಅಲ್ಲಿ" — ಕುಲ, ಜನಾಂಗೀಯ, ಪ್ರಾಂತೀಯ, ವರ್ಗ, ಮತ್ತು ಸಾಮಾಜಿಕ ತಾರತಮ್ಯಗಳು ಇರುವದಿಲ್ಲ.

ಮಾನವ ದೃಷ್ಟಿಕೋನದಿಂದ ಈ ಬೇಧಗಳು ಇರುವದೇ ಇಲ್ಲವೆಂಬುದು ಇದರ ಅರ್ಥವಲ್ಲ; ದೇವರ ದೃಷ್ಟಿಯಲ್ಲಿ ಅವುಗಳು ಅಸ್ತಿತ್ವದಲ್ಲಿರುವದಿಲ್ಲ. ಕ್ರೈಸ್ತರು ದೇವರ ಮನಸ್ಸನ್ನು ತಮ್ಮಲ್ಲಿ ಅಳವಡಿಸಿಕೊಳ್ಳಬೇಕು (ಎಫೆಸ 4:1-3). ಕ್ರಿಸ್ತನಲ್ಲಿ ಐಕ್ಯವಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ ನಾವು ಈ ಮಂಡಲದೊಳಗೆ ಪ್ರವೇಶಿಸುತ್ತೇವೆ, ಆತನಲ್ಲಿ ಎಲ್ಲರೂ ಒಂದಾಗುತ್ತಾರೆ (ಗಲಾತ್ಯ 3:26-28). ಪೌಲನು ಈ ಸತ್ಯವನ್ನು 1 ಕೊರಿಂಥ 12:13ರಲ್ಲಿ ಸಹ ವ್ಯಕ್ತಪಡಿಸಿದನು.

ಪೌಲನು 3:5, 8, 9ರಲ್ಲಿ ಪಟ್ಟಿ ಮಾಡಿದಂಥ ದುರ್ಗುಣಗಳು ವಿವಿಧ ಜನಾಂಗೀಯ ಗುಂಪುಗಳ ಮಧ್ಯದಲ್ಲಿ ಪಂಗಡಗಳನ್ನುಂಟು ಮಾಡಿ ಅಡೆತಡೆಗಳನ್ನು ಸೃಷ್ಟಿಸುತ್ತವೆ, ಆದರೆ 3:12-14ರಲ್ಲಿನ ಸದ್ಗುಣಗಳ ಪಟ್ಟಿಯು ಅಂಥ ಪಂಗಡಗಳನ್ನು ನಿರ್ಮೂಲಗೊಳಿಸಲು ಸಹಾಯ ಮಾಡಬಲ್ಲವು. ಅವರು ಕ್ರೈಸ್ತರಾಗುವದಕ್ಕೆ ಮುಂಚೆ ಈ ಗುಂಪುಗಳಲ್ಲಿ ದ್ವೇಷ ಮತ್ತು ಹಗೆತನಗಳು ಇದ್ದವಾದರೂ, ಕೊಲೊಸ್ಸೆಯಲ್ಲಿರುವ ಕ್ರೈಸ್ತ ಸಮುದಾಯದಲ್ಲಿ ಈ ಭೇದಗಳು ಮಾಸಿಹೋಗಿ ಅವರ ಮಧ್ಯದಲ್ಲಿ ಇನ್ನು ಮೇಲೆ ಚಾಲ್ತಿಯಲ್ಲಿರಬಾರದಿತ್ತು.

ಬಹುಶಃ ಪೌಲನು ದೇವರೊಂದಿಗಿನ ಸಂಬಂಧದಲ್ಲಿ ಯೆಹೂದ್ಯರು ಬೇರೆಯವರಿಗಿಂತ ಮುಂದಿನವರಾಗಿರುವದಿಲ್ಲ ಎಂಬುದನ್ನು ಒತ್ತಿ ಹೇಳುವದಕ್ಕೆ ಮೊದಲು ಅನ್ಯಜನರನ್ನು ಪ್ರಸ್ತಾಪಿಸಿರಬಹುದಾಗಿದೆ. ಬೇರೆ ಎರಡು ಪಟ್ಟಿಗಳಲ್ಲಿ, ಪೌಲನು ಮೊದಲು ಯೆಹೂದ್ಯರನ್ನು ಮತ್ತು ನಂತರ ಗ್ರೀಕ್.ರನ್ನು ಪ್ರಸ್ತಾಪಿಸುತ್ತಾನೆ (1 ಕೊರಿಂಥ 12:13; ಗಲಾತ್ಯ 3:28), ಅದು ಸಾಮಾನ್ಯವಾಗಿ ಆತನು ಪಟ್ಟಿ ಮಾಡುವ ಕ್ರಮಾಂಕವಾಗಿತ್ತು (ರೋಮಾ 1:16; 2:9, 10; 3:9. 29. 30; 9:24; 10:12; 1 ಕೊರಿಂಥ 1:24). ಆತನು ತನ್ನ ಬಹುಪಾಲು ವಾಕ್ಯಭಾಗಗಳಲ್ಲಿ, ಜನರನ್ನು **ಯೆಹೂದ್ಯನು**[ರು] ಮತ್ತು **ಗ್ರೀಕನು**[ರು] (ἕλλην, *Hellēn*) – ಅಂದರೆ, ಯೆಹೂದ್ಯರು ಮತ್ತು ಯೆಹೂದ್ಯೇತರರು, ಅಥವಾ ಅನ್ಯಜನರು – ಎಂದು ವಿಭಾಗಿಸಿ ಕೇವಲ ಎರಡು ಗುಂಪುಗಳನ್ನು ಮಾತ್ರವೇ ಹೆಸರಿಸುತ್ತಿದ್ದನು. ಆತನು ಈ ಪಟ್ಟಿಯಲ್ಲಿ ಸಹ ಅದೇ ಯೋಚನೆಯನ್ನು ವ್ಯಕ್ತಪಡಿಸುವ ಉದ್ದೇಶವನ್ನು ಹೊಂದಿದ್ದಿರಬಹುದಾಗಿದೆ, ಆದರೆ ಕ್ರಿಸ್ತನಲ್ಲಿ ಎಲ್ಲಾ ಗುಂಪುಗಳು ಸಮಾನ ಮಟ್ಟದಲ್ಲಿ ಅಂಗೀಕರಿಸಲ್ಪಟ್ಟಿರುತ್ತವೆಂಬುದರ ವಿಸ್ತಾರತೆಯು ಎಷ್ಟೆಂಬುದನ್ನು ದೃಷ್ಟಾಂತಪಡಿಸುವದಕ್ಕೆ ಇತರ ಗುಂಪುಗಳನ್ನು ಪ್ರಸ್ತಾಪಿಸುತ್ತಾನೆ.

ಕ್ರಿಸ್ತನ ಹೊರಗಿರುವ ಪ್ರತಿಯೊಂದು ವ್ಯತ್ಯಾಸವಾದ ಜನರ ಗುಂಪುಗಳನ್ನು ಅಂಗೀಕರಿಸಿಕೊಳ್ಳತಕ್ಕದ್ದು ಮತ್ತು ಕ್ರಿಸ್ತನಲ್ಲಿರುವವರಿಗೆ ಸಮಾನ ಸಂಬಂಧವನ್ನು ಹೊಂದಿರುತ್ತವೆಂಬುದು ಪೌಲನ ತಾತ್ಪರ್ಯವಾಗಿರಲಿಲ್ಲ. ಉಲ್ಲೇಖಿಸಲ್ಪಟ್ಟಿರುವ ಅಡ್ಡಗೋಡೆಗಳು ಕ್ರಿಸ್ತನಲ್ಲಿ ಮಾತ್ರವೇ ಕೆಡವಿ ಹಾಕಲ್ಪಟ್ಟಿರುತ್ತವೆ (ಗಲಾತ್ಯ 3:28). ಯೇಸು ಶಿಲುಬೆಯ ಮೂಲಕ ಅವರನ್ನು ದೇವರೊಂದಿಗೆ ಒಂದೇ ದೇಹವಾಗಿ ಸಂಧಾನಪಡಿಸುವದಕ್ಕೋಸ್ಕರ ಧರ್ಮಶಾಸ್ತ್ರದ ಗೋಡೆಯನ್ನು ಕೆಡವಿ ಹಾಕಿದನು (ಎಫೆಸ 2:14-16). ತಾನು ಪಕ್ಷಪಾತಿಯಲ್ಲ ಮತ್ತು ಕ್ರೈಸ್ತರು ತಮ್ಮೊಳಗೆ ಯೆಹೂದಿ ಕ್ರೈಸ್ತರು ಮತ್ತು ಅನ್ಯಜನಾಂಗದ ಕ್ರೈಸ್ತರು ಎಂದು ಪಕ್ಷಗಳನ್ನು ಸೃಷ್ಟಿಸಿಕೊಳ್ಳಬಾರದೆಂದು ದೇವರು ಪೇತ್ರನಿಗೆ ಕಲಿಸಿ ಕೊಟ್ಟನು (ಅಪೊಸ್ತಲರ ಕೃತ್ಯಗಳು 10:34, 35; 15:7-11). ಪೌಲನು ವಿವಿಧ ಸಂದರ್ಭಗಳಲ್ಲಿ ಕ್ರಿಸ್ತನಲ್ಲಿರುವ ಎಲ್ಲಾ ಜನರ ಮಧ್ಯದಲ್ಲಿ ಐಕ್ಯತೆಯನ್ನು ತರುವದಕ್ಕೆ

ಹೋರಾಟವನ್ನು ಅನುಭವಿಸಿದನು.[24]

ಹೊಸ ಜೀವನವನ್ನು ಪ್ರವೇಶಿಸುವದಕ್ಕಾಗಿ ಇರುವ ದಾರಿಯು ಎಲ್ಲಾ ಜನಾಂಗಗಳಿಗೂ ಒಂದೇ ಆಗಿರುತ್ತದೆ. ಯೆಹೂದ್ಯರು ಪಾಪಿಗಳಾಗಿದ್ದರು ಮತ್ತು ಅನ್ಯಜನರಿಗಿಂತ ಉತ್ತಮರೇನೂ ಆಗಿರಲಿಲ್ಲ (ರೋಮಾ 3:9, 10). ಈ ಕಾರಣಕ್ಕಾಗಿ, ದೇವರು ರಕ್ಷಣೆ ಹೊಂದುವದಕ್ಕಿರುವ ಅರ್ಹತೆಗಳ ವಿಷಯದಲ್ಲಿ (ಅಪೊಸ್ತಲರ ಕೃತ್ಯಗಳು 15:9, 11; ರೋಮಾ 3:22) ಅಥವಾ ದೇವರೊಂದಿಗೆ ಸಂಬಂಧ ಹೊಂದುವ ವಿಷಯದಲ್ಲಿ (ರೋಮಾ 10:12) ಎರಡೂ ಗುಂಪಿನವರಿಗೆ ವ್ಯತ್ಯಾಸವನ್ನು ಮಾಡುವದಿಲ್ಲ. "ದೇವರು ಎಲ್ಲರಿಗೂ ಕರುಣೆಯನ್ನು ತೋರಿಸಬೇಕೆಂಬ ಉದ್ದೇಶವುಳ್ಳವನಾಗಿದ್ದು ಎಲ್ಲರನ್ನೂ ಅವಿಧೇಯತೆಯೆಂಬ ದುಃಸ್ಥಿತಿಯಲ್ಲಿ ಕಟ್ಟಿಹಾಕಿದ್ದಾನೆ" (ರೋಮಾ 11:32).

## "ಸುನ್ನತಿ ಮಾಡಿಸಿಕೊಂಡವರು ಸುನ್ನತಿ ಮಾಡಿಸಿಕೊಳ್ಳದವರು ಎಂಬ ಭೇದವಿಲ್ಲ; ಮ್ಲೇಚ್ಛ ಹೂಣ ಎಂಬ ಹೆಸರುಗಳಿಲ್ಲ" (3:11)

**ಸುನ್ನತಿ ಮಾಡಿಸಿಕೊಂಡವರು** ಎಂಬುದು ಯೆಹೂದಿ ಮತಕ್ಕೆ ಮತಾಂತರಗೊಂಡವರು ಸೇರಿದಂತೆ ಯೆಹೂದ್ಯರನ್ನು ಸೂಚಿಸಿದರೆ, **ಸುನ್ನತಿ ಮಾಡಿಸಿಕೊಳ್ಳದವರು** ಎಂಬುದು ಅನ್ಯಜನರಾದ ಎಲ್ಲಾ ಯೆಹೂದ್ಯೇತರರನ್ನು ಸೂಚಿಸುತ್ತದೆ. ಪೌಲನು ಬಹಳಷ್ಟು ಸಂದರ್ಭಗಳಲ್ಲಿ "ಸುನ್ನತಿ ಮಾಡಿಸಿಕೊಳ್ಳದವರು" ಎಂಬುದಕ್ಕೆ ಮುಂಚೆ "ಸುನ್ನತಿ ಮಾಡಿಸಿಕೊಂಡವರು" ಎಂಬುದನ್ನು ಉಲ್ಲೇಖಿಸಿದನು, ಯಾಕೆಂದರೆ ಪಟ್ಟಿಯಲ್ಲಿ ಮೊದಲು ಹೆಸರಿಸಲ್ಪಡುವದು ಸುನ್ನತಿ ಮಾಡಿಸಿಕೊಂಡಿರುವ ಧರ್ಮಶಾಸ್ತ್ರಾಧೀನರಾಗಿರುವವರಿಗೆ ಹೆಚ್ಚಾದ ಗೌರವವನ್ನು ತೋರಿಸುವದಾಗಿತ್ತು (ನೋಡಿರಿ ರೋಮಾ 4:9-12; 1 ಕೊರಿಂಥ 7:18, 19; ಗಲಾತ್ಯ 5:6; 6:15). ಹೇಗೂ, ಎರಡು ಸಂದರ್ಭಗಳಲ್ಲಿ ಆತನು ಕ್ರಿಸ್ತನಲ್ಲಿ ಈ ಭೇದವು ಇರುವದಿಲ್ಲ ಎಂಬುದನ್ನು ಒತ್ತಿ ಹೇಳುವದಕ್ಕಾಗಿ ಆ ಶ್ರೇಣಿಯನ್ನು ಹಿಮ್ಮೊಗವಾಗಿ ಬರೆಯುತ್ತಾನೆ (ಗಲಾತ್ಯ 2:7; ಎಫೆಸ 2:11). 1 ಕೊರಿಂಥ 7:18ರಲ್ಲಿ, ಆತನು ಮೊದಲು ಸುನ್ನತಿಯುಳ್ಳವನನ್ನು ಹೆಸರಿಸಿದನು ಮತ್ತು ನಂತರ 18 ವಚನದಲ್ಲಿ ಶ್ರೇಣಿಯನ್ನು ಹಿಮ್ಮೊಗಗೊಳಿಸುತ್ತಾನೆ.

ಸಾಂಸ್ಕೃತಿಕವಾಗಿ ಹಿಂದುಳಿದ ಪರದೇಶಸ್ಥರನ್ನು ಯೆಹೂದ್ಯರು **ಮ್ಲೇಚ್ಛ**[ರು] ಮತ್ತು **ಹೂಣ**[ರು] ಕರೆಯುತ್ತಿದ್ದರು, ಅದೇ ವೇಳೆಯಲ್ಲಿ "ಸುನ್ನತಿ ಮಾಡಿಸಿಕೊಳ್ಳದವರು" ಎಂಬುದು ನಾಗರಿಕ ಹಾಗೂ ಅನಾಗರಿಕರಾದ ಯೆಹೂದ್ಯೇತರರನ್ನು ಸೂಚಿಸುತ್ತಿತ್ತು. ಗ್ರೀಕ್‌ರು ಗ್ರೀಕ್‌ರಲ್ಲದ ಮಿಕ್ಕ ಎಲ್ಲರನ್ನೂ – ಪ್ರಾರಂಭದಲ್ಲಿ, ರೋಮನ್ನರನ್ನು ಸಹ – ಮ್ಲೇಚ್ಛರು ಎಂಬದಾಗಿ ಪರಿಗಣಿಸಿದ್ದರು. ಅನಂತರದಲ್ಲಿ, ಅವರು ಗ್ರೀಕ್ ಸಂಸ್ಕೃತಿಯನ್ನು ಅಂಗೀಕರಿಸಿಕೊಳ್ಳಲಾರಂಭಿಸಿದಾಗ, ರೋಮನ್ನರನ್ನು ಸಹ "ಗ್ರೀಕ್‌ರು" ಎಂದು ಕರೆಯಲಾಗುತ್ತಿತ್ತು. ರೋಮನ್ನರು ಮತ್ತು ಗ್ರೀಕ್‌ರು ಗ್ರೇಕೊ – ರೋಮನ್ ಸಂಸ್ಕೃತಿಯ ಹೊರಗಿರುವವರನ್ನೆಲ್ಲಾ ಮ್ಲೇಚ್ಛರು ಎಂಬದಾಗಿ ಕಾಣುತ್ತಿದ್ದರು.

"ಮ್ಲೇಚ್ಛ" (βάρβαρος, *barbaros*) ಎಂಬ ಪದವು ಹೊಸ ಒಡಂಬಡಿಕೆಯೊಳಗೆ ಬೇರೊಂದು ಕಡೆಯಲ್ಲಿ ಕಾಣಿಸಿಕೊಳ್ಳುತ್ತದೆ, ಕೆಲವು ಸಾರಿ ಅದು "ಸ್ಥಳೀಯ ನಾಗರಿಕರು" ಎಂದು ಅನುವಾದಿಸಲ್ಪಟ್ಟಿರುತ್ತದೆ (ಅಪೊಸ್ತಲರ ಕೃತ್ಯಗಳು 28:2, 4; ರೋಮಾ 1:14; 1 ಕೊರಿಂಥ 14:11). ಇದು ಅವಿದ್ಯಾವಂತರಾದ ಮತ್ತು ಸ್ಪುಟವಾಗಿ ಮಾತಾಡಲು

ಗೊತ್ತಿಲ್ಲದವರನ್ನು – ಅಥವಾ ಸಂಸ್ಕೃತಿಯುಳ್ಳವನಿಗೆ ತಿಳಿದಿರುವ ಭಾಷೆಯಲ್ಲಿ ಮಾತಾಡಲು ಬಾರದವರನ್ನು – ಸೂಚಿಸುತ್ತಿತ್ತು. ಯೇಸು "ಮ್ಲೇಚ್ಛ" ಎಂಬ ಭೇದವನ್ನು ಅಳಿಸಿ ಹಾಕಿದನು ಮತ್ತು ಅದರ ಸ್ಥಾನದಲ್ಲಿ "ಸಹೋದರ" ಎಂಬ ಪದವನ್ನು ತಂದನು.

"ಮ್ಲೇಚ್ಛ[ರು]" ಮತ್ತು "ಹೂಣ[ರು]" 11ನೇ ವಚನದಲ್ಲಿರುವ ಇತರ ಜೋಡಿ ಗುಂಪುಗಳ ರೀತಿಯಲ್ಲಿ ತದ್ವಿರುದ್ಧತೆಯುಳ್ಳ ಜನರ ಗುಂಪುಗಳಾಗಿರಲಿಲ್ಲ. ಹೂಣರು ಮ್ಲೇಚ್ಛರಾಗಿದ್ದರು, ಆದರೆ ಸ್ವಲ್ಪ ಕೀಳಾದವರಾಗಿದ್ದರು, ಯೆಹೂದ್ಯರಿಂದ, ರೋಮನ್ನರಿಂದ ಮತ್ತು ಗ್ರೀಕ್‌ರಿಂದ ಅವರು ತುಚ್ಛ ವಿಧವಾದ ಮ್ಲೇಚ್ಛರು ಎಂದು ಪರಿಗಣಿಸಲ್ಪಟ್ಟಿದ್ದರು. ಇವರು ಕಪ್ಪು ಸಮುದ್ರದ ಸುತ್ತಮುತ್ತಲಲ್ಲಿ ನೆಲೆಸಿದ್ದಂಥ ಅನಾಗರಿಕ ಬುಡಕಟ್ಟು ಜನಾಂಗಗಾಗಿದ್ದರು. ಅವರು ಕಾಡು ಮೃಗಗಳಂತೆ ಬಾಳುತ್ತಿದ್ದ ನಾಗರಿಕತೆಯಿಲ್ಲದ ಜನರಾಗಿದ್ದರೆಂದು Josephus ತಿಳಿಸುತ್ತಾನೆ.[25]

ಹೂಣರ ವಿಷಯವಾಗಿ Herodotus ಹೀಗೆ ಬರೆದನು, "ಅವರು ಯುದ್ಧದಲ್ಲಿ ಕೊಲ್ಲಲ್ಪಟ್ಟ ಪ್ರಥಮ ವೈರಿಯ ರಕ್ತವನ್ನು ಕುಡಿಯುತ್ತಿದ್ದರು, ಮತ್ತು ಕೂದಲು ಸಮೇತವಾದ ತಲೆಬುರುಡೆಯ ಚರ್ಮವನ್ನು ಕೈ ವಸ್ತ್ರನ್ನಾಗಿಯೂ ಕೊಲ್ಲಲ್ಪಟ್ಟವನ ತಲೆ ಬುರುಡೆಯನ್ನು ಕುಡಿಯುವ ಬಟ್ಟಲುಗಳನ್ನಾಗಿಯೂ ಮಾಡಿಕೊಳ್ಳುತ್ತಿದ್ದರು. ಅವರು ಅತ್ಯಂಥ ಹೊಲಸಾದ ಚಾಳಿಯನ್ನು ಹೊಂದಿದ್ದರು ಮತ್ತು ಎಂದಿಗೂ ನೀರಿನಿಂದ ತೊಳೆದುಕೊಳ್ಳುತ್ತಿರಲಿಲ್ಲ."[26] ಅವರ ಭ್ರಷ್ಟವಾದ ಸ್ವಭಾವದ ಬಗ್ಗೆ ಇನ್ನು ಕೆಲವು ಬರಹಗಾರರು ಸಾಕ್ಷಿ ಹೇಳುತ್ತಾರೆ. ಅವರು ಒಂದು ಅಸಹ್ಯಕರವಾದ ಜನಾಂಗವಾಗಿದ್ದಾಗ್ಯೂ, ಅವರಲ್ಲಿ ಕ್ರೈಸ್ತರಾದವರನ್ನು ಯೇಸುವಿನ ಇತರ ಹಿಂಬಾಲಕರಂತೆಯೇ ಸಮಾನವಾಗಿ ಕಾಣಲಾಗುತ್ತಿತ್ತು. ಸಮಾಜದ ಯಾವದೇ ಭಾಗದ ಜನರು ಕ್ರಿಸ್ತನಲ್ಲಿ ಐಕ್ಯಗೊಳ್ಳಬಹದು, ಅಲ್ಲಿ ಈ ವರ್ಗಗಳು ಅಡ್ಡಗೋಡೆಗಳಂತೆ ಇರುವದಿಲ್ಲ. ಕ್ರೈಸ್ತತ್ವವು ಎಲ್ಲಾ ಭೇದಗಳನ್ನು ಅಳಿಸಿ ಹಾಕಿ ಎಲ್ಲರನ್ನು ಒಂದೇ ಸಹೋದರತ್ವದೊಳಗೆ ಕರೆತರುವದಕ್ಕೆ ಸಹಾಯ ಮಾಡಿತು.

### "ಆಳು ಒಡೆಯ ಎಂಬ ಭೇದವಿಲ್ಲ" (3:11)

**ಆಳು ಒಡೆಯರು** ಸಹ ಕ್ರಿಸ್ತನಲ್ಲಿ ಸಮಾನತೆಯನ್ನು ಕಂಡುಕೊಳ್ಳಬಹುದು, ಆತನು ಅವರ ನಡುವಿನ ಆಳವಾದ ಕಂದಕವನ್ನು ನಿರ್ಮೂಲನೆ ಮಾಡಿ ಅವರು ಸಹೋದರ ಪ್ರೀತಿಯಲ್ಲಿ ಒಂದಾಗುವಂತೆ ಮಾಡಿರುತ್ತಾನೆ. ಶಿಲುಬೆಯ ನಿಮಿತ್ತದಿಂದ ಅವರಿಬ್ಬರೂ ಕ್ರಿಸ್ತನಲ್ಲಿ ಸ್ವತಂತ್ರರಾಗಿದ್ದಾರೆ. ಪೌಲನಿಂದ ಬಳಸಲ್ಪಟ್ಟಿರುವ ಪ್ರಕಾರ, "ಸ್ವತಂತ್ರನು" ಎಂಬುದು ಒಂದು ಕಾಲದಲ್ಲಿ ದಾಸನಾಗಿದ್ದವನಿಗೆ ಅನ್ವಯವಾಗಬಹುದು ಆದರೆ ಎಂದಿಗೂ ದಾಸನಾಗಿ ಇದ್ದಿಲ್ಲದ ವ್ಯಕ್ತಿಯನ್ನು ಸಹ ಅದು ಒಳಗೊಂಡಿರಬಹುದಾಗಿದೆ. ದಾಸತ್ವವು (ಗುಲಾಮಗಿರಿ) ಅಸ್ತಿತ್ವದಲ್ಲಿತ್ತಾದರೂ, ಕ್ರಿಸ್ತನಲ್ಲಿ ಸಿಕ್ಕುವ ಮತ್ತು ಆತನಿಂದ ಬೋಧಿಸಲ್ಪಟ್ಟ ಸಮಾನತೆ ಹಾಗೂ ಪ್ರೀತಿಯ ತತ್ವಗಳು ಆಳುಗಳನ್ನು ಇತರ ಕ್ರೈಸ್ತರೊಂದಿಗೆ ಒಂದುಗೂಡಿಸಿದವು ಮತ್ತು ಅಂತಿಮವಾಗಿ ಅದನ್ನು ನಿರ್ಮೂಲನೆ ಮಾಡುವದರಲ್ಲಿ ಜಯಗೊಂಡವು.

ರೋಮನ್ನರು ಅನೇಕ ಆಳುಗಳನ್ನು ಇಟ್ಟುಕೊಂಡಿದ್ದರು, ಅವರಲ್ಲಿ ಬಹುತೇಕರು ಯುದ್ಧದಲ್ಲಿ ಸೆರೆಯಾಳುಗಳಾಗಿ ತೆಗೆದುಕೊಳ್ಳಲ್ಪಟ್ಟವರೇ ಆಗಿದ್ದರು. "ಕಾನೂನುಬದ್ಧವಾಗಿ ಹೇಳುವದಾದರೆ, ಪ್ರಾಚೀನ ಜಗತ್ತಿನಲ್ಲಿ ಒಬ್ಬ ಆಳು, ಒಬ್ಬ ವ್ಯಕ್ತಿಯಾಗಿರಲಿಲ್ಲ ಆದರೆ ಒಂದು

ಸ್ವತ್ತಿನಂತೆ ಇದ್ದನು, Aristotleನ ಪ್ರಕಾರ, 'ಒಂದು ಜೀವವುಳ್ಳ ಸಾಧನ' ಎಂಬಂತಿದ್ದನು . . ."[27] ಕೆಲವು ಸಾರಿ ಆಳುಗಳು ತಮ್ಮನ್ನು ಪ್ರಾಣಿಗಳಿಗಿಂತ ನೋಡಿಕೊಳ್ಳುತ್ತಿದ್ದ ಒಡೆಯರಿಗಿಂತಲೂ ಹೆಚ್ಚು ನಾಗರಿಕರಂತೆ ನಡೆದುಕೊಳ್ಳುತ್ತಿದ್ದರು. ಕೆಲವರು ತಮ್ಮ ಸ್ವಾತಂತ್ರ್ಯವನ್ನು ಖರೀದಿಸಿಕೊಳ್ಳುವದಕ್ಕೆ ಶಕ್ತರಾಗಿರುತ್ತಿದ್ದರು ಅಥವಾ ವಿಶೇಷ ಸೇವೆಯ ಕಾರಣದಿಂದ ಒಂದು ದಯೆಯ ರೂಪದಲ್ಲಿ ಸ್ವಾತಂತ್ರ್ಯವನ್ನು ಪಡೆದುಕೊಳ್ಳುತ್ತಿದ್ದರು. ಕ್ಲೌದಿಯ ಚಕ್ರವರ್ತಿಯ ತಾಯಿಯಾದ Antoniaಳ ದಾಸನಾಗಿದ್ದ ಫೆಲಿಕ್ಸನ ವಿಷಯದಲ್ಲಿ ಇದು ಸತ್ಯವಾಗಿತ್ತು.

ಜನರು ಲೋಕದಲ್ಲೆಲ್ಲಾ ಹರಡುವಂತಾಗಬೇಕೆಂದು ದೇವರು ಮಾನವರ ಭಾಷೆಗಳನ್ನು ಗಲಿಬಿಲಿಗೊಳಿಸಿದನು (ಆದಿಕಾಂಡ 11:1-8). ತೋರುವ ಪ್ರಕಾರ, ಮಾನವ ಜನಾಂಗವು ವಿಭಜನೆಗೊಳ್ಳುವ ಹಾಗೆ ಅದರೆ ಆಗಲೂ ಐಕ್ಯವಾಗಿರುವ ಕುಟುಂಬ ಗುಂಪುಗಳಾಗಿ ಉಳಿಯುವಂಥ ರೀತಿಯಲ್ಲಿ ಆ ಕಾರ್ಯವನ್ನು ಮಾಡಿದನು. ಜನರು ತಮ್ಮ ದುಷ್ಟ ಯೋಜನೆಯನ್ನು ನೆರವೇರಿಸುವದಕ್ಕೆ ಶಕ್ತರಾಗಬಾರದೆಂಬ ಉದ್ದೇಶದಿಂದ ದೇವರು ಅವರನ್ನು ಚದುರಿಸಬೇಕೆಂಬದು ಆತನ ಉದ್ದೇಶವಾಗಿತ್ತು. ಯೇಸುವಿನ ಕೆಲಸವು ವ್ಯತ್ಯಾಸವುಳ್ಳದ್ದಾಗಿತ್ತು: ಆತನು ಜನರನ್ನು ದೇವರನ್ನು ಸೇವಿಸುವಂತೆ ನೀತಿಯಲ್ಲಿ ಐಕ್ಯಗೊಳಿಸುವದಕ್ಕೆ ಬಂದನು. ಆತನು ಸರ್ವರನ್ನೂ ಒಂದು ಭೂಲೋಕದ ಜನಾಂಗವಾಗಿ ಒಂದುಗೂಡಿಸುವದಕ್ಕೋಸ್ಕರ ಬರಲಿಲ್ಲ. ಆತನು ತನ್ನ ಹಿಂಬಾಲಕರು ತನ್ನಲ್ಲಿ ಐಕ್ಯತೆಯನ್ನು ಹೊಂದಿ ಲೋಕದಲ್ಲೆಲ್ಲಾ ತನ್ನ ಹಿಂಬಾಲಕರ ಸಹೋದರತ್ವವನ್ನು ರೂಪಿಸುವದಕ್ಕಾಗಿ ಅವರನ್ನು ಪರಿಶುದ್ಧಗೊಳಿಸಿದನು. ಆತನು ತನ್ನ ದೇಹದಲ್ಲಿ ವಿಭಜನೆಗಳು ಮತ್ತು ಗೋಡೆಗಳು ಇರುವದಕ್ಕೆ ಯಾವದೇ ಅವಕಾಶವನ್ನು ನೀಡಲಿಲ್ಲ.

## "ಆದರೆ ಕ್ರಿಸ್ತನೇ ಸಮಸ್ತರಲ್ಲಿಯೂ ಸಮಸ್ತವೂ ಆಗಿರುವನು" (3:11)

**ಕ್ರಿಸ್ತನೇ ಸಮಸ್ತರಲ್ಲಿಯೂ ಸಮಸ್ತವೂ.** ಯಾವ ಸಮಸ್ತ? ಅಕ್ಷರಶಃ ಅನುವಾದವು "ಕ್ರಿಸ್ತನೇ ಸಮಸ್ತವೂ ಆಗಿದ್ದಾನೆ, ಮತ್ತು ಸಮಸ್ತದಲ್ಲಿಯೂ ಇದ್ದಾನೆ" ಎಂದಾಗಿರುತ್ತದೆ. ವಿಶ್ವವು ಆತನ ಮೇಲೆಯೇ ಅವಲಂಬಿತವಾಗಿರುತ್ತದೆಂಬ ಅರ್ಥದಲ್ಲಿ ಯೇಸುವು "ಸಮಸ್ತವೂ" ಆಗಿದ್ದಾನೆ, ಆತನೇ ಅದನ್ನು ಸೃಷ್ಟಿಸಿದನು ಮತ್ತು ತನ್ನ ಶಕ್ತಿಯ ವಾಕ್ಯದಿಂದ ಅದಕ್ಕೆ ಆಧಾರವಾಗಿದ್ದಾನೆ (ಇಬ್ರಿಯ 1:2, 3). ಆತನು ಕ್ರೈಸ್ತರಿಗೆ ಬೇಕಾದ ಸಲಕ ಆತ್ಮೀಕ ಅಗತ್ಯತೆಗಳನ್ನು ಒದಗಿಸುತ್ತಾನೆಂಬದರಲ್ಲಿ "ಸಮಸ್ತವೂ" ಆಗಿದ್ದಾನೆ. ಆತನು "ಸಮಸ್ತವೂ" ಆಗಿದ್ದಾನೆ ಯಾಕೆಂದರೆ ಆತನ ಪ್ರಸನ್ನತೆ ಮತ್ತು ಶಕ್ತಿಯ ಮೂಲಕ ಸಮಸ್ತವೂ ನಿರ್ವಹಿಸಲ್ಪಡುತ್ತದೆ (ಕೊಲೊಸ್ಸೆ 1:16, 17). ಆತನು "ಸಮಸ್ತವೂ" ಆಗಿದ್ದು ಅದರಲ್ಲಿ ಆತನು ಯಾರಲ್ಲಿ ವಾಸಿಸುವಾಗಿದ್ದಾನೋ ಅವರಿಗೆ ಸಕಲ ಶಾರೀರಿಕ ಮತ್ತು ಆತ್ಮೀಕ ಅಗತ್ಯವನ್ನು ಸಂಧಿಸುತ್ತಾನೆ.

ಆತನು ಅಸ್ತಿತ್ವದಲ್ಲಿರುವ ಸಮಸ್ತದಲ್ಲಿಯೂ ಸಮಸ್ತನಾಗಿದ್ದಾನಾಗಿರುವದು ಮಾತ್ರವಲ್ಲದೆ, ಆತನಲ್ಲಿ ನೂತನಗೊಳಿಸಲ್ಪಟ್ಟಿರುವವರಿಗೆ ಸಹ ಆತನು ಸಮಸ್ತವೂ ಆಗಿರುತ್ತಾನೆ. ಕ್ರೈಸ್ತರು *ಯಾರು* ಮತ್ತು *ಏನಾಗಿದ್ದಾ*ರೆಂಬುದು ಸಂಪೂರ್ಣವಾಗಿ ಆತನ ಮೇಲೆಯೇ ಆಧಾರವಾಗಿರುತ್ತದೆ. ಈ ಕಾರಣಕ್ಕಾಗಿ, ಕ್ರೈಸ್ತ ಸಮುದಾಯದಲ್ಲಿರುವ ವಿವಿಧ ಜನಾಂಗೀಯ ಅಂಗಗಳೊಳಗೆ ವಿಭಜನೆಗಳನ್ನು ಮಾಡಕೂಡದು. ಕ್ರಿಸ್ತನು ತನ್ನ ಜನರನ್ನು

ಒಂದುಗೊಳಿಸುವದಕ್ಕೆ ಅಗತ್ಯವಾದದ್ದೆಲ್ಲವನ್ನು ಹೊಂದಿರುತ್ತಾನೆ.

ಪೌಲನು ಭಾವೋತ್ತೇಜಕವಾದ ಪ್ರಶ್ನೆಯೊಂದನ್ನು ಕೇಳುತ್ತಾನೆ: "ಕ್ರಿಸ್ತನು ವಿಭಾಗವಾಗಿದ್ದಾನೋ?" (1 ಕೊರಿಂಥ 1:13). ಗ್ರೀಕ್‌ನಲ್ಲಿ ಈ ಪ್ರಶ್ನೆಯು ಒಂದು ನಕಾರಾತ್ಮಕ ಉತ್ತರವನ್ನು ಎದುರು ನೋಡುವದಾಗಿ ಕೇಳಲ್ಪಟ್ಟಿರುತ್ತದೆ. ಅದನ್ನ ಹೀಗೆ ಪದವಿನ್ಯಾಸಗೊಳಿಸಬಹುದಾಗಿದೆ: "ಕ್ರಿಸ್ತನು ವಿಭಾಗವಾಗಿಲ್ಲ, ಆಗಿದ್ದಾನೋ?" ಸ್ಪಷ್ಟವಾಗಿ ಉತ್ತರವು "ಇಲ್ಲ, ಆದತನು ವಿಭಾಗವಾಗಿಲ್ಲ" ಎಂದಾಗಿರುತ್ತದೆ. ಆತನು ತನ್ನ ಹಿಂಬಾಲಕರಿಗೆ ಸಮಸ್ತವೂ ಆಗಿದ್ದರೆ ಮತ್ತು ಅವರೆಲ್ಲರಲ್ಲಿ ಇರುವವನಾಗಿದ್ದರೆ, ನಾವು ವಿಭಜನೆಗೊಂಡಿರಬಾರದು ಯಾಕೆಂದರೆ ಆತನು ವಿಭಜನೆಗೊಂಡಿರುವದಿಲ್ಲ. ಅಸ್ತಿತ್ವದಲ್ಲಿರುವಂಥ ಯಾವದೇ ಸಾಮಾಜಿಕ ಅಡೆತಡೆಗಳ ಹೊರತಾಗಿಯೂ, ಕ್ರೈಸ್ತ ಸಮುದಾಯದೊಳಗಿನ ಎಲ್ಲಾ ಅಂಶಗಳು ಐಕ್ಯತೆಯಿಂದಿರಬೇಕು.

ಈ ಸನ್ನಿವೇಶದಲ್ಲಿ "ಸಮಸ್ತವೂ" ಎಂಬುದರಲ್ಲಿನ ಮಿತಿಯಾದ ವರ್ಗವೆಂದರೆ ಬಹುಶಃ ಆತನು ತನ್ನ ಪ್ರತಿಯೊಬ್ಬ ಹಿಂಬಾಲಕರು ಸೇರಿದಂತೆ, ಯಾವದು ಒಳ್ಳೇದೋ ಅದರಲ್ಲೆಲ್ಲಾ ಇರುವವನಾಗಿದ್ದಾನೆ ಎಂದರ್ಥವಾಗಿರಬಹುದು. ಇಲ್ಲಿ ಸೂಚಿಸಲ್ಪಟ್ಟಿರುವದು ಆತನು ಯಾರಲ್ಲಿ ವಾಸಮಾಡುತ್ತಾನೋ ಆ ಎಲ್ಲಾ ವಿಶ್ವಾಸಿಗಳಿಗೆ ಅನ್ವಯವಾಗುತ್ತದೆ (ಯೋಹಾನ 17:23) ಮತ್ತು ಅದು ಆತನ ಹೊರಗಿರುವ ಸಕಲ ಮಾನವ ಜನಾಂಗಕ್ಕೂ ಅನ್ವವಾಗುವದಿಲ್ಲ, ಅವರೊಳಗೆ ಸೈತಾನನು ವಾಸಿಸುತ್ತಾನೆ (ಯೋಹಾನ 8:44; 13:27). ಆತನು ಸಮಸ್ತವೂ ಮತ್ತು ವಿಶ್ವದಲ್ಲಿರುವ ಸಮಸ್ತ ಒಳ್ಳೇದರಲ್ಲಿಯೂ ಇರುವವನಾಗಿರುವದರಿಂದ, ಆತನು ಕ್ರೈಸ್ತರಿಗೆ ಸಮಸ್ತವೂ ಆಗಿದ್ದಾನೆ. ನಾವು ನಂಬಿಗಸ್ತ ಕ್ರೈಸ್ತರಾಗಿದ್ದಲ್ಲಿ, ನಾವು ವಿಶ್ವದಲ್ಲಿರುವ ಒಳ್ಳೇದರ ಭಾಗವಾಗಿರುತ್ತೇವೆ.

## ದೈವಿಕ ಗುಣಗಳನ್ನು ಧರಿಸಿಕೊಳ್ಳುವದು (3:12-14)

**12ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿರುವದರಿಂದ ಕನಿಕರ ದಯೆ ದೀನಭಾವ ಸಾತ್ವಿಕತ್ವ ದೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ. 13ಮತ್ತೊಬ್ಬರ ಮೇಲೆ ತಪ್ಪುಹೊರಿಸುವದಕ್ಕೆ ಕಾರಣವಿದ್ದರೂ ತಪ್ಪುಹೊರಿಸದೆ ಒಬ್ಬರಿಗೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ. 14ಇದೆಲ್ಲಾದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ; ಅದು ಸಮಸ್ತವನ್ನು ಸಂಪೂರ್ಣಮಾಡುವ ಬಂಧವಾಗಿದೆ.**

### "ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿರುವದರಿಂದ" (3:12)

**ಹೀಗಿರಲಾಗಿ** (οὖν, *oun*) ಎಂಬ ಪದವು – "ಆದುದರಿಂದ" ಎಂದು ಅನುವಾದಿಸಲ್ಪಡುವದಾಗಿದ್ದು – ಮುಂಚಿನ ಹೇಳಿಕೆಯನ್ನು ಜ್ಞಾಪಿಸುವದಾಗಿದೆ: "ಕ್ರಿಸ್ತನೇ ಸಮಸ್ತರಲ್ಲಿಯೂ ಸಮಸ್ತನೂ." ಕ್ರಿಸ್ತನು "ಸಮಸ್ತರಲ್ಲಿಯೂ ಸಮಸ್ತ"ನಾಗಿರುವದಕ್ಕೆ ಪ್ರತ್ಯುತ್ತರವಾಗಿ, ಕೊಲೊಸ್ಸೆಯವರು ಸಮಸ್ತಕ್ಕೂ ಸಾಕಾಗುವ ಕ್ರಿಸ್ತನೊಂದಿಗೆ ಸಾಮರಸ್ಯದಲ್ಲಿ ಮತ್ತು ತಕ್ಕುದಾಗಿ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕಾಗಿತ್ತು. ಅಲ್ಲದೆ

ಅವರು ಪೂರ್ವಸ್ವಭಾವವನ್ನು ತೆಗೆದಿಟ್ಟು ನೂತನಸ್ವಭಾವವನ್ನು ಧರಿಸಿಕೊಂಡಿದ್ದರೆಂದು ಆತನು 9 ಮತ್ತು 10 ವಚನಗಳಲ್ಲಿ ಹೇಳಿದ್ದನ್ನು ಪೌಲನು ಸೂಚಿಸುತ್ತಿರಬಹುದಾಗಿದೆ. ಇದನ್ನು ಮಾಡಿದವರಾಗಿ, ಅವರು ನೂತನಸ್ವಭಾವದ ಸದ್ಗುಣಗಳನ್ನು ಧರಿಸಿಕೊಳ್ಳುವವರಾಗಿ ತಮ್ಮ ಜೀವಿತಗಳಲ್ಲಿ ಒಂದು ಹೊಸ ಸ್ವಭಾವವನ್ನು ಸೃಷ್ಟಿಸಿಕೊಳ್ಳಬೇಕಿತ್ತು.

ಕೊಲೊಸ್ಸೆಯಲ್ಲಿರುವ ಕ್ರೈಸ್ತರು ದೇವರಿಂದ **ಆರಿಸಿಕೊಂಡವರೂ** (ἐκλεκτοί, *eklektoi*) ಆಗಿದ್ದರು. ಒಬ್ಬನು ಆರಿಕೊಳ್ಳಲ್ಪಡಬೇಕಾದರೆ ಕೆಲವೊಂದು ಅರ್ಹತೆಗಳನ್ನು ಹೊಂದಿರಬೇಕಾಗಿತ್ತು. ಇದು ಯೂದನ ಬದಲಾಗಿ ಆತನ ಸ್ಥಾನದಲ್ಲಿ ಬೇರೊಬ್ಬನನ್ನು ಆರಿಸಿಕೊಳ್ಳುವದರಲ್ಲಿ ಮತ್ತು ಉಪಚಾರ ಮಾಡುವದಕ್ಕೆ ಏಳು ಮಂದಿಯನ್ನು ಆರಿಸಿಕೊಳ್ಳುವದರಲ್ಲಿ ಅಷ್ಟೆ ಸತ್ಯವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 1:21-25; 6:5). ದೇವರಿಂದ ಆರಿಸಿಕೊಳ್ಳಲ್ಪಡುವದಕ್ಕೆ ಅರ್ಹರಾಗಬೇಕೆಂದರೆ, ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿರತಕ್ಕದ್ದು (ಎಫೆಸ 1:4). ಕ್ರಿಸ್ತನಲ್ಲಿರುವ ಜನರು ಯಾರೆಂದರೆ ಆತನಲ್ಲಿ ಐಕ್ಯವಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರೇ ಆಗಿದ್ದಾರೆ; ಹೀಗೆ ಅವರು ದೇವರಿಂದ ಆರಿಸಿಕೊಂಡವರಾಗಿದ್ದಾರೆ. ಕೊಲೊಸ್ಸೆಯವರು ದೀಕ್ಷಾಸ್ನಾನವನ್ನು ಮಾಡಿಸಿಕೊಂಡಿದ್ದರು (2:12), ಆದ್ದರಿಂದ ಅವರು ಆರಿಸಿಕೊಳ್ಳಲ್ಪಟ್ಟವರೊಳಗೆ ಸೇರಿದ್ದರು. ಕ್ರಿಸ್ತನಿಂದ ಹೊರಗಿರುವವರನ್ನು ದೇವರು ಆರಿಸಿಕೊಂಡಿರುವದಿಲ್ಲ.

"ಆರಿಸಿಕೊಂಡವರು," "ಆದುಕೊಳ್ಳಲ್ಪಟ್ಟವರು," ಮುಂದಾಗಿಯೇ ರಕ್ಷಣೆಗೆ ನೇಮಿಸಲ್ಪಟ್ಟವರಾಗಿರುವದಿಲ್ಲ ಎಂಬುದಕ್ಕೆ ಪುರಾವೆಯು 2 ತಿಮೊಥೆ 2:10ರಲ್ಲಿ ಪೌಲನು ನೀಡುವ ಹೇಳಿಕೆಯಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ: "ಆದಕಾರಣ ದೇವರಾರಿಸಿಕೊಂಡವರು ನನ್ನ ಕೂಡ ಕ್ರಿಸ್ತ ಯೇಸುವಿನಲ್ಲಿರುವ ರಕ್ಷಣೆಯನ್ನು ನಿತ್ಯಪ್ರಭಾವ ಸಹಿತವಾಗಿ ಹೊಂದಬೇಕೆಂದು ನಾನು ಅವರಿಗೋಸ್ಕರ ಎಲ್ಲವನ್ನೂ ತಾಳಿಕೊಳ್ಳುತ್ತೇನೆ." ಆದುಕೊಳ್ಳಲ್ಪಟ್ಟವರು ಆಗಲೇ ರಕ್ಷಣೆಯನ್ನು ಹೊಂದಿದ್ದಾದರೆ, ಪೌಲನು ಏಕೆ ಅವರು ರಕ್ಷಣೆ ಹೊಂದುವಂತಾಗಬೇಕೆಂದು ಅನೇಕ ಕಷ್ಟಗಳನ್ನು ತಾಳಿಕೊಳ್ಳಬೇಕಿತ್ತು? ರಕ್ಷಣೆ ಹೊಂದಿದವರ ಸಂಖ್ಯೆಯು ಜಗದುತ್ಪತ್ತಿಗೆ ಮುಂಚೆಯೇ ನಿಷ್ಕರ್ಷೆ ಮಾಡಲ್ಪಟ್ಟಿದ್ದರೆ, ಇಸ್ರಾಯೇಲ್ಯರು ರಕ್ಷಣೆ ಹೊಂದಬೇಕೆಂದು ಆತನು ಏಕೆ ಪ್ರಾರ್ಥಿಸುವನು? (ರೋಮಾ 10:1-3). ಮುಂಚೆಯೇ ತೋರಿಸಲ್ಪಟ್ಟಿರುವ ಪ್ರಕಾರ, ಕ್ರಿಸ್ತನಲ್ಲಿರುವವರೇ ಆರಿಸಿಕೊಂಡವರೂ ರಕ್ಷಣೆ ಹೊಂದಿದವರೂ ಆಗಿರುತ್ತಾರೆ. ಜನರು ದೇವರಿಂದ ಆರಿಸಿಕೊಂಡವರಾಗುವ ಹಾಗೆ ದೀಕ್ಷಾಸ್ನಾನದ ಮೂಲಕವಾಗಿ ಕ್ರಿಸ್ತನಲ್ಲಿ ಐಕ್ಯಗೊಳ್ಳುವ ಆಯ್ಕೆಯನ್ನು ಹೊಂದಿರುತ್ತಾರೆ.

ಕ್ರಿಸ್ತನಲ್ಲಿ ಪ್ರವೇಶಿಸುವವರು ಕ್ರಿಸ್ತನ ಸಾರೂಪ್ಯವುಳ್ಳವರಾಗಿ ಮಾರ್ಪಡಿಸಲ್ಪಡುವರೆಂಬದನ್ನು ದೇವರು ಮುಂದಾಗಿಯೇ ನೇಮಿಸಿರುತ್ತಾನೆ (ರೋಮಾ 8:29). ಇವರು ಆತನ ಆರಿಸಿಕೊಂಡ ಜನರಾಗಿರುತ್ತಾರೆ — ಇವರು ಸತ್ಯವನ್ನು ನಂಬುವರು (2 ಥೆಸಲೋನಿಕ 2:13), ಅವರ ರಕ್ಷಣೆಯ ಸುವಾರ್ತೆಯನ್ನು (ಎಫೆಸ 1:13) ನಂಬುವರು ಎಂದು ಆದಿಯಿಂದಲೂ ಆತನು ಮುಂದಾಗಿ ತಿಳಿದುಕೊಂಡಿದ್ದ ಜನರ ಗುಂಪಾಗಿರುತ್ತಾರೆ. ಈ ಸುವಾರ್ತೆಯನ್ನು ನಂಬದವರು ನಿತ್ಯನಾಶನದಿಂದ ದಂಡಿಸಲ್ಪಡುವರು (2 ಥೆಸಲೋನಿಕ 1:7-9). ಜನರಿಗೆ ವಿಧೇಯರಾಗುವ ಅಥವಾ ವಿಧೇಯರಾಗದಿರುವ ಆಯ್ಕೆ ಹೊಂದಿರುತ್ತಾರೆ, ಮತ್ತು ಹಾಗೆ ಮಾಡುವದಕ್ಕೆ ಬಯಸುವ ಯಾವನಾದರೂ "ಜೀವಜಲವನ್ನು ಕ್ರಯವಿಲ್ಲದೆ

ತೆಗೆದುಕೊಳ್ಳಲಿ" (ಪ್ರಕಟನೆ 22:17). ಜನರು ತನ್ನ ಚಿತ್ತಕ್ಕೆ ಪ್ರತಿಕ್ರಿಯೆಯನ್ನು ತೋರಿಸಬೇಕೆಂದು ದೇವರು ಇಚ್ಛಿಸುತ್ತಾನೆ (2 ಪೇತ್ರ 3:9), ಆದರೆ ವಿಧೇಯರಾಗುವಂತೆ ಆತನು ಅವರನ್ನು ಒತ್ತಾಯ ಪಡಿಸುವದಿಲ್ಲ. ಯೇಸುವು ಯೆರೂಸಲೇಮ್‌ನ್ನು ನೋಡಿ ಅತ್ತನು (ಲೂಕ 19:41) ಯಾಕೆಂದರೆ ಅವರನ್ನು ತನ್ನ ಬಳಿಗೆ ತರುವದಕ್ಕೆ ಬಯಸಿದ್ದನು, ಆದರೆ ಅವರು ಆತನ ಬಳಿಗೆ ಬರಲು ಮನಸ್ಸಿಲ್ಲದವರಾಗಿದ್ದರು (ಮತ್ತಾಯ 23:37). ಯೇಸು ಅವರನ್ನು ಆರಿಸಿಕೊಂಡನು, ಆದರೆ ಅವರು ಆತನನ್ನು ನಿರಾಕರಿಸಿದರು. ಪ್ರತಿಯೊಬ್ಬನು ಸ್ವೇಚ್ಛಾ – ಚಿತ್ತವನ್ನು ಹೊಂದಿದ್ದಾನೆ.

ಆದುಕೊಳ್ಳಲ್ಪಟ್ಟವರನ್ನು ಸೂಚಿಸುವದಕ್ಕೆ ಎರಡು ಹೆಚ್ಚುವರಿ ಪದಗಳು ಬಳಸಲ್ಪಟ್ಟಿರುತ್ತವೆ. ಗ್ರೀಕ್ ಪದವಾದ ἅγιοι (*hagioi*) ಎಂಬುದು ಇಲ್ಲಿ **ಪ್ರತಿಷ್ಠಿತರೂ** ಎಂದು ಅನುವಾದಿಸಲ್ಪಟ್ಟಿದ್ದು, ಅದು 1:2, 4, 12, 26ರಲ್ಲಿ "ದೇವಜನರು" ಎಂದು ಸಹ ಅನುವಾದಿಸಲ್ಪಟ್ಟಿರುತ್ತದೆ. **ಪ್ರಿಯರೂ** (ἠγαπημένοι, *ēgapēmenoi*), ಎಂಬದು ಬೇರೆ ಕಡೆಯಲ್ಲಿ ಪೌಲನಿಂದ ನಿಖರವಾಗಿ ಇದೇ ರೂಪದಲ್ಲಿ ಬಳಸಲ್ಪಟ್ಟಿದ್ದು (1 ಥೆಸಲೋನಿಕ 1:4; 2 ಥೆಸಲೋನಿಕ 2:13), ಅವರು ಪ್ರಿಯರಾಗಿದ್ದರು ಮತ್ತು ದೇವರಿಂದ ನಿರಂತರವಾಗಿ ಪ್ರೀತಿಸಲ್ಪಡುತ್ತಿದ್ದರೆಂಬ ಅರ್ಥವನ್ನು ಸೂಚಿಸುತ್ತದೆ. ಈ ಎರಡು ಪದಗಳು ದೇವರೊಂದಿಗೆ ಅವರಿಗಿದ್ದ ಸಂಬಂಧವನ್ನು ವರ್ಣಿಸುವಂಥವುಗಳಾಗಿವೆ.

ಈ ಸಹೋದರರು ದೇವರಿಂದ ಆರಿಸಿಕೊಂಡವರಲ್ಲಿ ಸೇರಿದ್ದರು, "ಹೀಗಿರಲಾಗಿ" – "ಆದುದರಿಂದ" – ಅವರು ದೇವರ "ಪ್ರತಿಷ್ಠಿತರೂ ಪ್ರಿಯರೂ" ಆಗಿರುವವರಿಗೆ ತಕ್ಕದಾಗಿ ಜೀವಿಸಬೇಕಾಗಿತ್ತು. ಅವರು ದೇವರಿಗೆ ವಿಶೇಷವಾಗಿದ್ದರು. ಅವರು ಸಾಮಾನ್ಯ ಮತ್ತು ಸರ್ವಸಾಧಾರಣ ಜನರಾಗಿರಲಿಲ್ಲ, ಆದರೆ ಪ್ರತಿಷ್ಠಿತಗೊಳಿಸಲ್ಪಟ್ಟ (ಪರಿಶುದ್ಧ), ಪ್ರಾಪಂಚಿಕ ದುರ್ಗುಣಗಳಿಂದ ಪ್ರತ್ಯೇಕಗೊಳಿಸಲ್ಪಟ್ಟ ಜನರಾಗಿದ್ದ ಕಾರಣದಿಂದ, ಅವರು ಅತ್ಯುನ್ನತ ಮತ್ತು ಅತ್ಯುತ್ತಮವಾದ ಆತ್ಮೀಕ ಸದ್ಗುಣಗಳಿಗೆ ಉದಾಹರಣೆಯಾಗಿರಬೇಕಾಗಿತ್ತು. ಈ ಸದ್ಗುಣಗಳು ಅವರನ್ನು ಅವರ ಸಮಾಜದಲ್ಲಿ ಅತ್ಯಂಥ ಸಭ್ಯ ಜನರನ್ನಾಗಿ ಮಾಡುವಂಥವುಗಳಾಗಿದ್ದವು.

## "ಕನಿಕರ ದಯೆ ದೀನಭಾವ ಸಾತ್ವಿಕತ್ವ ದೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ" (3:12)

ಕೊಲೊಸ್ಸೆಯವರಿಗೆ ಈಗಾಗಲೇ "ನೂತನಸ್ವಭಾವವನ್ನು ಧರಿಸಿಕೊಂಡವರಾಗಿದ್ದರು" (3:10), ಆದರೆ ಅದು ಅವರ ವ್ಯಕ್ತಿಗಳಲ್ಲಿ ತಕ್ಷಣದ ಬದಲಾವಣೆಯನ್ನು ಉಂಟು ಮಾಡಲಿಲ್ಲ. ಅವರು ನೂತನಸ್ವಭಾವಕ್ಕೆ ಸರಿಹೊಂದುವಂಥ ಕೆಲವು ಸದ್ಗುಣಗಳನ್ನು ಧರಿಸಿಕೊಳ್ಳಬೇಕಿತ್ತು. ಹೊಲಸಾದ, ಪಾಪದಿಂದ ತುಂಬಿದ ಪೋಕರಿಗಳಾಗಿದ್ದಂಥ ಅವರು ಈಗ ಕ್ರಿಸ್ತನ ರಾಜ್ಯದ ಮರ್ಯಾದೆವುಳ್ಳ ನಾಗರಿಕರಾಗಿ ಮಾರ್ಪಡಿಸಲ್ಪಟ್ಟಿದ್ದರು. ಅವರು ತಮ್ಮ ಹಿಂದಿನ ಹೊಲಸಾದ ಉಡುಪುಗಳಲ್ಲೇ ಮುಂದುವರೆಯಲು ಸಾಧ್ಯವಿರಲಿಲ್ಲ, ಆದರೆ ಅವರು ನೂತನ ಜೀವನದ ಕಳಂಕವಿಲ್ಲದ ಉಡುಪುಗಳನ್ನು ಧರಿಸಿಕೊಳ್ಳಬೇಕಿತ್ತು.

**ಧರಿಸಿಕೊಳ್ಳಿರಿ** (ἐνδύσασθε, *endusasthe*) ಎಂಬುದು ಒಂದು ಆಜ್ಞೆಯಾಗಿದ್ದು ವಾಕ್ಯಭಾಗದಲ್ಲಿ ಮುಂದೆ ಹೇಳಲಾಗುವ ಸದ್ಗುಣಗಳನ್ನು ಕೊಲೊಸ್ಸೆಯವರು ಧರಿಸಿಕೊಳ್ಳುವ ಅಗತ್ಯವಿರುತ್ತದೆಂಬುದನ್ನು ಅದು ಒತ್ತಿ ಹೇಳುವದಾಗಿದೆ. ಇದು ಅವರನ್ನು

ದೇವರಿಗೆ ಪ್ರತಿಷ್ಠಿತರನ್ನಾಗಿಯೂ ಪ್ರಿಯರನ್ನಾಗಿಯೂ ಮಾಡಿದ ಬದಲಾಣೆಯೊಂದಿಗೆ ಸಮಂಜಸವಾಗಿರುತ್ತದೆ. ಅವರು ಏನಾಗಿದ್ದಾರೆಂಬುದರ ಕಾರಣದಿಂದ, ಅವರಿಂದ ಆತ್ಮೀಕವಾಗಿ ವ್ಯತ್ಯಾಸವುಳ್ಳವರಾಗಿರುವದನ್ನು ಅಪೇಕ್ಷಿಸಲಾಗಿತ್ತು.

ಪೌಲನಿಂದ ಶಿಫಾರಸ್ಸು ಮಾಡಲ್ಪಟ್ಟಿರುವ ಸದ್ಗುಣಗಳು ಸರಿಯಾಗಿ ಈಗಷ್ಟೆ ಖಂಡಿಸಲಾದ ದುರ್ಗುಣಗಳಿಗೆ ತದ್ವಿರುದ್ಧವಾಗಿರುತ್ತವೆ – ಸಾಮಾಜಿಕ ಲಾವಣ್ಯಗಳು, ಹೊರತು ಸಾಮಾಜಿಕ ಪಾಪಗಳಲ್ಲ.[28] 8 ಮತ್ತು 9 ವಚನಗಳಲ್ಲಿ ದುರ್ಗುಣಗಳಿಲ್ಲದಿರುವಿಕೆ ಮತ್ತು 12ರಿಂದ 14 ವಚನಗಳಲ್ಲಿನ ಸದ್ಗುಣಗಳನ್ನು ಹೊಂದಿರುವಿಕೆಯು ಕ್ರೈಸ್ತ ಗುಣಸ್ವಭಾವದಕ್ಕೆ ಅವಶ್ಯಕವಷ್ಟೆ ಆಗಿರುವದಿಲ್ಲ ಆದರೆ ಐಕ್ಯತೆಗಾಗಿ ಸಹ ಸಾರಭೂತವಾಗಿರುತ್ತವೆ. ಕ್ರೋಧ, ಕೋಪ, ಮತ್ಸರ, ದೂಷಣೆ, ದುರ್ಭಾಷೆ, ಮತ್ತು ಸುಳ್ಳಾಡುವದು ಜನರ ಸಮುದಾಯವೊಂದನ್ನು ಚೂರುಚೂರು ಮಾಡಬಲ್ಲವು; ಇವುಗಳ ಅನುಪಸ್ಥಿತಿಯು ಐಕ್ಯತೆಗೆ ಮೂಲಭೂತವಾಗಿರುತ್ತದೆ. ಕನಿಕರ, ದಯೆ, ದೀನಭಾವ, ಸಾತ್ವಿಕತ್ವ, ದೀರ್ಘಶಾಂತಿ. ಸೈರಣೆ, ಕ್ಷಮಾಪಣೆ, ಮತ್ತು ಪ್ರೀತಿಗಳು ಏಕತೆಯು ಕಟ್ಟಲ್ಪಡುವಂಥ ಅಸ್ತಿವಾರ ಆಗಿರುತ್ತವೆ. ಈ ಸದ್ಗುಣಗಳ ಅಸಡ್ಡೆ ಮಾಡುವಿಕೆ ಮತ್ತು ದುರ್ಗುಣಗಳನ್ನು ನಡಿಸುವಿಕೆಯು ಕೇವಲ ಗಲಿಬಿಲಿ ಹಾಗೂ ವಿಭಜನೆಯನ್ನು ಉಂಟುಮಾಡುತ್ತದೆ.

ಕೊಲೊಸ್ಸೆಯವರು ತಮ್ಮ ಜೀವಿತಗಳಲ್ಲಿ ಅಭಿವೃದ್ಧಿಪಡಿಸಿಕೊಳ್ಳಬೇಕಾಗಿದ್ದ ಸದ್ಗುಣಗಳು ಮೂರು ಗುಂಪುಗಳಲ್ಲಿರುತ್ತವೆ: (1) ಇತರರ ಕಡೆಗೆ ಇರಬೇಕಾದ ಧೋರಣೆ – ಕನಿಕರ, ದಯೆ, ಸಾತ್ವಿಕತ್ವ, ಮತ್ತು ಪ್ರೀತಿ; (2) ತನ್ನ ಕಡೆಗೆ ಇರಬೇಕಾದ ಧೋರಣೆ – ದೀನಭಾವ; ಮತ್ತು (3) ಪೀಡಿಸಲ್ಪಡುವಾಗ ಪ್ರತಿಕ್ರಿಯೆ – ದೀರ್ಘಶಾಂತಿ, ಸೈರಣೆ, ಮತ್ತು ಕ್ಷಮಾಪಣೆ. ಮೊದಲ ಐದು ಸದ್ಗುಣಗಳಲ್ಲಿ ಧೋರಣೆಗಳು ಸೇರಿರುತ್ತವೆ, ಮತ್ತು ಅಂತಿಮ ಮೂರು ಸದ್ಗುಣಗಳಲ್ಲಿ ಬೇರೆ ಜನರಿಗೆ ಮಾಡುವ ಪ್ರತಿಕ್ರಿಯೆಯಗಳು ಸೇರಿರುತ್ತವೆ. ಕೊಲೊಸ್ಸೆಯವರು ಕೆಲವೊಂದು ಗುಣಗಳನ್ನು "ಧರಿಸಿಕೊಳ್ಳಬೇಕಿತ್ತು" (3:12-14) ಮತ್ತು ಕೆಲವೊಂದು ಕಾರ್ಯಗಳನ್ನು ಮಾಡಬೇಕಾಗಿತ್ತು (3:15-17). ಸದ್ಗುಣಗಳು ಹೇಗೆ ಸ್ವತಃ ವ್ಯಕ್ತಿಯ ಮೇಲೆ ಮತ್ತು ಇತರರ ಮೇಲೆ ಪರಿಣಾಮಗಳನ್ನು ಬೀರುತ್ತವೋ ಹಾಗೆಯೇ ಸದ್ಗುಣಗಳು ಸಹ ಪರಿಣಾಮವನ್ನು ಬೀರುತ್ತವೆ.

ಇಲ್ಲಿ **ಹೃದಯ** ಎಂಬುದು καρδία (*kardia*) ಆಗಿರುವದಿಲ್ಲ, ಅದು "ಹೃದಯ" ಎಂಬುದಕ್ಕಾಗಿರುವ ಸಾಮಾನ್ಯವಾದ ಗ್ರೀಕ್ ಪದವಾಗಿದೆ. ಈ ಪದವು σπλάγχνον (*splagchnon*) ಎಂಬುದಾಗಿದ್ದು, ಅದು ಅಕ್ಷರಶಃ "ಕರುಳುಗಳು" ಎಂದರ್ಥವಾಗಿರುತ್ತದೆ (ನೋಡಿರಿ KJV). ಹೆಚ್ಚು ಕಡಿಮೆ ಯಾವಾಗಲೂ ಬಹುವಚನದಲ್ಲಿ ಬಳಸಲ್ಪಡುವ ಈ ಪದವು ಒಬ್ಬ ವ್ಯಕ್ತಿಯ ಒಳಭಾಗದ ಅಂಗಗಳನ್ನು ಸೂಚಿಸುತ್ತದೆ, ಉದಾಹರಣೆಗೆ ಯೂದನ "ಕರುಳುಗಳೆಲ್ಲಾ" ಎಂಬದರಲ್ಲಿ ಅದನ್ನು ಕಾಣುತ್ತೇವೆ (ಅಪೊಸ್ತಲರ ಕೃತ್ಯಗಳು 1:18). ಇದೇ ಪದವು ಫಿಲೆಮೋನನಿಗೆ ಬರೆದ ಪತ್ರಿಕೆಯಲ್ಲಿ (ಫಿಲೆಮೋನ 7, 12, 20ರ ಮೇಲಿನ ಚರ್ಚೆಯನ್ನು ನೋಡಿರಿ) ಮತ್ತು 1 ಯೋಹಾನ 3:17ರಲ್ಲಿ "ಹೃದಯ" ಎಂಬ ಅರ್ಥದಲ್ಲಿರುತ್ತದೆ; ಆದರೆ ಬೇರೆ ಸಂದರ್ಭಗಳಲ್ಲಿ, ಅದು "ಅತ್ಯಂತಕರುಣೆ" ("ಕರುಣೆ" ಎಂದು ಪರಿವರ್ತನೆಗೊಳ್ಳುವ; ಲೂಕ 1:78) ಮತ್ತು "ಪ್ರೀತಿ" ಎಂಬ ಅರ್ಥವನ್ನು ಕೊಡುತ್ತದೆ

(2 ಕೊರಿಂಥ 6:12; 7:15; ಫಿಲಿಪ್ಪಿ 1:8; 2:1). ಪೌಲನು ಇದನ್ನು ಇಲ್ಲಿ ಕನಿಕರವನ್ನು ಸೂಚಿಸುವದಕ್ಕೆ ಬಳಸಿದನು. ಗ್ರೀಕ್ ಮತ್ತು ಇಬ್ರಿಯ ಯೋಚನೆಯಲ್ಲಿ, ವಿವಿಧ ಭಾವಗಳನ್ನು ದೇಹದ ವಿವಿಧ ಅಂಗಗಳೊಂದಿಗೆ ಸಂಬಂಧಗೊಳಿಸಲ್ಪಟ್ಟಿರುತ್ತವೆ – ಕರುಳುಗಳು, ಪಿತ್ತಜನಕಾಂಗ, ಶ್ವಾಸಕೋಶಗಳು, ಮತ್ತು ಹೃದಯ. ಕರುಳುಗಳು ಕೋಪ ಮತ್ತು ಪ್ರೀತಿಯಂತಹ ಭಾವೋದ್ರೇಕಗಳ ನೆಲೆಯಾಗಿರುತ್ತದೆಂದು ಗ್ರೀಕ್.ರು ಪರಿಗಣಿಸಿದ್ದರು. ಇಬ್ರಿಯರು ಕರುಳುಗಳನ್ನು ವಾತ್ಸಲ್ಯ, ಕರುಣೆ, ಮತ್ತು ಪ್ರೀತಿಯ ಮೂಲ ಎಂಬದಾಗಿ ಎಣಿಸಿಕೊಂಡಿದ್ದರು.

ಈ ಪದದ ಒಂದು ರೂಪವು (σπλαγχνίζομαι, *splagchnizomai*) "ಕನಿಕರ ಪಡು" ಎಂಬರ್ಥವುಳ್ಳದ್ದಾಗಿದ್ದು, ಅದು ಕಷ್ಟದಲ್ಲಿರುವವರ ಕಡೆಗೆ ಯೇಸುವಿಗಿರುವ ಮನಸ್ಸನ್ನು ವ್ಯಕ್ತಪಡಿಸುವದಾಗಿರುತ್ತದೆ (ಮತ್ತಾಯ 9:36; 14:14; ಮಾರ್ಕ 1:41; 8:2; ಲೂಕ 7:13). ಬೇರೆಯವರ ಅಗತ್ಯತೆಗಳಿಂದ ಹೃದಯಸ್ಪರ್ಶಗೊಂಡವರ ಭಾವಗಳನ್ನು ಬಣ್ಣಿಸುವದಕ್ಕೆ ಯೇಸು ಅದನ್ನು ಒಂದು ಸಾಮ್ಯದಲ್ಲಿ ಬಳಸಿದನು (ಮತ್ತಾಯ 18:27; ಲೂಕ 10:33; 15:20).

**ಕನಿಕರ** (οἰκτιρμός, *oiktirmos*) ವು ಕರುಣೆ, ಮರುಕ, ಕಾಳಜಿ, ಮತ್ತು ಜನರ ಸಮಸ್ಯೆಗಳ ಬಗ್ಗೆ ಜಾಗ್ರತಿ ಹೊಂದಿರುವಿಕೆಗಳಲ್ಲಿ ವ್ಯಕ್ತಗೊಳಿಸಲ್ಪಡುತ್ತದೆ. ಈ ಪದವು ಬೇರೆಯವರಿಗಾಗಿ ದಯೆಯ ಭಾವವನ್ನು ಸೂಚಿಸುತ್ತದೆ, ವಿಶೇಷವಾಗಿ ಕಷ್ಟದಲ್ಲಿರುವವರ ಅಥವಾ ಸಹಾಯದ ಅಗತ್ಯವಿರುವವರ ಕಡೆಗೆ ದಯೆಯ ಭಾವ. ಜನರ ನೋವನ್ನು ಕಾಣುವಂತೆ ಸ್ಪರ್ಶಿಸಲ್ಪಡುವದು ಒಂದು ಕೋಮಲ ಮತ್ತು ಸ್ನೇಹಪರ ಪ್ರವೃತ್ತಿಯೇ ಆಗಿದೆ.

*Splagchnon* ಮತ್ತು *oiktirmos* ಎಂಬುವುಗಳು ಒಟ್ಟಾಗಿ ಅಕ್ಷರಶಃ "ಕರುಳುಗಳ ಕನಿಕರ" ಎಂಬರ್ಥವನ್ನು ಕೊಡುತ್ತವೆ. ಅವುಗಳ ಉತ್ತಮವಾದ ಅನುವಾದವೆಂದರೆ "ಹೃದಯಪೂರ್ವಕ ಕನಿಕರ" ಎಂದಾಗಿರುತ್ತದೆ.

**ದಯೆ** (χρηστότης, *chrēstotēs*) – ಸಹಾಯಮಾಡುವಿಕೆ, ದಾರಾಳತನ, ಕೋಮಲತೆ, ಪ್ರಾಮಾಣಿಕತೆ, ಅಥವಾ ಒಳ್ಳೇತನ ಎಂದು ಅರ್ಥವುಳ್ಳ – ಎಂಬುದು ದೇವರ ಸ್ವಭಾವದ ಒಂದು ಗುಣವನ್ನು ಬಣ್ಣಿಸುವದಾಗಿದೆ (ಲೂಕ 6:35; ರೋಮಾ 2:4; 11:22; 2 ಕೊರಿಂಥ 6:6; ಎಫೆಸ 2:7; ತೀತನಿಗೆ 3:4) ಮತ್ತು ಇದು ಕ್ರೈಸ್ತರು ಅಭಿವೃದ್ಧಿ ಪಡಿಸಿಕೊಳ್ಳಬೇಕಾದ ಒಂದು ಗುಣವಾಗಿರುತ್ತದೆ (ಗಲಾತ್ಯ 5:22). ಯೇಸು ತನ್ನ ಶಿಷ್ಯರು ಕನಿಕರವನ್ನು ಅನುಸರಿಸುವಂತೆ ದೇವರನ್ನು ಉದಾಹರಣೆಯಾಗಿ ಕೊಟ್ಟು ಹೇಳಿದನು (ಲೂಕ 6:35). ಕೀರ್ತನೆ 14:1ನ್ನು ಉಲ್ಲೇಖಿಸುವವನಾಗಿ, ಪೌಲನು ಹೀಗೆ ಬರೆದನು, "ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ" (ರೋಮಾ 3:12). ಬಹುಶಃ ಕ್ರೈಸ್ತರು ಈ ಗುಣವನ್ನು ಸಂಪೂರ್ಣವಾಗಿ ಹೊಂದಿರುವದಕ್ಕೆ ಸಾಧ್ಯವಿಲ್ಲ; ಹೇಗೂ, ದೇವರ ಸಹಾಯದೊಂದಿಗೆ, ನಾವು ಸ್ವಲ್ಪ ಮಟ್ಟಿಗೆ ಇದನ್ನು ಬೆಳೆಸಿಕೊಳ್ಳಬಹುದಾಗಿದೆ.

ಮುಂದಿನ ಸದ್ಗುಣವು **ದೀನಭಾವ** (ταπεινοφροσύνη, *tapeinophrosunē*). ಈ ಪದವು ಒಬ್ಬನು ತನ್ನ ಬಗ್ಗೆ ತಗ್ಗಿದ ಮನೋಭಾವ ಹೊಂದಿರುವದನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತದೆ, ಅದು ಕಪಟ ದೀನತೆ ("ಅತಿವಿನಯ"; 2:18, 23), ಗರ್ವ, ಅಹಂಕಾರ, ಮತ್ತು ಕೊಚ್ಚಿಕೊಳ್ಳುವಿಕೆಗಳಿಗೆ ತದ್ವಿರುದ್ಧವಾಗಿರುತ್ತದೆ. ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಕಾಣಿಸಿಕೊಳ್ಳುವದರ ಜೊತೆಗೆ, ಈ ಪದವು ಹೊಸ ಒಡಂಬಡಿಕೆಯಲ್ಲಿ ನಾಲ್ಕು

ಸಾರಿ ಬಳಸಲ್ಪಟ್ಟಿರುತ್ತದೆ (ಅಪೊಸ್ತಲರ ಕೃತ್ಯಗಳು 20:19; ಎಫೆಸ 4:2; ಫಿಲಿಪ್ಪಿ 2:3; 1 ಪೇತ್ರ 5:5). ಈ ಪದದ ಇತರ ರೂಪಗಳು ಗ್ರೀಕ್ ಹೊಸ ಒಡಂಬಡಿಕೆಯಲ್ಲಿ ಕಂಡು ಬರುತ್ತವೆ. ಯೇಸು ತನ್ನನ್ನು ಮತ್ತಾಯ 11:29ರಲ್ಲಿ "ದೀನ ಮನಸ್ಸುಳ್ಳವನು" ಎಂದು ಕರೆದುಕೊಂಡನು. ಯೇಸು ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅನುಭವಿಸಿದನು, ಅದರ ಮೂಲಕ ಆತನು ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟನು ಎಂಬದಾಗಿ ಪೌಲನು ಬರೆಯುತ್ತಾನೆ (ಫಿಲಿಪ್ಪಿ 2:8, 9). ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ ಆದರೆ ದೀನರಿಗೆ ಕೃಪೆಯನ್ನು ತೋರಿಸುವನು ಮತ್ತು ಅವರನ್ನು ಉನ್ನತಕ್ಕೆ ಏರಿಸುವನು (1 ಪೇತ್ರ 5:5, 6).

ದೀನತೆಯುಳ್ಳ ಜನರನ್ನು ಗ್ರೀಕ್‌ರು, ರೋಮನ್‌ರು, ಮತ್ತು ಅನ್ಯಜನಾಂಗದ ಉಳಿದವರೆಲ್ಲರೂ ಅಸಹ್ಯಿಸುತ್ತಿದ್ದರು; ಅವರು ಬಲಹೀನರು ಮತ್ತು ಹೇಡಿಗಳು ಎಂದು ಪರಿಗಣಿಸಲಾಗುತ್ತಿತ್ತು. ಹೇಗೂ, ಬೈಬಲ್ ಯೋಚನೆಯಲ್ಲಿ, ಒಬ್ಬನು ತನ್ನ ಬಗ್ಗೆ ತನಗೆ ತಕ್ಕದಾದ ಬೆಲೆಯನ್ನು ಕೊಟ್ಟುಕೊಳ್ಳುವದನ್ನು ಮತ್ತು ದೇವರ ದೃಷ್ಟಿಯಲ್ಲಿ ಸರ್ವರೂ ಸಮಾನ ಮೌಲ್ಯವನ್ನು ಹೊಂದಿದ್ದಾರೆಂಬದನ್ನು ಗುರುತಿಸಿಕೊಳ್ಳುವದನ್ನು ದೀನತೆಯು ವ್ಯಕ್ತಪಡಿಸುತ್ತದೆ. ತಮ್ಮಲ್ಲಿ ಯಾವದೇ ಉನ್ನತವಾದ ಸಾಮರ್ಥ್ಯಗಳಿರುವದಾಗಿ ಕಂಡರೂ ಅದೆಲ್ಲಾ ದೇವರಿಂದಲೇ ಪಡೆದುಕೊಂಡಿರುವಂಥದ್ದು ಮತ್ತು ತಮ್ಮ ಸ್ವಸಾಮರ್ಥ್ಯದಿಂದಲ್ಲ ಎಂಬುದನ್ನು ದೀನತೆಯುಳ್ಳ ಜನರು ಒಪ್ಪಿಕೊಳ್ಳುವವರಾಗಿದ್ದಾರೆ (1 ಕೊರಿಂಥ 4:7).

ಶತಾಧಿಪತಿಯು ಯೇಸುವಿನ ಬಳಿಗೆ ಸ್ನೇಹಿತರನ್ನು ಕಳುಹಿಸಿ "ನೀನು ನನ್ನ ಮನೆಗೆ ಬರತಕ್ಕಷ್ಟು ಯೋಗ್ಯತೆ ನನ್ನಲ್ಲಿಲ್ಲ" ಎಂದು ಹೇಳುವ ಮೂಲಕ ದೀನತೆಯನ್ನು ಪ್ರದರ್ಶಿಸಿದನು (ಲೂಕ 7:6). ಯೇಸುವಿನ ಸಾಮ್ಯಗಳಲ್ಲೊಂದರಲ್ಲಿ ಸುಂಕದವನು "ದೇವರೇ, ಪಾಪಿಯಾದ ನನ್ನನ್ನು ಕರುಣಿಸು" ಎಂದು ಕೇಳಿಕೊಳ್ಳುವ ಮೂಲಕ ದೀನತೆಯನ್ನು ತೋರಿಸಿದನು (ಲೂಕ 18:13). ಪೌಲನು ಎಫೆಸದಲ್ಲಿನ ಹಿರಿಯರಿಗೆ ತಾನು ಬಹು ನಮ್ರತೆಯಿಂದ ದೇವರ ಸೇವೆ ಮಾಡಿರುತ್ತೇನೆಂದು ಹೇಳಿದನು (ಅಪೊಸ್ತಲರ ಕೃತ್ಯಗಳು 20:19). ಆತನು ಫಿಲಿಪ್ಪಿಯವರಿಗೆ ಹೀಗೆ ಬುದ್ಧಿವಾದ ಹೇಳಿದನು, ". . . ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ" (ಫಿಲಿಪ್ಪಿ 2:3).

**ಸಾತ್ವಿಕತ್ವ** (πραΰτητα, *prautēta*) ಎಂಬುದು "ಒಬ್ಬನು ತನ್ನ ಸ್ವಪ್ರಾಮುಖ್ಯತೆಯ ಬಗ್ಗೆ ಅತಿಯಾದ ಪ್ರಭಾವಿತನಾಗದಿರುವದು, ಸಾಧುತ್ವ, ದೀನತೆ, ಸೌಜನ್ಯತೆ, ದಾಕ್ಷಿಣ್ಯಪರತೆ, ಹಳೆಯ ಅನುಕೂಲಕರ ಅರ್ಥದಲ್ಲಿ ನಮ್ರತೆ" ಎಂಬದಾಗಿ ಅರ್ಥನಿರೂಪಿಸಲ್ಪಟ್ಟಿರುತ್ತದೆ.[29] ಇದು ಕ್ರೈಸ್ತರಿಂದ ಅಪೇಕ್ಷಿಸಲ್ಪಡುವಂಥ ಮತ್ತು ಅಭಿವೃದ್ಧಿ ಪಡಿಸಿಕೊಳ್ಳತಕ್ಕಂಥ ಗುಣ ಎಂಬದಾಗಿ ಪೌಲನು ಅನೇಕ ಸಾರಿ ಇದನ್ನು ಸೇರ್ಪಡೆಗೊಳಿಸುತ್ತಾನೆ.[30] ಸಾತ್ವಿಕತ್ವದಿಂದ ಇರುವವರು ಮಾನವಿತೆ, ಸ್ನೇಹಭಾವ, ಮತ್ತು ಕೋಮಲಹೃದಯವುಳ್ಳವರು, ದಾಕ್ಷಿಣ್ಯಪರತೆಯ ಪ್ರವೃತ್ತಿಯನ್ನು ಹೊಂದಿದವರಾಗಿರುತ್ತಾರೆ. ಅವರು ಕಠೋರವಾಗಿ ನಡೆದುಕೊಳ್ಳದವರು, ಸೌಜನ್ಯವಿಲ್ಲದವರಾಗಿ ನಡೆಯದವರು, ಅಥವಾ ಒರಟು ಸ್ವಭಾವದವರು ಆಗಿರುವದಿಲ್ಲ. ಇದರ ಅರ್ಥವು ಅವರು ದುರ್ಬಲರು ಎಂದಾಗಿರುವದಿಲ್ಲ. ಒಬ್ಬ ದುರ್ಬಲನು ಇನ್ನೂರು ಪೌಂಡ್ ಭಾರದ ವಸ್ತುವನ್ನು ಮೇಜಿನ ಮೇಲಿನಿಂದ ಎತ್ತಿ ಅದನ್ನು ನೆಲದ ಮೇಲೆ

ಜಾಗರೂಕತೆಯಿಂದ ಜೋಡಿಸಲಾರನು; ಒಬ್ಬ ಬಲಾಢ್ಯನಾದ ವ್ಯಕ್ತಿಯು ಮಾತ್ರವೇ ಅದನ್ನು ಮಾಡಬಲ್ಲನು. ಜನರು ಒಬ್ಬನ ಕಡೆಗೆ ಕ್ರೂರವಾಗಿ, ನಿರ್ದಯವಾಗಿ, ತಿರಸ್ಕಾರ ಅಥವಾ ಅಗೌರವಪೂರ್ವಕವಾಗಿ ನಡೆದುಕೊಳ್ಳುವಾದ ಸಾತ್ವಿಕತ್ವದಿಂದಿರುವದಕ್ಕೆ ಆಂತರ್ಯದಲ್ಲಿ ಬಲದ ಅವಶ್ಯಕತೆಯಿರುತ್ತದೆ.

ಈ ಪಟ್ಟಿಯಲ್ಲಿರುವ ಅಂತಿಮ ಗುಣವೆಂದರೆ **ದೀರ್ಘಶಾಂತಿ**. ಇಲ್ಲಿ ಬಳಸಲಾಗಿರುವ ಗ್ರೀಕ್ ಪದವು (μακροθυμία, *makrothumia*) "ರೊಚ್ಚಿಗೆಬ್ಬಿಸಲ್ಪಡುವ ವೇಳೆ ಸಹಿಸಿಕೊಳ್ಳುವಿಕೆ, ಸೈರಣೆ, ಬೇರೆಯವರ ಕಡೆಗೆ ತಾಳ್ಮೆಯಿಂದಿರುವಿಕೆ" ಎಂದು ಅರ್ಥನಿರೂಪಿಸಲ್ಪಟ್ಟಿರುತ್ತದೆ.[31] ದೀರ್ಘಶಾಂತಿಯಿಂದಿರುವವರು ತಮಗಾದ ತಪ್ಪನ್ನು ಸಹಿಸಿಕೊಂಡು ಕಠಿಣ ಪರಿಸ್ಥಿತಿಗಳಲ್ಲಿ ದೃಢತೆಯಿಂದಿರುವದಕ್ಕೆ ಮನಸ್ಸುಳ್ಳವರಾಗಿರುತ್ತಾರೆ. ಈ ಪದವು ಮಾನವರ ಕಡೆಗೆ ದೇವರು ಹಾಗೂ ಯೇಸು ನಡೆದುಕೊಂಡ ವಿಧವನ್ನು ಸೂಚಿಸಲು ಬಳಸಲ್ಪಡುತ್ತದೆ (ರೋಮಾ 2:4; 9:22; 1 ತಿಮೊಥೆ 1:16; 1 ಪೇತ್ರ 3:20; 2 ಪೇತ್ರ 3:15), ಅಲ್ಲದೆ ಕ್ರೈಸ್ತರು ಹೊಂದಿರಬೇಕಾದ ಗುಣವೆಂಬದನ್ನು ಸೂಚಿಸುವದಕ್ಕೂ ಬಳಸಲ್ಪಡುತ್ತದೆ (2 ಕೊರಿಂಥ 6:6; ಗಲಾತ್ಯ 5:22; ಎಫೆಸ 4:2; 2 ತಿಮೊಥೆ 4:2). ಯಾಕೋಬನು ದೀರ್ಘಶಾಂತಿಗೆ ವ್ಯವಸಾಯಗಾರರನ್ನು, ಪ್ರವಾದಿಗಳನ್ನು, ಮತ್ತು ಯೋಬನನ್ನು ಉದಾಹರಣೆಯಾಗಿ ತಿಳಿಸುತ್ತಾನೆ (ಯಾಕೋಬ 5:7, 10, 11). ಹೇಗೂ, ಯೇಸುವು ಎಲ್ಲಕ್ಕಿಂತ ಶ್ರೇಷ್ಠ ಉದಾಹರಣೆಯಾಗಿದ್ದಾನೆ: "ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ; ಆತನು ಬಾಧೆಯನ್ನನುಭವಿಸಿದಾಗ ಯಾರನ್ನೂ ಬೆದರಿಸದೆ ನ್ಯಾಯವಾಗಿ ತೀರ್ಪುಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು" (1 ಪೇತ್ರ 2:23). ಆತನು "ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು" (ಇಬ್ರಿಯ 12:3).

ವಿರೋಧಗಳು ಮತ್ತು ಸಂಕಷ್ಟಗಳು ಸಿದ್ಧಿಗೆ ಬರುವಂತೆ ಕ್ರೈಸ್ತರಿಗೆ ಸಹಾಯವಾಗುತ್ತವೆ (ರೋಮಾ 5:3, 4; ಯಾಕೋಬ 1:2-4). ಜೀವನದಲ್ಲಿ ಬರುವ ನೋವುಗಳನ್ನು ಮತ್ತು ಶೋಧನೆ ಅಥವಾ ಪರೀಕ್ಷೆಗಳನ್ನು ದೀರ್ಘಶಾಂತಿಯಿಂದ ಸಹಿಸಿಕೊಳ್ಳುವವರಲ್ಲಿ ಮಾತ್ರವೇ ಇದು ಸಂಭವಿಸುತ್ತದೆ (1 ಕೊರಿಂಥ 4:12; 1 ಪೇತ್ರ 2:20). "ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟು ಮಾಡುತ್ತದೆ" (ಇಬ್ರಿಯ 12:11).

## "ಮತ್ತೊಬ್ಬನ ಮೇಲೆ ತಪ್ಪುಹೊರಿಸುವದಕ್ಕೆ ಕಾರಣವಿದ್ದರೂ ತಪ್ಪುಹೊರಿಸದೆ ಒಬ್ಬರಿಗೊಬ್ಬರು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ" (3:13)

ಕೊಲೊಸ್ಸೆಯವರು ಸೈರಣೆ ಮತ್ತು ಕ್ಷಮಾಪಣೆಯ ಸದ್ಗುಣಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುತ್ತಲೇ ಇರಬೇಕಾಗಿತ್ತು. **ಸಹಿಸಿಕೊಂಡು** (ἀνέχομαι, *anechomai*) ಸಹನೆಯಿಂದಿರುವದು – ಕಷ್ಟಕರ ಮತ್ತು ಕಿರಿಕಿರಿಯುಂಟು ಮಾಡುವ ಪರಿಸ್ಥಿತಿಗಳಲ್ಲಿ, ಅಲ್ಲದೆ ಬೇರೆಯವರು ರೊಚ್ಚಿಗೆಬ್ಬಿಸುವಾಗ ಸಹ ಸಹಿಸಿಕೊಳ್ಳುವದು. ಎಫೆಸ 4:2ರಲ್ಲಿ, ಪೌಲನು ಒಬ್ಬರನ್ನೊಬ್ಬರು ಸಹಿಸಿಕೊಳ್ಳುವದರ ಜೊತೆಗೆ ಪ್ರೀತಿಯನ್ನು ಸೇರ್ಪಡೆಗೊಳಿಸಿಕೊಳ್ಳತಕ್ಕದ್ದು ಎಂದು ಹೇಳಿದನು. ಯಾರ ಕ್ರಿಯೆಗಳು ಆತನ

ತಾಳ್ಮೆಯನ್ನು ಪರೀಕ್ಷಿಸುವಂತಿರಬಹುದಾಗಿತ್ತೋ ಅವರನ್ನು ಯೇಸು ಸಹಿಸಿಕೊಂಡನು (ಮತ್ತಾಯ 17:17; ಮಾರ್ಕ 9:19; ಲೂಕ 9:41). ಆತನ ಹಿಂಬಾಲಕರು ಸಂಕಟವನ್ನು ಅಥವಾ ಹಿಂಸೆಯನ್ನು ಅನುಭವಿಸಬೇಕಾಗಬಹುದು (1 ಕೊರಿಂಥ 4:12; 2 ಥೆಸಲೋನಿಕ 1:4; 2 ತಿಮೊಥೆ 3:12). ಅಲ್ಲದೆ, ನಾವು ಕ್ರಿಸ್ತನಂಬಿಕೆಯ ನಿಮಿತ್ತವಾಗಿ ಇತರರಿಂದ ಅವಮಾನಗಳನ್ನು ಮತ್ತು ನಿಂದೆಯಿಂದ ಕೂಡಿದ ಕಾರ್ಯಗಳನ್ನು ಅನುಭವಿಸುವದಕ್ಕೆ ಮನಸ್ಸುಳ್ಳವರಾಗಿರತಕ್ಕದ್ದು.[32] ಸಕಾರಾತ್ಮಕವಾಗಿ ಹೇಳುವದಾದರೆ, "ಸಹಿಸಿಕೊಳ್ಳುವದು" ಎಂದರೆ ನಿರ್ದಯತೆಯನ್ನು ದಯೆಯಿಂದ ಅನುಭವಿಸುವದು, ಮತ್ತು ಶಪಿಸುವ ಬದಲಾಗಿ ಆಶೀರ್ವದಿಸುವದು ಎಂದಾಗಿರುತ್ತದೆ (ಲೂಕ 6:28; ರೋಮಾ 12:14; 1 ಪೇತ್ರ 2:21-23). ನಕಾರಾತ್ಮಕವಾಗಿ ಹೇಳುವದಾದರೆ, ಅದರರ್ಥವು ನಿಮಗೆ ವಿರುದ್ಧ ತಪ್ಪು ಮಾಡಲ್ಪಟ್ಟಾಗ ಅಥವಾ ನಿರ್ದಯತೆಯಿಂದ ನಡೆದುಕೊಳ್ಳಲ್ಪಟ್ಟಾಗ ಬೇಸರಗೊಳ್ಳದಿರುವದು ಮತ್ತು ಕೋಪ ಮಾಡಿಕೊಳ್ಳದೆ ಇರುವದು ಎಂದಾಗಿರುತ್ತದೆ. ಕೊಲೊಸ್ಸೆಯವರು ತಮಗೆ ಬೇರೆಯವರಿಂದಾದ ಕಿರುಕುಳಕ್ಕೆ ಅನುಚಿತವಾದ ರೀತಿಯಲ್ಲಿ ಅಲ್ಲ ಆದರೆ ಸೈರಣೆಯ ಮನಸ್ಸಿನಿಂದ ನಡೆದುಕೊಳ್ಳುವದನ್ನು ಕಲಿತುಕೊಳ್ಳಬೇಕಿತ್ತು.

ಜೊತೆ ಕ್ರೈಸ್ತರ ಕಡೆಗೆ ಸೈರಣೆಯನ್ನು ತೋರಿಸತಕ್ಕದ್ದು. ಜನರು ಅನೇಕ ಸಾರಿ ಬೇರೆಯವರಿಗೆ ಕಿರಿಕಿರಿ ಅಥವಾ ಬೇಸರವನ್ನು ತರುವಂಥ ಕಾರ್ಯಗಳನ್ನು ಮಾಡುತ್ತಾರೆ. ಕ್ರೈಸ್ತರು ಸಹೋದರರ ಕಡೆಗೆ ಸಹನೆಯ ಮನೋಭಾವವನ್ನು ಬೆಳೆಸಿಕೊಳ್ಳತಕ್ಕದ್ದು. ವಿಶ್ವಾಸಿಗಳ ಸಮುದಾಯದಲ್ಲಿ ಇರಬೇಕಾದ ನಿಕಟ ಸಂಬಂಧವನ್ನು ಒತ್ತಿ ಹೇಳುವದಕ್ಕಾಗಿ ಪೌಲನು **ಒಬ್ಬರಿಗೊಬ್ಬರು** ಮತ್ತು **ಒಬ್ಬರನ್ನೊಬ್ಬರು** ಎಂಬದಾಗಿ ಬಳಸಿದನು. ಕ್ರಿಸ್ತನಲ್ಲಿ ಸಹೋದರರು ಮತ್ತು ಸಹೋದರಿಯರಾಗಿ, ಕುಟುಂಬದ ಅಂಗವಾಗಿಲ್ಲದರ ಕಡೆಗೆ ಸಿಟ್ಟಿಗೇಳುವದಕ್ಕಿಂತಲೂ ಅಧಿಕವಾಗಿ ಪರಸ್ಪರರ ಮೇಲೆ ಸಿಟ್ಟು ಮಾಡಿಕೊಳ್ಳುವ ಕುಟುಂಬದ ಸದಸ್ಯರಂತೆ ನಾವು ನಡೆದುಕೊಳ್ಳದ ಹಾಗೆ ಜಾಗ್ರತೆಯಿಂದಿರಬೇಕು.

**ಕ್ಷಮಿಸಿರಿ** ಎಂಬುದಕ್ಕಾಗಿರುವ ಪದವು (χαρίζομαι, *charizomai*; ಇದು χαρίς, *charis* ಎಂಬುದರೊಂದಿಗೆ ನೆಂಟಸ್ತಿಕೆ ಹೊಂದಿರುತ್ತದೆ) "ಕೊಡುವದು," "ಅನುಗ್ರಹಿಸುವದು," ಅಥವಾ "ದಯಪಾಲಿಸುವದು" ಎಂಬ ಅರ್ಥವನ್ನು ಕೊಡಬಹುದಾಗಿದೆ (ನೋಡಿರಿ ಲೂಕ 7:21; ರೋಮಾ 8:32; 1 ಕೊರಿಂಥ 2:12; ಗಲಾತ್ಯ 3:18; ಫಿಲಿಪ್ಪಿ 1:19; 2:9; ಫಿಲೆಮೋನ 22) ಅಥವಾ "ಒಬ್ಬನನ್ನು ಮತ್ತೊಬ್ಬನ ಆರೈಕೆಯಲ್ಲಿ ಅಥವಾ ವಶದಲ್ಲಿ ಒಪ್ಪಿಸುವದು" ಎಂದರ್ಥವನ್ನು ಕೊಡಬಹುದು (ಅಪೊಸ್ತಲರ ಕೃತ್ಯಗಳು 3:14; 25:11, 16). ಇಲ್ಲಿರುವ ಪ್ರಕಾರವೇ, ಇದು ಒಬ್ಬನ ಸಾಲವನ್ನು ಅಥವಾ ತಪ್ಪನ್ನ ಕ್ಷಮಿಸುವದನ್ನು ಸೂಚಿಸಬಲ್ಲದು (ಲೂಕ 7:42, 43; 2 ಕೊರಿಂಥ 2:7, 10; ಎಫೆಸ 4:32). ಇದು "ಕ್ಷಮಾಪಣೆ" ಎಂಬುದಕ್ಕಾಗಿ ಬಹಳ ಅಧಿಕವಾಗಿ ಬಳಸಲ್ಪಡುವ ಪದವಾಗಿರುವದಿಲ್ಲ, ಕ್ಷಮಾಪಣೆಗೆ ಇರುವ ಪದವು ἄφεσις (*aphesis*) ಎಂದಾಗಿದೆ; ಆದರೆ ಇದು ಕ್ಷಮಾಪಣೆಯ ಇನ್ನಷ್ಟು ಪೂರ್ಣವಾದ ಅರ್ಥವನ್ನು ಸೂಚಿಸುವದಾಗಿದ್ದು, ಲೂಕ 7:42ರಲ್ಲಿ "ಕೃಪೆಯಿಂದ ಕ್ಷಮಿಸಿದನು" ಎಂಬದಾಗಿ ಅನುವಾದಿಸಲ್ಪಟ್ಟಿದೆ. ಕೊಲೊಸ್ಸೆಯವರು ಒಬ್ಬರನ್ನೊಬ್ಬರು ಕ್ಷಮಿಸುತ್ತಲಿರಬೇಕು ಎಂಬುದನ್ನು ಸೂಚಿಸುವದಕ್ಕೆ ಪೌಲನು ಇದರ ಇನ್ನೊಂದು ರೂಪದ ಪದವನ್ನು ಬಳಸಿದನು.

ಕ್ಷಮಾಪಣೆಯು ಕುರಿತ ತನ್ನ ಬೋಧನೆಯಲ್ಲಿ, ಯೇಸುವ ಬಹಳ ಸಾರಿ ἄφεσις (*aphesis*, "ಕ್ಷಮಾಪಣೆ") ಮತ್ತು ἀφίημι (*aphiēmi*, "ಕ್ಷಮಿಸು") ಎಂಬ ಪದಗಳನ್ನು ಬಳಸಿದನು. ನಾವು ಇತರರನ್ನು ಕ್ಷಮಿಸುವಂತದ್ದು ವಾಸ್ತವಿಕವಾಗಿ ಅಂತ್ಯವಿಲ್ಲದ್ದಾಗಿರಬೇಕು ಆತನು ಕಲಿಸಿದನು: "ಏಳು ಎಪ್ಪತ್ತು ಸಾರಿ" (ಮತ್ತಾಯ 18:22). ಆತನು ಇದಕ್ಕೆ ದೃಷ್ಟಾಂತವಾಗಿ ದೊಡ್ಡ ಸಾಲವಿದ್ದ ಒಬ್ಬನಿಗೆ ಆತನ ಯಜಮಾನನು ಸಾಲವನ್ನು ಕ್ಷಮಿಸುತ್ತಾನೆ, ಆದರೆ ಆತನು ತನ್ನ ಜೊತೆ ಸೇವಕನು ಕೊಡಬೇಕಿದ್ದ ಚಿಕ್ಕ ಸಾಲವನ್ನು ಕೊಡುವಂತೆ ಬೇಡಿಕೆಯಿಟ್ಟನು ಎಂಬ ಸಾಮ್ಯವನ್ನು ಹೇಳುತ್ತಾನೆ. ಯಜಮಾನನು ಈ ಕ್ಷಮಿಸದ ವ್ಯಕ್ತಿಯನ್ನು ದಂಡಿಸಿದನು (ಮತ್ತಾಯ 18:23-34). ಯೇಸು ಮುಕ್ತಾಯಗೊಳಿಸುತ್ತಾನೆ, "ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆಹೋದರೆ ಪರಲೋಕದಲ್ಲಿರುವ ನಿಮ್ಮ ತಂದೆಯೂ ನಿಮಗೆ ಹಾಗೆಯೇ ಮಾಡುವನು" (ಮತ್ತಾಯ 18:35). ಬೇರೆಯವರನ್ನು ಕ್ಷಮಿಸುವದಕ್ಕೆ ನಿರಾಕರಿಸುವವರನ್ನು ದೇವರು ಕ್ಷಮಿಸುವದಿಲ್ಲ (ಮತ್ತಾಯ 6:14).

ನಾವು ಅನುಭವಿಸುವ ತಾತ್ಸಾರಗಳು, ಅವಮಾನಗಳು, ತಿರಸ್ಕಾರಗಳು, ಮತ್ತು ಗಾಯಗಳಂತಹ ನೋವುಗಳನ್ನು ಕ್ಷಮಿಸಬೇಕು. ಸಾಮಾನ್ಯವಾಗಿ ಒಂದು ತಪ್ಪು ಮಾಡಲ್ಪಟ್ಟಾಗ ಪ್ರತಿಕಾರ, ಕ್ಷಮಿಸದಿರುವಿಕೆ ಮತ್ತು ಹಗೆತನ ಸಾಧಿಸುವ ಭಾವನೆ ಸಹಜವಾಗಿರುತ್ತದೆ. ನಮಗೆ ನೋವುಂಟು ಮಾಡುವವರಿಗೆ ಪ್ರತಿಯಾಗಿ ನೋವುಂಟು ಮಾಡುವದರ ಬದಲಾಗಿ, ನಾವು ನಮ್ಮನ್ನು ನಿಂದನೆ ಮಾಡುವವರಿಗೆ ಒಳ್ಳೇದನ್ನು ಮಾಡತಕ್ಕದ್ದು (ಲೂಕ 6:35; ರೋಮಾ 12:20, 21).

**ತಪ್ಪುಹೊರಿಸುವದಕ್ಕೆ** (μομφή, *momphē*), ಎಂಬುದು ಗ್ರೀಕ್‌ನಲ್ಲಿ ಒಂದು ನಾಮಪದವಾಗಿದ್ದು, ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಈ ಪದದ ಕ್ರಿಯಾಪದ ರೂಪವಾದ μέμφομαι (*memphomai*) ಎಂಬುದರ ಅರ್ಥವು, "ಆರೋಪಿಸು" ಅಥವಾ ತಪ್ಪು ಕಂಡು ಹಿಡಿ ಎಂದಾಗಿರುತ್ತದೆ (ಮಾರ್ಕ 7:2; ರೋಮಾ 9:19; ಇಬ್ರಿಯ 8:8). ಒಂದೇ ತಪ್ಪುಹೊರಿಸುವದು ನ್ಯಾಯಯುತವಾಗಿರಬೇಕಾಗಿರುತ್ತದೆ ಎಂಬದಾಗಿ ಪೌಲನು ಸೂಚಿಸಲಿಲ್ಲ. ನಮ್ಮ ವಿರುದ್ಧ ಮಾಡಲ್ಪಟ್ಟ ಒಂದು ತಪ್ಪಿನ ವಿಷಯದಲ್ಲಿ ನಾವು ನ್ಯಾಯಯುತವಾಗಿದ್ದರೂ ಸರಿಯೇ ಇಲ್ಲದಿದ್ದರೂ ಸರಿಯೇ, ನಾವು ನಮಗೆ ತಪ್ಪು ಮಾಡಿದವನಿಗೆ ಕ್ಷಮಾಪಣೆಯನ್ನು ತೋರಿಸುವವರಾಗಿರತಕ್ಕದ್ದು. ತಪ್ಪನ್ನು ಕ್ಷಮಿಸಿದ ಬಳಿಕ, ಅದನ್ನು ಮರೆತು ಬಿಡಬೇಕು. ಕರ್ತನು ಸಹ ನಮ್ಮನ್ನು ಹೀಗೆಯೇ ಕ್ಷಮಿಸಿರುತ್ತಾನೆ. ಈ ವಚನದಲ್ಲಿ **ಕರ್ತನು** ಎಂಬುದು ಯೇಸುವನ್ನು ಸೂಚಿಸುತ್ತದೆ.

**ಕ್ಷಮಿಸಿದಂತೆಯೇ** (χαρίζομαι, *charizomai*) ಎಂಬುದು ಈ ವಚನದಲ್ಲಿ ಮುಂಚೆ ಹೇಳಲ್ಪಟ್ಟಿರುವ "ಕ್ಷಮಿಸಿರಿ" ಎಂಬುದಕ್ಕೆ ಬಳಸಿದ ಅದೇ ಪದವಾಗಿರುತ್ತದೆ; ಆದರೆ ಇದು ಒಂದು ಅನಿಶ್ಚಿತ ಭೂತಕಾಲ ರೂಪದ ಪದವಾಗಿದ್ದು, ಕರ್ತನು ಅವರ ಗತಕಾಲದ ಪಾಪಗಳನ್ನು ಕ್ಷಮಿಸುವ ಕ್ರಿಯೆಯನ್ನು *ಪೂರ್ಣಗೊಳಿಸಿರುತ್ತಾನೆ* ಎಂಬ ಅರ್ಥವನ್ನು ಕೊಡುತ್ತದೆ. ಕ್ಷಮಾಪಣೆಯು ಕ್ರೈಸ್ತರಿಗಿರಬೇಕಾದ ಒಂದು ಪ್ರಾಮುಖ್ಯವಾದ ಗುಣವಾಗಿರುತ್ತದೆ.[33] ನಾವು ಎಷ್ಟೋಂದು ಸಾರಿ ದೇವರ ಚಿತ್ತವನ್ನು ಮೀರಿ ನಡೆದಾಗಲೂ ಆತನು ನಮ್ಮನ್ನು ಕ್ಷಮಿಸಿರುವದಾದರೆ, ನಾವು ಸಹ ಒಬ್ಬರನ್ನೊಬ್ಬರು ಕ್ಷಮಿಸಬೇಕು.

ಯಾವನು ಕ್ಷಮಿಸಲ್ಪಡಬೇಕಾದ ಪಾಪಗಳನ್ನು ಹೊಂದಿಲ್ಲವೋ ಆತನು ಮಾತ್ರವೇ ಕ್ಷಮಿಸದೆ ಇರುವದಕ್ಕೆ ಹಕ್ಕು ಹೊಂದಿದ್ದಾನೆ. ಕ್ಷಮಿಸುವವರಾಗಿರಬೇಕು ಎಂಬುದಕ್ಕೆ ಯೇಸು ನಮಗೆ ಮಾದರಿಯನ್ನು ಮತ್ತು ಪ್ರೇರಣೆಯನ್ನು ಒದಗಿಸಿದ್ದಾನೆ (ನೋಡಿರಿ ಎಫೆಸ 4:32).

**ದಂತೆಯೇ** ಮತ್ತು **ನೀವೂ** (καθὼς καὶ, *kathōs kai*[34] ಮತ್ತು οὕτως καὶ, *houtōs kai*[35]) ಎಂಬ ಅನ್ವಯಗಳು ಪೌಲನ ಬರಹಗಳಲ್ಲಿ ಸರ್ವಸಾಧಾರಣವಾಗಿರುತ್ತವೆ. ಕೊಲೊಸ್ಸೆಯವರು ಅನುಕರಣ ಮಾಡುವದಕ್ಕೆ ಯೇಸುವೇ ಅವರ ಮಾದರಿ ಎಂಬುದನ್ನು ಒತ್ತಿ ಹೇಳುವದಕ್ಕಾಗಿ ಈ ಪದವಿನ್ಯಾಸವನ್ನು ಬಳಸಲಾಗಿರುತ್ತದೆ. ಅವರು ಯೇಸುವನ್ನು ಅನುಕರಣ ಮಾಡಬೇಕಿತ್ತು, ಆತನು ಅವರನ್ನು ಸಂಪೂರ್ಣವಾಗಿ "ಕ್ಷಮಿಸಿದ್ದನು." ಅಕ್ಷರಶಃ, ಗ್ರೀಕ್ ಹೀಗೆ ಹೇಳುತ್ತದೆ, "ಕರ್ತನು ನಿಮ್ಮ ಕ್ಷಮಿಸಿದ ರೀತಿಯಲ್ಲಿಯೇ, ನೀವೂ ಕ್ಷಮಿಸಬೇಕು." ವಾಕ್ಯದ ಪೂರ್ತಿಗೊಳ್ಳುವಿಕೆಯನ್ನು ಹೀಗೆ ಅರ್ಥಮಾಡಿಕೊಳ್ಳಲ್ಪಡತಕ್ಕದ್ದು: ". . . *ನೀವು ಸಹ ಕ್ಷಮಿಸಬೇಕು.*" ದೇವರಿಂದ ಕ್ಷಮಾಪಣೆಯನ್ನು ಅನುಭವಿಸಿರುವವರು ಬೇರೆಯವರನ್ನು ಕ್ಷಮಿಸುವದಕ್ಕೆ ಮನಸ್ಸುಳ್ಳವರಾಗಿರಬೇಕು.

## "ಇದೆಲ್ಲಾದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ; ಅದು ಸಮಸ್ತವನ್ನು ಸಂಪೂರ್ಣಮಾಡುವ ಬಂಧವಾಗಿದೆ" (3:14)

ಕ್ರೈಸ್ತರು ಅಭಿವೃದ್ಧಿ ಪಡಿಸಿಕೊಳ್ಳಬೇಕಾದ ಸರ್ವೋಚ್ಚ ಗುಣವೆಂದರೆ "ಪ್ರೀತಿ" (ἀγάπη, *agapē*); ಅದು ಅ ಬೇರೆ ಎಲ್ಲವುಗಳಿಗಿಂತಲೂ ಅತ್ಯುನ್ನತವಾಗಿದೆ (1 ಕೊರಿಂಥ 13:13; 1 ಪೇತ್ರ 4:8). ಪ್ರೀತಿಯು ಕ್ರೈಸ್ತ ಸದ್ಗುಣಗಳೊಳಗೆ ಅಗ್ರ ಸ್ಥಾನದಲ್ಲಿಡಲ್ಪಟ್ಟಿದೆ. ಗ್ರೀಕ್ ದೃಷ್ಟಿಕೋನದಿಂದ, ಇದು ಸ್ಪಷ್ಟವಾಗಿ ತೋರುತ್ತದೆ ಯಾಕೆಂದರೆ ಪೌಲನು ತಿಳಿಸುವ ಸದ್ಗುಣಗಳ ಪಟ್ಟಿಯಲ್ಲಿ "ಪ್ರೀತಿ" ಮೊದಲನೆಯದಾಗಿ ಉಲ್ಲೇಖಿಸಲ್ಪಟ್ಟಿದೆ (ಗಲಾತ್ಯ 5:22). ಅದು 2 ಪೇತ್ರ 1:5-7ರಲ್ಲಿ ಕೊನೆಯದಾಗಿ ಉಲ್ಲೇಖಿಸಲ್ಪಟ್ಟಿದೆ, ಬಹುಶಃ ಅದಕ್ಕೆ ಕಾರಣ ಇಬ್ರಿಯ ಭಾಷೆಯಲ್ಲಿ ಅತ್ಯಂಥ ದೊಡ್ಡ ಪ್ರಾಮುಖ್ಯತೆಯುಳ್ಳದ್ದೊಂದನ್ನು ಒತ್ತಿ ಹೇಳುವ ವಿಧವು ಆ ರೀತಿಯಾಗಿರುತ್ತದೆ. ಪ್ರೀತಿಯು ಬೇರೆಯವರ ಭಕ್ತಿವೃದ್ಧಿಯನ್ನು ಮಾಡುತ್ತದೆ (1 ಕೊರಿಂಥ 8:1) ಮತ್ತು ಬೇರೆ ಎಲ್ಲಾ ಸದ್ಗುಣಗಳನ್ನು ಬೆಳೆಸಿಕೊಳ್ಳುವಂತೆ ಪ್ರೇರಣೆ ನೀಡುತ್ತದೆ (ರೋಮಾ 13:8-10; ಗಲಾತ್ಯ 5:14).

ಎದುರಿನ ವ್ಯಕ್ತಿಯು ಪ್ರೀತಿಗೆ ಯೋಗ್ಯನಾಗಿದ್ದಾನೋ ಇಲ್ಲವೋ ಎಂಬುದರ ಮೇಲಾಗಲಿ ಅಥವಾ ಪ್ರೀತಿಸುವದಕ್ಕೆ ಸುಲಭವಾದವನೋ ಎಂಬುದರ ಮೇಲೆ ಪ್ರೀತಿಯು ಅವಲಂಬಿತವಾಗಿರುವದಿಲ್ಲ. ಕ್ರೈಸ್ತರು ಪ್ರೀತಿಗೆ ಯೋಗ್ಯರನ್ನೂ ಯೋಗ್ಯರಲ್ಲದವರನ್ನೂ ಪ್ರೀತಿಸಬೇಕು. ದೇವರು ಹೀಗೆಯೇ ಪ್ರೀತಿಸುವವನಾಗಿದ್ದಾನೆ (1 ಯೋಹಾನ 4:9, 10). ಆತನು ಪ್ರೀತಿಗೆ ಅಯೋಗ್ಯವಾದಂಥ, ಪಾಪ ತುಂಬಿದ ಲೋಕವನ್ನು ಆತನು ಎಷ್ಟೋಂದು ಪ್ರೀತಿಸಿ, ರಕ್ಷಣೆಗೋಸ್ಕರ ತನ್ನ ಮಗನನ್ನು ಕೊಟ್ಟನು (ಯೋಹಾನ 3:16). ದೇವರು ಪ್ರೀತಿಸ್ವರೂಪಿಯಾಗಿದ್ದಾನಾದ್ದರಿಂದ ಆತನು ಪ್ರೀತಿಸುತ್ತಾನೆ, ಹೊರತು ಜನರು ಪ್ರೀತಿಗೆ ಯೋಗ್ಯರು ಎಂಬದಕ್ಕಾಗಿ ಅಲ್ಲ.

14ನೇ ವಚನವು ಹೀಗೆ ಹೇಳುತ್ತದೆ, **ಇದೆಲ್ಲಾದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ**. NASB ತರ್ಜುಮೆಯು ನಾವು "ಪ್ರೀತಿಯನ್ನು ಧರಿಸಿಕೊಳ್ಳಬೇಕು" ಎಂಬದಾಗಿ ಸೂಚಿಸುತ್ತಾದಾದರೂ, ಪೌಲನು ಈ ಪದಗುಚ್ಛದಲ್ಲಿ ಒಂದು ಕ್ರಿಯಾಪದವನ್ನು

ಒದಗಿಸಿರುವದಿಲ್ಲ. ಒಂದು ಅಕ್ಷರಶಃ ಅನುವಾದವು ಈ ರೀತಿಯಲ್ಲಿರುವದು, "ಮತ್ತು ಇವೆಲ್ಲದರ ಮೇಲೆ ಪ್ರೀತಿಯು ಇರುತ್ತದೆ." "ಧರಿಸಿಕೊಳ್ಳಿರಿ" ಎಂಬುದು ಸೂಚ್ಯಾರ್ಥದಲ್ಲಿರುತ್ತದೆ. ಇಲ್ಲಿ ಗ್ರೀಕ್ ἐπί (*epi*) ಎಂಬುದು, "ಮೀರಿ" ಎಂದು ಭಾವಾನುವಾದಗೊಳಿಸಲ್ಪಟ್ಟಿದ್ದು, ಅದರರ್ಥವು 3:2, 6 ರಲ್ಲಿರುವ ಪ್ರಕಾರವೇ ಕೇವಲ "ಮೇಲೆ, ಅದರ ಮೇಲೆ" ಎಂದು ಅಥವಾ "ಮೇಲ್ಗಡೆ" (NIV) ಎಂದಷ್ಟೆ ಆಗಿರಬಹುದಾಗಿದೆ. ಇನ್ನೊಂದು ಭಾವಾನುವಾದದ ಸಾಧ್ಯತೆಯೆಂದರೆ "ಇದರ ಜೊತೆಯಲ್ಲಿ" ಎಂದಾಗಿರಬಹುದು. ತಕ್ಕುದಾದ ಅರ್ಥವು ಪ್ರೀತಿಯ ಪ್ರಮಾಣ ಎಂಬ ಯೋಚನೆಯನ್ನು ಒಳಗೊಂಡಿರಬಹುದಾಗಿದೆ: "ಇದೆಲ್ಲಕ್ಕಿಂತ ಹೆಚ್ಚಾಗಿ," "ಬೇರೆ ಎಲ್ಲದಾಕ್ಕಿಂತ," ಅಥವಾ ಇಲ್ಲಿ ಅನುವಾದಿಸಲ್ಪಟ್ಟಿರುವಂತೆ "ಇದೆಲ್ಲಾದರ ಮೇಲೆ" ಎಂಬದು. ಈ ಪದಗುಚ್ಛವನ್ನು "ಇವೆಲ್ಲದರ ಜೊತೆಯಲ್ಲಿ [ಅಥವಾ, ಇವೆಲ್ಲಾದರ ಮೇಲೆ] ಪ್ರೀತಿಯನ್ನು ಕೂಡಿಸಿಕೊಳ್ಳಿರಿ" ಎಂದು ಅರ್ಥಮಾಡಿಕೊಳ್ಳಲ್ಪಡುವದಾದಲ್ಲಿ ಅರ್ಥವು ಅಷ್ಟೇನೂ ಭಿನ್ನವಾಗಿರದು.

ಬಳಿಕ ಪೌಲನು **ಐಕ್ಯತೆ** ಬಗ್ಗೆ ಮಾತಾಡುತ್ತಾನೆ, ಅದು ಪ್ರೀತಿಯೊಂದಿಗೆ ನಿಕಟ ಸಂಬಂಧ ಹೊಂದಿರುತ್ತದೆ. **ಸಂಪೂರ್ಣ** ಎಂಬುದಕ್ಕಾಗಿರುವ ಗ್ರೀಕ್ ಪದವಾದ τελειότης (*teleiotēs*) ಎಂಬುದು, ಬೇರೆ ಕಡೆ ಇಬ್ರಿಯ 6:1ರಲ್ಲಿ ಮಾತ್ರವೇ ಕಂಡು ಬರುತ್ತದೆ, ಅಲ್ಲಿ ಅದು "ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ" ಎಂದು ಅನುವಾದಿಸಲ್ಪಟ್ಟಿದೆ. ಗುಣವಾಚಕ ರೂಪವಾದ *teleios* ಎಂಬುದು ದೋಷರಹಿತ ಪರಿಪೂರ್ಣತೆಯೆಂಬುದಕ್ಕಿಂತಲೂ ಸಂಪೂರ್ಣತೆ ಎಂಬ ಅರ್ಥವನ್ನೊಳಗೊಂಡಿರುತ್ತದೆ (1:28 ನೋಡಿರಿ). **ಬಂಧವಾಗಿದೆ** (σύνδεσμος, *sundesmos*) ಎಂಬುದು ಸಂಗತಿಗಳನ್ನು ಒಂದಾಗಿ ಹಿಡಿದಿಟ್ಟುಕೊಳ್ಳುವಂಥದ್ದನ್ನು ಸೂಚಿಸುತ್ತದೆ. ಈ ಪದವು ಅಪೊಸ್ತಲರ ಕೃತ್ಯಗಳು 8:23ರಲ್ಲಿ "ಬಂಧನ" ಎಂದು ಮತ್ತು ಬೇರೊಂದು ಕಡೆಯಲ್ಲಿ "ಬಂಧ" ಮತ್ತು "ಕೀಲುನರಗಳು" ಎಂಬ ಭಾವಾನುವಾದಗೊಳಿಸಲ್ಪಟ್ಟಿದೆ (ಎಫೆಸ 4:3; ಕೊಲೊಸ್ಸೆ 2:19).

ಪ್ರೀತಿಯು "ಸಂಪೂರ್ಣಮಾಡುವ ಬಂಧ" ಎಂಬದರ ವಿಷಯವಾಗಿ ಮೂರು ಪ್ರಮುಖ ವ್ಯಾಖ್ಯಾನಗಳು ಸಲಹೆ ಮಾಡಲ್ಪಟ್ಟಿವೆ: ಪ್ರೀತಿಯು ಕ್ರೈಸ್ತರನ್ನು ಒಂದುಗೂಡಿಸುವ ಬಂಧ, ಕ್ರೈಸ್ತ ಸದ್ಗುಣಗಳನ್ನು ಒಟ್ಟಾಗಿ ಬಿಗಿಯುತ್ತದೆ, ಅಥವಾ ಒಬ್ಬ ಕ್ರೈಸ್ತನ ಜೀವಿತದಲ್ಲಿ ಪರಿಪೂರ್ಣತೆಯನ್ನು ತರುತ್ತದೆ. ಕ್ರೈಸ್ತರ ಜೀವಿತದಲ್ಲಿ ಪ್ರೀತಿಯ ಪ್ರಭಾವ ವಿಷಯದಲ್ಲಿ ಈ ಮೂರರಲ್ಲಿ ಯಾವದೂ ನ್ಯಾಯವಲ್ಲದ ಅಭಿಪ್ರಾಯವಾಗದು. ಪ್ರತಿಯೊಂದು ವ್ಯಾಖ್ಯಾನದ ಕುರಿತು ಇನ್ನಷ್ಟು ಸೂಕ್ಷ್ಮವಾಗಿ ಅಧ್ಯಯನ ಮಾಡೋಣ.

ಮೊದಲನೆಯದಾಗಿ, ಯೇಸುವಿನ ಹಿಂಬಾಲಕರನ್ನು ಐಕ್ಯತೆಯಲ್ಲಿ ಬಿಗಿಯುದಕ್ಕೆ ಸಂಪೂರ್ಣ ಸಾಕಾಗುವಂಥ ಅಂಟು ಆಗಿದ್ದು ಅದಕ್ಕೆ ಅವಶ್ಯಕವಾದದ್ದೆಲ್ಲವನ್ನೂ ಒಳಗೊಂಡಿರುತ್ತದೆ. ಅದು ಎಲ್ಲಾ ಜೋಡಿಸುವ ಸಾಧನಗಳಲ್ಲಿಯೇ ಪ್ರೀತಿಯು ಶ್ರೇಷ್ಠವಾದದ್ದು. ನಾವು ಪ್ರೀತಿಯಲ್ಲಿರುವ ಬಂಧದ ಶಕ್ತಿಯ ನಿಮಿತ್ತವಾಗಿ ಒಬ್ಬರಿಗೊಬ್ಬರು ಸಮೀಪವಾಗಲ್ಪಟ್ಟು ಒಂದುಗೂಡಿಸಲ್ಪಡುತ್ತೇವೆ. ಯೋನಾತಾನನ ಆತ್ಮವು ಹೇಗೆ ದಾವೀದನ ಆತ್ಮದೊಂದಿಗೆ ಒಂದಾಗಿ ಹೆಣೆಯಲ್ಪಟ್ಟಿತ್ತು ಅಥವಾ ಬಂಧಿಸಲ್ಪಟ್ಟಿತ್ತೆಂಬುದು ಅದಕ್ಕೊಂದು ಉದಾಹರಣೆಯಾಗಿದೆ (1 ಸಮುವೇಲ 18:1).

ಎರಡನೆಯದಾಗಿ, ಪ್ರೀತಿಯು ಇತರ ಎಲ್ಲಾ ಸದ್ಗುಣಗಳ ಸುತ್ತ ಕಟ್ಟಲ್ಪಟ್ಟು ಅವುಗಳನ್ನು

ಪರಿಪೂರ್ಣ ಐಕ್ಯತೆಯಲ್ಲಿ ಹಿಡಿದಿಟ್ಟುಕೊಳ್ಳುವ ಸದ್ಗುಣದ ಬಂಧವಾಗಿರುತ್ತದೆ. ಅದು ಅವುಗಳನ್ನು ಸುಸಂಯೋಜಿರ ಸಮಷ್ಟಿಯಾಗಿ ಒಂದುಗೂಡಿಸುತ್ತದೆ. ಪ್ರೀತಿಯು ಈ ಪ್ರಭಾವವನ್ನು ಹೊಂದಿರುತ್ತದೆಂಬ ಯೋಚನೆಯು ಸಾಧ್ಯವಿರುತ್ತದೆ ಆದರೆ ಇದೊಂದು ಸಂಶಯಭರಿತ ವಿವರಣೆಯಾಗಿರುತ್ತದೆ.

ಮೂರನೆಯದಾಗಿ, ಪ್ರೀತಿಯು ಆತ್ಮೀಕ ಪ್ರವೀಣತೆ ಅಥವಾ ಪರಿಪೂರ್ಣತೆಯನ್ನು ಉಂಟು ಮಾಡುವ ಗುಣವಾಗಿರುತ್ತದೆ. ಇದು ಅರ್ಥವಾಗಿದ್ದಲ್ಲಿ, ಇದು ಇತರ ಸದ್ಗುಣಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವಂತೆ ಕ್ರೈಸ್ತರಿಗೆ ಪ್ರೇರಕವಾಗುವಂಥ ಗುಣವಾಗಿದೆ ಎಂದಾಗುತ್ತದೆ (1 ಕೊರಿಂಥ 13:4-7). ಕೆಲವರು ಇದನ್ನು ಮೊದಲನೆಯದ್ದರೊಂದಿಗೆ ಸೇರ್ಪಡೆಗೊಳಿಸಿ ವ್ಯಕ್ತಪಡಿಸುವ ಅಭಿಪ್ರಾಯವೇನೆಂದರೆ, ಪ್ರೀತಿಯು ಕ್ರೈಸ್ತರನ್ನು ಸಾಮರಸ್ಯದೊಂದಿಗೆ ಒಂದಾಗಿ ಕೂಡಿಸುತ್ತದಾದ್ದರಿಂದ, ಇದು ಸಂಪೂರ್ಣವಾಗಿರುವ ಸಂಬಂಧಗಳನ್ನು ಉಂಟು ಮಾಡುತ್ತದೆ ಎಂಬದೆ. ವಿಶ್ವಾಸಿಗಳೊಳಗೆ ಸಂಬಂಧದಲ್ಲಿ ಪರಿಪೂರ್ಣತೆಯು ಅವರು ಒಬ್ಬರಿಗೊಬ್ಬರು ಹೊಂದಿರುವ ಪ್ರೀತಿಯ ಫಲಿತವಾಗಿಯೇ ಬರುತ್ತದೆ. ಕ್ರೈಸ್ತರು ಒಂದು ಗುಂಪಾಗಿ ಬೆಳವಣಿಗೆಯ ಪೂರ್ಣವಾದ ಮಟ್ಟವನ್ನು ತಲುಪಿ, ಕ್ರಿಸ್ತನಲ್ಲಿ ಸಮಾಧಾನಕರವಾದ ಐಕ್ಯತೆಯನ್ನು ಸಾಧಿಸಿಕೊಳ್ಳುವಂತೆ ಸಹಾಯ ಮಾಡುವ ಬಂಧವು ಪ್ರೀತಿಯಾಗಿರುತ್ತದೆ.

ಸಾರಾಂಶದಲ್ಲಿ, 3:12-14ರಲ್ಲಿ ಪೌಲನು ನೀಡುವ ಸದ್ಗುಣಗಳ ಪಟ್ಟಿಯು ಇವುಗಳಾಗಿವೆ:

“ಕನಿಕರ”ವು ಒಬ್ಬ ವ್ಯಕ್ತಿಯನ್ನು ಮತ್ತೊಬ್ಬರ ಕಷ್ಟ ಅಥವಾ ಬಾಧೆಯನ್ನು ನೋಡಿ ಅವರಿಗೆ ಸಹಾಯ ಮಾಡಬೇಕೆಂದು ಇಚ್ಛಿಸುವಷ್ಟರ ಮಟ್ಟಿಗೆ ಬೇರೆಯವರ ನೋವುಗಳನ್ನು ಅರ್ಥಮಾಡಿಕೊಳ್ಳುವಂತೆ ನಡಿಸುತ್ತದೆ.

“ದಯೆ”ಯು ಒಬ್ಬ ಕ್ರೈಸ್ತನನ್ನು ಬೇರೆಯರ ವಿಷಯದಲ್ಲಿ ಕಠೋರತೆ ಅಥವಾ ಒರಟುತನವಿಲ್ಲದೆ ಕೋಮಲತೆಯಿಂದ ವರ್ತಿಸುವಂತೆ ಪ್ರೇರಣೆಗೊಳಿಸುತ್ತದೆ.

“ದೀನಭಾವ”ವು ಒಬ್ಬ ವ್ಯಕ್ತಿಯನ್ನು ಎಲ್ಲಾ ವರ್ಗದ ಜನರೊಂದಿಗೆ ಒಂದಾಗಿ ತನ್ನನ್ನು ಬೇರೆಯವರಿಗಿಂತ ಹೆಚ್ಚಿಸಿಕೊಳ್ಳದಂತೆ ಅಥವಾ ಬೇರೆಯವರಿಗಿಂತ ಶ್ರೇಷ್ಠನೆಂದು ಭಾವಿಸಿಕೊಳ್ಳದಂತೆ ಮಾಡುತ್ತದೆ.

“ಸಾತ್ವಿಕತ್ವ”ವು ಸಂಬಂಧಗಳಲ್ಲಿ ವ್ಯಕ್ತಿತ್ವಗಳ ಒರಟು ತುದಿಗಳನ್ನು ಮೃದುಗೊಳಿಸುವಂಥ ಒಂದು ಮೆತ್ತನೆಯ ದಿಂಬು ಒದಗಿಸುತ್ತದೆ. ಇತರರ ಹೃದಯವನ್ನು ಆಕರ್ಷಿಸುವಂಥದ್ದು ಮೃದುವಾದ ಸ್ಪರ್ಶವೇ ಆಗಿರುತ್ತದೆ.

“ದೀರ್ಘಶಾಂತಿ”ಯು ಜೀವನ ಪ್ರಯಾಸಗಳನ್ನು ದೂರದೃಷ್ಟಿಯಿಂದ ನೋಡಿ ಇವುಗಳು ತಾತ್ಕಾಲಿಕವಾಗಿದ್ದು ಕಾಲ ಕಳೆದಂತೆ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುವಂಥವುಗಳೆಂದು ಗ್ರಹಿಸಿಕೊಳ್ಳುವ ಒಂದು ಗುಣವಾಗಿರುತ್ತದೆ.

“ಒಬ್ಬರಿಗೊಬ್ಬರು ಸೈರಿಸಿಕೊಳ್ಳುವದು” ಎಂಬುದು ಅವಮಾನಗಳನ್ನು ನಿರ್ಲಕ್ಷಿಸಿ, ಅಡೆತಡೆಗಳನ್ನು ಸಹಿಸಿಕೊಂಡು, ತಪ್ಪು ಮಾಡಲ್ಪಟ್ಟಾಗ ಪ್ರತಿಕಾರ ಸಲ್ಲಿಸಲು ನಿರಾಕರಿಸುವಂಥ ಒಂದು ಗುಣವಾಗಿರುತ್ತದೆ.

“ಕ್ಷಮಿಸುವದು” ಸ್ವತಃ ದೇವರ ಸ್ವಭಾವದ ಒಂದು ಗುಣವಾಗಿದ್ದು ಅದು

ಹಗೆತನವನ್ನು ಸಾಧಿಸುವದಿಲ್ಲ ಆದರೆ ತನಗೆ ಮಾಡಲ್ಪಟ್ಟ ತಪ್ಪನ್ನು ಮರೆತು ಬಿಡುವಂಥದ್ದಾಗಿದೆ.

"ಪ್ರೀತಿ" ಎಲ್ಲಾ ಸದ್ಗುಣಗಳನ್ನು ಒಟ್ಟಾಗಿ ಬಿಗಿಯುತ್ತದೆ, ಇತರರಿಗಾಗಿ ಕಾಳಜಿ ಹಾಗೂ ಕನಿಕರವನ್ನು ಮಿಶ್ರಣಗೊಳಿಸುತ್ತದೆ. ತಾನು ಯಾವದರ ಮೇಲೆ ವಾತ್ಸಲ್ಯ ಹೊಂದಿರುತ್ತದೋ ಅದಕ್ಕಾಗಿ ತನ್ನನ್ನು ತ್ಯಾಗ ಮಾಡಿಕೊಳ್ಳಲು ಮನಸ್ಸು ಹೊಂದಿರುವಂತೆ ನಡಿಸುತ್ತದೆ.

## ಹೆಚ್ಚಿನ ಅಧ್ಯಯನಕ್ಕಾಗಿ: "ಪ್ರೀತಿ" (3:14)

"ಪ್ರೀತಿ"ಯು "ಬೇರೆಯವರಿಗಾಗಿ ಮತ್ತು ಬೇರೆಯವರಲ್ಲಿ ಆಸಕ್ತಿ, ಗೌರವ, ಮಮತೆ, ಕಳಕಳಿ, ಪ್ರೀತಿ (ಯಾವದೇ ಮೀತಿಯಲ್ಲದೆ ಸ್ವತಃ ಸಲಿಗೆಯ ಸಂಬಂಧಗಳ ಕಡೆಗೆ, ಮತ್ತು ಬಹಳ ವಿರಳವಾಗಿ ಸಾಮಾನ್ಯ ಗ್ರೀಕ್.ನಲ್ಲಿ ಲೈಂಗಿಕ ಆಕರ್ಷಣೆಯಲ್ಲಿ)" ಎಂದು ಅರ್ಥನಿರೂಪಿಸಲ್ಪಟ್ಟಿದೆ.[36] ವಿವಿಧ ರೂಪಗಳಲ್ಲಿರುವ ಎರಡು ಗ್ರೀಕ್ ಪದಗಳು, ಹೊಸ ಒಡಂಬಡಿಕೆಯಲ್ಲಿ "ಪ್ರೀತಿ" ಎಂದು ಅನುವಾದಿಸಲ್ಪಟ್ಟಿವೆ: (1) Φίλος (*philos*) ಎಂಬುದು ಒಂದು ಗುಣವಾಚಕವಾಗಿದ್ದು "ಸ್ನೇಹಿತ" ಎಂದು ಅನುವಾದಿಸಲ್ಪಟ್ಟಿದೆ, ಅದು "ಪ್ರೀತಿ" ಎಂಬ ಅರ್ಥವನ್ನು ಕೊಡುವ φιλέω (*phileō*) ಎಂಬ ಕ್ರಿಯಾಪದದ ಅದೇ ಮೂಲಪದದಿಂದ ಬಂದದ್ದಾಗಿದೆ. ಅದೇ ಮೂಲ ಪದದಿಂದ (φιλία, *philia*) ಬಂದ "ಪ್ರೀತಿ" ಎಂಬುದಕ್ಕಾಗಿರುವ ನಾಮಪದವು, ಯಾಕೋಬ 4:4ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. *Phileō* ಎಂಬುದರ ಮೂಲಭೂತ ಅರ್ಥವು ಭಾವದಿಂದ ಪ್ರಚೋದಿಸಲ್ಪಟ್ಟ ಒಲವು, ಮತ್ತೊಬ್ಬ ವ್ಯಕ್ತಿಯಲ್ಲಿ ಸಂತೋಷಿಸು ಮತ್ತು ಸ್ನೇಹ ಭಾವ ಹೊಂದು ಎಂದಾಗಿರುತ್ತದೆ. (2) ಕ್ರಿಯಾಪದವಾದ ἀγαπάω (*agapaō*) ಎಂಬುದು 3:12, 19ರಲ್ಲಿ ಕಾಣಿಸಿಕೊಳ್ಳುತ್ತದೆ, ಮತ್ತು ಈ ಪದದ ನಾಮಪದ ರೂಪವು (ἀγάπη, *agapē*) 1:4, 8, 13; 2:2; 3:14ರಲ್ಲಿ ಬಳಸಲ್ಪಟ್ಟಿದೆ. *Agapaō* ಯು ವಾತ್ಸಲ್ಯ, ಸೌಹಾರ್ದತೆ, ಮತ್ತು ಆದರದ ಕಳಕಳಿ ಆಗಿರುತ್ತದೆ. ಪೌಲನ ಕಾಲದ ಹೊತ್ತಿಗೆ, *agapaō* ವು ಬಹಳಷ್ಟು ಸಾರಿ ಪ್ರೀತಿಯನ್ನು ವ್ಯಕ್ತಪಡಿಸುವದಕ್ಕೆ ಬಳಸಲ್ಪಡುವ ಮತ್ತು *phileō*ವನ್ನು ಒಳಗೊಂಡಿರುವಂಥ ಪದವಾಗಿ ಮಾರ್ಪಡುತ್ತಲಿತ್ತು. ಎರಡು ಪದಗಳ ಬಳಕೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅತಿವ್ಯಾಪನೆಯಾಗುತ್ತಿತ್ತು. "ಪ್ರೀತಿ" ಎಂಬುದಕ್ಕೆ ಬಳಸಲ್ಪಡುವ ಗ್ರೀಕ್.ನ ಇನ್ನೊಂದು ಪದವು, ἔρος (*eros*, ಕಾಮದ ಪ್ರೀತಿಯನ್ನು ಸೂಚಿಸುತ್ತದೆ) ಎಂಬದು ಹೊಸ ಒಡಂಬಡಿಕೆಯಲ್ಲಿ ಕಾಣಿಸಿಕೊಳ್ಳುವದಿಲ್ಲ.

*Phileō*. ಪೌಲನು 1 ಕೊರಿಂಥ 16:22 ಮತ್ತು ತೀತನಿಗೆ 3:15ರಲ್ಲಿ *phileō* ಕ್ರಿಯಾಪದವನ್ನು ಬಳಸಿದನು. ಇದು ಯೋಹಾನನ ಸುವಾರ್ತೆಯಲ್ಲಿ ಹೆಚ್ಚು ಸಾರಿ, ಅಂದರೆ ಹನ್ನೊಂದು ಸಾರಿ ಕಾಣಿಸಿಕೊಳ್ಳುತ್ತದೆ. *Phileō*ವು ಸ್ನೇಹ, ಅತಿಪ್ರೀತಿ, ಮತ್ತು ಬೇರೆಯವರ ಕಡೆಗೆ ಸಹೋದರಭಾವವನ್ನು ಹೊಂದಿರುವದು ಎಂಬದಾಗಿ ಅರ್ಥನಿರೂಪಿಸಲ್ಪಟ್ಟಿರುತ್ತದೆ. ಗ್ರೀಕ್ ಗುಣವಾಚಕವಾದ *philos* ಎಂಬುದು ಇಪ್ಪತ್ತೊಂಭತ್ತು ಸಾರಿ "ಸ್ನೇಹಿತ" ಎಂದು ಅನುವಾದಿಸಲ್ಪಟ್ಟಿದೆ. ಇದು ಅನೇಕ ಸಾರಿ ಸಂಯುಕ್ತ ಪದಗಳಲ್ಲಿ ಬಳಸಲ್ಪಡುತ್ತದೆ:

“ಸಹೋದರ ಪ್ರೀತಿ,” *philadelphia* (ರೋಮಾ 12:10); “ಹಣದಾಸೆ,” *philarguria* (1 ತಿಮೊಥೆ 6:10); “ಹಣದಾಸೆಯವರು,” *philarguros* (2 ತಿಮೊಥೆ 3:2); *philautos* “ಸ್ವಾರ್ಥಚಿಂತಕರು” (2 ತಿಮೊಥೆ 3:2); *philedonos* “ಭೋಗಗಳನ್ನು ಪ್ರೀತಿಸುವವರು” (2 ತಿಮೊಥೆ 3:4); “ದೇವರನ್ನು ಪ್ರೀತಿಸುವವರು,” *philotheos* (2 ತಿಮೊಥೆ 3:4); “ಒಳ್ಳೇದನ್ನು ಪ್ರೀತಿಸುವವನು,” *philagathos* (ತೀತನಿಗೆ 1:8); “ಗಂಡಂದಿರನ್ನೂ . . . ಪ್ರೀತಿಸುವವರು,” *philandros* (ತೀತನಿಗೆ 2:4); “ಮಕ್ಕಳನ್ನು ಪ್ರೀತಿಸುವವರು,” *philoteknos* (ತೀತನಿಗೆ 2:4); ಮತ್ತು “ಜನೋಪಕಾರ [ದೇವರ ಪ್ರೀತಿ],” *philanthrōpōs* (ತೀತನಿಗೆ 3:4).

*Phileō* ವು ಸ್ವಾಭಾವಿಕ ಪ್ರೀತಿಯನ್ನೊಳಗೊಂಡು ಇರುತ್ತದಾದರೂ, ಅದು ಒಂದು ಕಲಿತುಕೊಂಡ ಪ್ರೀತಿ ಸಹ ಆಗಿರಬಲ್ಲದು. ಹಿರಿಯ ಸ್ತ್ರೀಯರು ಕಿರಿಯ ಸ್ತ್ರೀಯರಿಗೆ ತಮ್ಮ ಗಂಡಂದಿರನ್ನ ಪ್ರೀತಿಸುವಂತೆ ಕಲಿಸಿ ಕೊಡತಕ್ಕದ್ದು (ತೀತನಿಗೆ 2:4). (ಗ್ರೀಕ್.ನಲ್ಲಿ ಒಂದು ಪದವು, φιλάνδρος [*philandros*] ಎಂಬುದು “ಗಂಡಂದಿರನ್ನು ಪ್ರೀತಿಸುವವರು” ಎಂಬ ಅರ್ಥವನ್ನು ಕೊಡುತ್ತದೆ.) ಸ್ಪಷ್ಟವಾಗಿ ತೋರುವ ಪ್ರಕಾರ, *phileō* ವು ಕಲಿಸಲ್ಪಡಬಲ್ಲದು ಮಾತ್ರವಲ್ಲದೆ “ಹಿಡಿದುಕೊಳ್ಳಲ್ಪಡಬಲ್ಲದ್ದೂ” ಆಗಿದೆ.

*Agapaō*. ಈ ವಿಧವಾದ ಪ್ರೀತಿಯು *phileō* ಪ್ರೀತಿಯನ್ನು[37] ಒಳಗೊಂಡಿರಬಹುದಾದರೂ, *agapaō* ಸಂಬಂಧದಲ್ಲಿ ಮತ್ತೊಬ್ಬರಿಗಾಗಿ *phileō*ಗಿಂತಲೂ ಆಳವಾದ ಕಳಕಳಿಯು ಅಡಕವಾಗಿರುತ್ತದೆ. ಎರಡರಲ್ಲಿಯೂ ಯಾವದೋ ಒಂದಕ್ಕೆ ಒಲವು ತೋರುವದು, ಉದಾಹರಣೆಗೆ ಮುಖ್ಯ ಪೀಠಗಳ ಮೇಲೆ ಪ್ರೀತಿ ಹೊಂದಿರುವದು (ಮತ್ತಾಯ 23:6ರಲ್ಲಿ *phileō*; ಲೂಕ 11:43ರಲ್ಲಿ *agapaō*) ಅಥವಾ ಒಬ್ಬ ವ್ಯಕ್ತಿಗಾಗಿ ಪ್ರೀತಿಯನ್ನು ಹೊಂದಿರುವದು, ಉದಾಹರಣೆಗೆ “ತನ್ನ ಪ್ರೀತಿಯ ಶಿಷ್ಯನ” ಕಡೆಗೆ ಯೇಸು ಹೊಂದಿದ್ದ ಪ್ರೀತಿ (*agapaō*; ಯೋಹಾನ 19:26; 21:7, 20ರಲ್ಲಿ; *phileō* ಯೋಹಾನ 20:2ರಲ್ಲಿ). ದೇವರು ತಾನು ಪ್ರೀತಿಸುವವರನ್ನೇ ಶಿಕ್ಷಿಸುತ್ತಾನೆ ಮತ್ತು ಗದರಿಸುತ್ತಾನೆ (ಇಬ್ರಿಯ 12:6ರಲ್ಲಿ *agapaō*; *phileō* ಪ್ರಕಟನೆ 3:19ರಲ್ಲಿ). ಅನೇಕ ಸಂದರ್ಭಗಳಲ್ಲಿ *agapaō* ವು ಆಜ್ಞಾಪಿಸಲ್ಪಟ್ಟಿರುವದರಿಂದ, ಅದು ಯಾವಾಗಲೂ ಸ್ವಭಾವಿಕ ವಾತ್ಸಲ್ಯ ಎಂಬ ಅರ್ಥವನ್ನು ಕೊಡದಿರಬಹುದು. ಹೇಗೂ, ಯೇಸು ಯೌವನಸ್ಥನನ್ನು ದೃಷ್ಟಿಸಿ ನೋಡಿ ಪ್ರೀತಿಸಿದನು (ಮಾರ್ಕ 10:21), ಇದು ಸ್ವಭಾವಿಕ ವಿಧವಾದ ಪ್ರೀತಿ ಎಂಬ ಸೂಚ್ಯಾರ್ಥವಿರುವಂತೆ ತೋರುತ್ತದೆ.

ಕೆಲವರು *agapaō* ದಲ್ಲಿ ಯಾವದೇ ಭಾವನಾತ್ಮಕ ಮಮತೆಯು ಇರುವದಿಲ್ಲ ಎಂಬ ನಿರ್ಧಾರಕ್ಕೆ ಬಂದಿರುತ್ತಾರೆ, ಮುಖ್ಯ ಕಾರಣವೆಂದರೆ ತನ್ನ ಹಿಂಬಾಲಕು ಅವರ ವೈರಿಗಳನ್ನು ಪ್ರೀತಿಸಬೇಕೆಂದು ಯೇಸು ಕಲಿಸಿದನು ಎಂಬದೆ. ಪ್ರೀತಿಯಲ್ಲಿ ಮಟ್ಟಗಳಿರುವದರಿಂದ (ಮತ್ತಾಯ 10:37; ಲೂಕ 7:42, 47; ಯೋಹಾನ 15:13), ಜೊತೆ ಕ್ರೈಸ್ತರ ಕಡೆಗೆ ನಮಗಿರುವ ಅಷ್ಟೇ ಆಳವಾದ ಮಮತೆಯಿಂದ ನಮ್ಮ ವೈರಿಗಳನ್ನು ಪ್ರೀತಿಸಬೇಕೆಂದು ಹೇಳಲ್ಪಟ್ಟಿರುವದಿಲ್ಲ ಎಂಬ ನಿರ್ಧಾರಕ್ಕೆ ನಾವು ಬರಬಹುದು. ಒಂದು ರೀತಿಯ ಅರ್ಥದಲ್ಲಿ, ಯೇಸು ತನ್ನ ಶಿಷ್ಯರಲ್ಲೊಬ್ಬನನ್ನು ಮಿಕ್ಕವರಿಗಿಂತಲೂ ಅಧಿಕವಾಗಿ ಪ್ರೀತಿಸಿರಬಹುದಾಗಿದೆ. ಯೋಹಾನ 19:26 ಮತ್ತು 21:7, 20ರಲ್ಲಿ ಹೆಚ್ಚಿನ ಮಮತೆಯು ಸೂಚ್ಯಾರ್ಥವಾಗಿ ಕಾಣುತ್ತದೆ.

ಕ್ರೈಸ್ತರಿಂದ ವಿವಿಧ ಮಟ್ಟದ ಪ್ರೀತಿಯು ಅಪೇಕ್ಷಿಸಲ್ಪಡುತ್ತದೆ. ಅತ್ಯುನ್ನತ ಮಟ್ಟದ ಪ್ರೀತಿಯು ದೇವರಿಗೋಸ್ಕರವಾಗಿರುತ್ತದೆ. ನಾವು ಆತನನ್ನು ನಮ್ಮ ಪೂರ್ಣ ಹೃದಯಗಳಿಂದಲೂ ಪೂರ್ಣ ಪ್ರಾಣಗಳಿಂದಲೂ, ಮನಸ್ಸುಗಳಿಂದಲೂ, ಮತ್ತು ಬಲದಿಂದಲೂ ಪ್ರೀತಿಸುವವರಾಗಿರಬೇಕು (ಮತ್ತಾಯ 22:37; ಮಾರ್ಕ 12:30). ಎರಡನೆಯ ಮಟ್ಟದ ಪ್ರೀತಿಯು ನಮ್ಮ ಕುಟುಂಬ ಮತ್ತು ಜೊತೆ ಕ್ರೈಸ್ತರಿಗಾಗಿ ಇರುವ ಪ್ರೀತಿಯಾಗಿದೆ, ಅದು ಯೇಸು ತನ್ನ ಹಿಂಬಾಲಕರ ಮೇಲೆ ಇಟ್ಟಿದ್ದ ಪ್ರೀತಿಯಾಗಿತ್ತು (ಯೋಹಾನ 13:34). ಮೂರನೆಯ ಮಟ್ಟವು ನಮ್ಮ ನೆರೆಯವರ ಮೇಲಿರುವ ಪ್ರೀತಿಯಾಗಿದೆ, ಅವರನ್ನು ನಾವು ನಮ್ಮಂತೆಯೇ ಪ್ರೀತಿಸಬೇಕಾಗಿರುತ್ತದೆ (ಮತ್ತಾಯ 22:39). ಕೊನೆಯ ಮಟ್ಟವು ನಮ್ಮ ವೈರಿಗಳಿಗಾಗಿ ಇರುವ ಪ್ರೀತಿಯಾಗಿದೆ (ಮತ್ತಾಯ 5:44; ಲೂಕ 6:35). ನಾವು ದೇವರನ್ನು, ನಮ್ಮ ಜೊತೆ ಕ್ರೈಸ್ತರನ್ನು, ಅಥವಾ ನಮ್ಮ ನೆರೆಯವರನ್ನು ಪ್ರೀತಿಸುವ ವಿಧದಲ್ಲಿಯೇ ನಮ್ಮ ವೈರಿಗಳನ್ನು ಪ್ರೀತಿಸಬೇಕೆಂದು ಹೇಳಲ್ಪಟ್ಟಿಲ್ಲ.

*Agapaō* ಮತ್ತು *phileō* ಎಂಬವುಗಳಲ್ಲಿ ಅರ್ಥದ ಛಾಯೆಗಳು ಏನೇ ಆಗಿದ್ದರೂ ಸರಿಯೇ, ಕ್ರೈಸ್ತರು ಒಬ್ಬರಿಗೊಬ್ಬರು ಯಾಥಾರ್ಥ ಪ್ರೀತಿಯನ್ನು ಹೊಂದಿರತಕ್ಕದ್ದು. "ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ?" (1 ಯೋಹಾನ 3:17). ಒಬ್ಬ ಕ್ರೈಸ್ತನು ತನ್ನ ಜೊತೆ ಕ್ರೈಸ್ತನೆಡಗೆ ಎಷ್ಟೊ ಹೆಚ್ಚು ಪ್ರೀತಿಯನ್ನು ಹೊಂದಿರುತ್ತಾನೋ ಅಷ್ಟು ಹೆಚ್ಚಾಗಿ ಆತನು ದೇವರ ಸಾರೂಪ್ಯವುಳ್ಳವನಾಗುವನು; ಯಾಕೆಂದರೆ ದೇವರು ಪ್ರೀತಿಸ್ವರೂಪಿಯಾಗಿದ್ದಾನೆ (1 ಯೋಹಾನ 4:8). ಯೇಸು ತನ್ನ ಹಿಂಬಾಲಕರ ಮೇಲೆ ಹೊಂದಿರುವ ಪ್ರೀತಿಯೇ ಅವರ ಹೃದಯಗಳನ್ನು ತುಂಬಿರಬೇಕಾದ ಪ್ರೀತಿಯಾಗಿದ್ದು ಅವರು ದೇವರಿಗೆ ಮಾಡುವ ಸೇವೆಯಲ್ಲಿ ಪ್ರೇರಣೆಯಾಗಿರತಕ್ಕದ್ದು. ಪ್ರೀತಿಯು ಹೃದಯದಿಂದ ಉದ್ಭವಿಸಿದ ಶಿಷ್ಯತ್ವದ ಲಾಂಛನವಾಗಿದ್ದು ಅದನ್ನು ಕ್ರೈಸ್ತರು ಒಂದು ಗುರುತಾಗಿ ಧರಿಸಿಕೊಳ್ಳಬೇಕು. ಪ್ರೀತಿಯು ನಾವು ಯೇಸುವಿನ ಶಿಷ್ಯರೆಂಬುದು ಎಲ್ಲರಿಗೂ ತಿಳಿಯುವಂತೆ ಮಾಡುವದಾಗಿದೆ (ಯೋಹಾನ 13:35).

## ಹೆಚ್ಚಿನ ಅಧ್ಯಯನಕ್ಕಾಗಿ:
## ಕ್ಷಮಾಪಣೆ (3:13)

*ಕ್ಷಮಾಪಣೆಯೆಂದರೆ ಏನು?* ನಾವು ಕ್ಷಮಿಸಲ್ಪಡಬೇಕೆಂದರೆ ಬೇರೆಯವರನ್ನು ನಾವು ಕ್ಷಮಿಸಬೇಕು ಎಂಬದಾಗಿ ಯೇಸು ಕಲಿಸಿದನು. ಕ್ಷಮಾಪಣೆಯ ಚರ್ಚೆಯಲ್ಲಿ ನಾಲ್ಕು ವಿವಿಧ ಪದಗಳು ಬಳಸಲ್ಪಟ್ಟಿವೆ.

1. ಪಾಪದಿಂದ "ಬಿಡಿಸು" ಅಥವಾ "ಸ್ವಾತಂತ್ರ್ಯ ಕೊಡು" ಎಂಬ ಅರ್ಥವಿರುವ ἄφεσις (*aphesis*) ಎಂಬ ಪದವು, ದೇವರ ಚಟುವಟಿಕೆಯನ್ನು ಸೂಚಿಸಿ ಬಳಸಲ್ಪಟ್ಟಿದೆ ಹೊರತು ನಾವು ಬೇರೆಯವರನ್ನು ಕ್ಷಮಿಸುವ ವಿಷಯದಲ್ಲಿ ಅಲ್ಲ.[38]

2. ἀπολούω (*apolouō*) ಎಂಬ ಪದವು ಒಂದೇ ಒಂದು ಸಾರಿ "ಮನ್ನಿಸುವಿಕೆ" ("ಕ್ಷಮಿಸು"; KJV) ಎಂದು ಅನುವಾದಿಸಲ್ಪಟ್ಟಿದ್ದು, ಅದು ಬೇರೆಯವರನ್ನು ಕ್ಷಮಿಸುವದನ್ನು ಸೂಚಿಸಿ ಬಳಸಲ್ಪಟ್ಟಿದೆ: "ಬಿಡಿಸಿರಿ, ಆಗ ನಿಮ್ಮನ್ನೂ ಬಿಡಿಸುವರು" (ಲೂಕ 6:37). ಬೇರೆ

ವಾಕ್ಯಭಾಗಗಳಲ್ಲಿ ಅದು "ಕಳುಹಿಸಿಬಿಡು" (ಮತ್ತಾಯ 15:23), "ಬಿಟ್ಟು ಬಿಡುವದು" (ಮತ್ತಾಯ 19:3), ಮತ್ತು "ಬಿಟ್ಟು ಕೊಡುವದು" (ಮತ್ತಾಯ 27:15).

3. ἀφίημι (*aphiēmi*) ಎಂಬ ಪದವು ಬಹಳಷ್ಟು ಸಾರಿ "ಒಪ್ಪಿಕೋ" (ಮತ್ತಾಯ 3:15) ಅಥವಾ "ಬಿಟ್ಟುಬಿಟ್ಟನು" (ಮತ್ತಾಯ 4:11). ಯೇಸು ಪರ್ವತದ ಮೇಲಿನ ಪ್ರಸಂಗದಲ್ಲಿ ಹೇಳಿಕೊಟ್ಟ ಮಾದರಿ ಪ್ರಾರ್ಥನೆಯಲ್ಲಿ ಇತರರ ಸಾಲಗಳನ್ನು ಕ್ಷಮಿಸುವ ಬಗ್ಗೆ ಉಲ್ಲೇಖಿಸುತ್ತಾನೆ (ಮತ್ತಾಯ 6:12; ನೋಡಿರಿ ಲೂಕ 11:4). ಇದಾದ ಬಳಿಕ ನಾವು ಬೇರೆಯವರ ತಪ್ಪುಗಳನ್ನು (παράπτωμα, *paraptōma*; ಅಲ್ಲದೆ "ಅಪರಾಧಗಳು" ಎಂದು ಸಹ ಆಗಿದೆ; ರೋಮಾ 4:25; KJV) ಕ್ಷಮಿಸಬೇಕೆಂಬದಾಗಿ ಆತನು ಹೇಳುತ್ತಾನೆ (ಮತ್ತಾಯ 6:14, 15; ಮಾರ್ಕ 11:25, 26). ಪೇತ್ರನು ನಮ್ಮ ವಿರುದ್ಧ ಪಾಪ (ἁμαρτία, *hamartia*) ಮಾಡುವವರನ್ನು ಕ್ಷಮಿಸುವ ಬಗ್ಗೆ ಕೇಳುತ್ತಾನೆ (ಮತ್ತಾಯ 18:21). ನಮ್ಮ ವಿರುದ್ಧ ಪಾಪ ಮಾಡುವವರನ್ನು ನಾವು ಗದರಿಸತಕ್ಕದ್ದು. ಅವರು ಪಶ್ಚಾತ್ತಾಪ ಪಡುವದಾದಲ್ಲಿ, ನಾವು ಅವರನ್ನು ಕ್ಷಮಿಸಬೇಕು (ಲೂಕ 17:3, 4).

4. χαρίζομαι (*charizomai*) ಎಂಬ ಇನ್ನೊಂದು ಪದವು, "ಕ್ಷಮಿಸು" ಎಂದು ಅನುವಾದಿಸಲ್ಪಟ್ಟಿದ್ದು, ಅದು "ಔದಾರ್ಯದಿಂದ ಕ್ಷಮಿಸು" ಎಂಬ ಅರ್ಥವನ್ನು ಕೊಡುತ್ತದೆ, ಹೀಗೆ ನಮ್ಮ ನೋವಿನ ಭಾವನೆಗಳನ್ನು ಸಂತೃಪ್ತಿ ಪಡಿಸುವಂತೆ ಬೇರೆಯವರಿಗೆ ಬೇಡಿಕೆಯನ್ನಿಡದೆಯೇ ಮುಕ್ತವಾಗಿ ಕ್ಷಮಿಸುವದು (ಎಫೆಸ 4:32; ಕೊಲೊಸ್ಸೆ 3:13).

*ನಮ್ಮ ವಿರುದ್ಧ ಮಾಡಿದ ಪಾಪದ ವಿಷಯವೇನು?* ಪೇತ್ರನು ಕ್ಷಮಾಪಣೆಯಲ್ಲಿ ಆಸಕ್ತಿ ಹೊಂದಿದ್ದನು, ಯಾಕೆಂದರೆ ಆತನು ಯೇಸುವನ್ನು, "ಸ್ವಾಮೀ, ನನ್ನ ಸಹೋದರನು ನನಗೆ ತಪ್ಪುಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ ಎಂದು ಕೇಳಲು ಯೇಸು ಅವನಿಗೆ - ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ" (ಮತ್ತಾಯ 18:21, 22). ಬಳಿಕ ಆತನು ಇಬ್ಬರು ಸೇವಕರ ಬೇರೆ ಬೇರೆ ಮೊತ್ತದ ಹಣದ ಸಾಲವನ್ನು ಕ್ಷಮಿಸಿದ ಒಬ್ಬ ಅರಸನ ಉದಾಹರಣೆಯನ್ನು ಕೊಟ್ಟನು. ಹೆಚ್ಚಿನ ಸಾಲವನ್ನು ಕ್ಷಮಿಸಲ್ಪಟ್ಟಿದ್ದ ವ್ಯಕ್ತಿಯು ಹಿಂಸಿಸಲ್ಪಟ್ಟನು ಯಾಕೆಂದರೆ ಆತನು ತನ್ನ ಜೊತೆ ಸೇವಕನ ಸಾಲವನ್ನು ಕ್ಷಮಿಸುವದಕ್ಕೆ ಮನಸ್ಸಿಲ್ಲದವನಾಗಿದ್ದನು. ಯೇಸು ಹೀಗೆ ಹೇಳುವ ಮೂಲಕ ಮುಕ್ತಾಯಗೊಳಿಸುತ್ತಾನೆ, "ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು" (ಮತ್ತಾಯ 18:35).

ನಮಗೆ ವಿರುದ್ಧವಾಗಿ ಪಾಪ ಮಾಡುವವರ ವಿಷಯದಲ್ಲಿ ನಾವು ಯಥಾರ್ಥವಾದ ಕಾಳಜಿಯೊಂದಿಗೆ ನಡೆದುಕೊಳ್ಳಬೇಕು. ಅವರು ಪಶ್ಚಾತ್ತಾಪ ಪಡುವದಾದರೆ, ನಾವು ಅವರನ್ನು ಕ್ಷಮಿಸಬೇಕು (ಲೂಕ 17:3, 4). ಯೇಸು ಇದಕ್ಕೆ ಸೇರಿಸಿ ಹೇಳಿದ್ದೇನೆಂದರೆ, ಸಹೋದರನು ವೈಯಕ್ತಿಕವಾಗಿ ಮಾತಾಡಿದಾಗ ನಮ್ಮ ಮಾತನ್ನು ಕೇಳದಿದ್ದಾಗ, ಒಬ್ಬರು ಅಥವಾ ಹೆಚ್ಚಾದ ಸಾಕ್ಷಿಗಳನ್ನು ನಮ್ಮೊಂದಿಗೆ ಕರೆದೊಯ್ಯಬೇಕು. ಆಗಲೂ ಆತನು ಕೇಳುವದಕ್ಕೆ ನಿರಾಕರಿಸಿದಾಗ, ಸಮಸ್ಯೆಯನ್ನು ಸಭೆಯ ಮುಂದೆ ತೆಗೆದುಕೊಂಡು ಹೋಗಬೇಕು; ಆತನು ಸಭೆಯ ಆಲೋಚನೆಯನ್ನು ಒಪ್ಪಿಕೊಳ್ಳದಿದ್ದಲ್ಲಿ ಆತನನ್ನು "ಅವನು ಒಬ್ಬ ಕ್ರೈಸ್ತನಾಗಿರಲೇ ಇಲ್ಲವೇನೋ"[39] ಎಂಬಂತೆ ಪರಿಗಣಿಸತಕ್ಕದ್ದು (ಮತ್ತಾಯ 18:15-17).

ಕೆಲವು ಪರಿಸ್ಥಿತಿಗಳಲ್ಲಿ ನಾವು ನಮ್ಮ ವಿರುದ್ಧ ಪಾಪ ಮಾಡುವವರನ್ನು ಗದರಿಸುವದಕ್ಕೆ ಸಾಧ್ಯವಾಗದಿರಬಹುದು. ಹೀಗಿರುವದಾದಲ್ಲಿ, ಅವರನ್ನು ಕ್ಷಮಿಸಿ ಬಿಡುವದೇ ಸೂಕ್ತವಾದ ಪ್ರತಿಕ್ರಿಯೆಯಾಗುವದು (ಲೂಕ 23:34; ಅಪೊಸ್ತಲರ ಕೃತ್ಯಗಳು 7:60).

ಸಾಲಗಳು ಅಥವಾ ನಾಗರಿಕ ಕರ್ತವ್ಯಗಳಿಗಿಂತಲೂ ನಮ್ಮ ವಿರುದ್ಧ ಮಾಡಿದ ಪಾಪಗಳು ವ್ಯತ್ಯಾಸವಾದವುಗಳು. ನಾವು ಪ್ರಾರ್ಥಿಸುತ್ತಿರುವ ವೇಳೆಯಲ್ಲಿ ಮತ್ತೊಬ್ಬನ ವಿರುದ್ಧ ಯಾವದಾದರೊಂದನ್ನು ಕ್ಷಮಿಸಿದೆ ಇದ್ದಿರುವದಾದರೆ ಅದನ್ನು ಕ್ಷಮಿಸಬೇಕೆಂದು ಯೇಸು ಹೇಳಿದನು. ನಾವು ಅಂಥ ತಪ್ಪುಗಳನ್ನು ಕ್ಷಮಿಸದೆ ಹೋದರೆ, ದೇವರು ನಮ್ಮನ್ನು ಕ್ಷಮಿಸುವದಿಲ್ಲ (ಮಾರ್ಕ 11:25, 26). ಈ ತಪ್ಪುಗಳಲ್ಲಿ ನಮಗೆ ಹಿಡಿಸದಂಥ ಇತರರ ಕ್ರಿಯೆಗಳು ಅಥವಾ ನಮಗೆ ವೈಯಕ್ತಿಕವಾಗಿ ಕಿರಿಕಿರಿಯುಂಟು ಮಾಡುವಂಥ ಸಂಗತಿಗಳು, ಉದಾಹರಣೆಗೆ ತಾತ್ಸಾರಗಳು, ಅವಮಾನಗಳು, ತಿರಸ್ಕಾರಗಳು, ಮತ್ತು ಗಾಯಗಳು ಸಹ ಸೇರಿರುತ್ತವೆ. ನಾವು ಅವರನ್ನು ಔದಾರ್ಯತನದಿಂದ ಕ್ಷಮಿಸಬೇಕು. ನಾವು ಒಬ್ಬ ವ್ಯಕ್ತಿಯ ಸಂಗಡ ಬಹಳ ದೀರ್ಘಕಾಲದಿಂದ ಇರುವದಾದರೆ, ಆತನು ನಮಗೆ ಇಷ್ಟವಾಗದ ಕಾರ್ಯವೊಂದನ್ನು ಮಾಡುವನು. ನಾವು ಆ ವಿಷಯದಲ್ಲಿ ಆತನಿಗೆ ವಿರುದ್ಧವಾಗಿ ಹಗೆ ಸಾಧಿಸದೆ ಆತನನ್ನು ಕ್ಷಮಿಸಬೇಕು.

## ಹೆಚ್ಚಿನ ಅಧ್ಯಯನಕ್ಕಾಗಿ:<br>"ದೇವರ ಕೋಪ" (3:6)

ದೇವರ ಕುರಿತಾಗಿ ಒಂದು ಸಮತೋಲನದ ದೃಷ್ಟಿಕೋನವನ್ನು ಹೊಂದುವಕ್ಕಾಗಿ, ನಾವು ಆತನ ಸ್ವಭಾವದ ಸಂಪೂರ್ಣತೆಯ ಬಗ್ಗೆ ಅಧ್ಯಯನ ಮಾಡತಕ್ಕದ್ದು. ಆತನು ಕೃಪೆ ಮತ್ತು ನ್ಯಾಯವನ್ನು ಮಾಡುವ ದೇವರು (ರೋಮಾ 3:24, 26), ಕೋಪ ಹಾಗೂ ಕರುಣೆವುಳ್ಳವನು (ರೋಮಾ 2:5; 12:1), ಪ್ರೀತಿ ಮತ್ತು ದ್ವೇಷವುಳ್ಳವನು (ಇಬ್ರಿಯ 1:9). ಆತನನ್ನು ಇವುಗಳಲ್ಲಿ ಯಾವದಾದರೊಂದು ಗುಣಕ್ಕೆ ಸೀಮಿತಗೊಳಿಸುವದಕ್ಕೆ ಸಾಧ್ಯವಿಲ್ಲ, ಆತನು ದಯೆ ಮತ್ತು ಕಾಠಿಣ್ಯತೆ ಎರಡೂ ಉಳ್ಳವನಾಗಿದ್ದಾನೆ (ರೋಮಾ 11:22). ಮಾನವರು ಆತನ ಭಾವಗಳೊಂದಿಗೆ ಸಂಬಂಧವನ್ನು ಹೊಂದಿರಬಲ್ಲರು, ಯಾಕೆಂದರೆ, ಆತನ ಹೋಲಿಕೆಯ ಮೇರೆಗೆ ಸೃಷ್ಟಿಸಲ್ಪಟ್ಟಿರುವ ಅವರು (ಆದಿಕಾಂಡ 1:26, 27), ಆತನ ಕೆಲವು ಗುಣಸ್ವಭಾವಗಳನ್ನೇ ಹೊಂದಿರುತ್ತಾರೆ. ವ್ಯತ್ಯಾಸವೇನೆಂದರೆ ಆತನು ಅವುಗಳನ್ನು ನಿಯಂತ್ರಿಸಿಕೊಂಡು ನೀತಿಯುಳ್ಳ ರೀತಿಯಲ್ಲಿ ಬಳಸಿದರೆ ಮಾನವರು ವಿಕೃತಗೊಳಿಸಿ ಅವುಗಳನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ.

ಪಾಪದಿಂದ ತುಂಬಿರುವ ಮಾನವರ ಮೇಲೆ ದೇವರ ಕೋಪವು ಬರುವದು (ಮತ್ತಾಯ 3:7). ಶುಭಸಂದೇಶವೇನೆಂದರೆ ಯೇಸುವು ಪಾಪಗಳ ಪರಿಹಾರಕ್ಕಾಗಿ ತನ್ನ ರಕ್ತವನ್ನು ಸುರಿಸಿದನು (ಮತ್ತಾಯ 3:7; 26:28; 2 ಕೊರಿಂಥ 5:21) ಮತ್ತು, ಹಾಗೆ ಮಾಡುವ ಮೂಲಕ, ಬರಲಿರುವ ಕೋಪದಿಂದ ತಪ್ಪಿಸಿಕೊಳ್ಳುವದಕ್ಕಾಗಿ ಆತನು ವಿಶ್ವಾಸಿಗಳಿಗೆ ಮಾರ್ಗವನ್ನು ಮಾಡಿದ್ದಾನೆ (1 ಥೆಸಲೋನಿಕ 1:10; 5:9). ಯೇಸುವು ತನಗೆ ವಿಧೇಯರಾಗುವವರಿಗೆ ನಿತ್ಯಜೀವವನ್ನು ಪ್ರತಿಫಲವಾಗಿ ನೀಡುವನು (ಫಿಲಿ 5:9), ಆದರೆ ಆತನು ಸುವಾರ್ತೆಗೆ ವಿಧೇಯರಾಗದವರಿಗೆ ಪ್ರತಿಕಾರವನ್ನು ಸಲ್ಲಿಸುವನು (2 ಥೆಸಲೋನಿಕ 1:7-9). ತಮ್ಮ

ಬಂಡಾಯದಲ್ಲಿಯೇ ಮುಂದುವರೆಯುವ ಮೊಂಡುತನವುಳ್ಳ ಪಾಪಿಗಳನ್ನು ಆತನು ದ್ವೇಷಿಸುತ್ತಾನೆ ಮತ್ತು "ಅವರನ್ನು ಇನ್ನು ಪ್ರೀತಿಸನು" ಆದಕಾರಣ ಅಂಥ ಕಠಿಣವಾದ ದಂಡನೆಯನ್ನು ಉಂಟು ಮಾಡುತ್ತಾನೆ (ಹೋಶೇಯ 9:15; ನೋಡಿರಿ ಕೀರ್ತನೆ 5:5; 11:5).

ದೇವರು ತನ್ನ ಕಟ್ಟಳೆಗಳನ್ನು ಗೌರವಿಸದವರ ಕಡೆಗೆ ಕೋಪಗೊಳ್ಳುವದು ನ್ಯಾಯಯುತವಾಗಿರಬಲ್ಲದು. "ಯಾಕೆಂದರೆ ಧರ್ಮಶಾಸ್ತ್ರವು ಜನರನ್ನು ದೇವರ ಕೋಪಕ್ಕೆ ಗುರಿಮಾಡುವಂಥದು" (ರೋಮಾ 4:15). ದೇವರ ಕಟ್ಟಳೆಗಳನ್ನು ಯಾರೂ ಉಲ್ಲಂಘನೆ ಮಾಡುವದಿಲ್ಲವಾದರೆ, ಅಲ್ಲಿ ನ್ಯಾಯಯುತವಾದ ಕೋಪವು ಇರುವದಿಲ್ಲ ಮತ್ತು ಕೃಪೆಯ ಅಗತ್ಯತೆಯಿರುವದಿಲ್ಲ ಯಾಕೆಂದರೆ ಕೃಪೆಯು ಪಾಪಗಳ ಕ್ಷಮಾಪಣೆ ಹಾಗೂ ನೀತಿವಂತರೆಂಬ ನಿರ್ಣಯ ಮಾಡುವದಕ್ಕೆ ಸಂಬಂಧಪಟ್ಟದ್ದಾಗಿದೆ. ಎಲ್ಲರೂ ಪಾಪ ಮಾಡಿದ್ದಾರೆ (ರೋಮಾ 3:23); ಎಲ್ಲರೂ ದೇವರ ಕಟ್ಟಳೆಗಳನ್ನು ಮೀರಿದ್ದಾರೆ ಮತ್ತು ಯೇಸುವು ಸಾಧ್ಯಗೊಳಿಸಿರುವಂಥ ಕೃಪೆಯ ಮೂಲಕವಾಗಿ ನೀತಿವಂತರೆಂಬ ನಿರ್ಣಯ ಹೊಂದುವ ಅಗತ್ಯತೆಯಲ್ಲಿದ್ದಾರೆ (ರೋಮಾ 3:24).

ಕೆಲವು ಈ ನಿರ್ಧಾರಕ್ಕೆ ಬರುತ್ತಾರೆ, ಧರ್ಮಶಾಸ್ತ್ರವು ನೀತಿವಂತರೆಂಬ ನಿರ್ಣಯವನ್ನು ಉಂಟು ಮಾಡಲಾರದಾದ್ದರಿಂದ, ಕ್ರೈಸ್ತರು ಯಾವದೇ ವಿಧವಾಧ ಧರ್ಮಶಾಸ್ತ್ರದ ಅಧೀನದಲ್ಲಿರುವದಿಲ್ಲ (ರೋಮಾ 3:20; ಗಲಾತ್ಯ 2:16, 21; 5:4). ಧರ್ಮಶಾಸ್ತ್ರವು ಕೋಪ ಮತ್ತು ಶಾಪಕ್ಕೆ ಗುರಿಮಾಡುತ್ತದೆ (ರೋಮಾ 4:15; ಗಲಾತ್ಯ 3:10). ಈ ದೃಷ್ಟಿಕೋನದಿಂದ ನೋಡುವದಾದರೆ, ಧರ್ಮಶಾಸ್ತ್ರವು ಯಾರೊಬ್ಬರನ್ನೂ ನೀತಿವಂತರೆಂಬ ನಿರ್ಣಯಕ್ಕೆ ಗುರಿ ಮಾಡುವದಿಲ್ಲ. ಇನ್ನೊಂದೆಡೆಯಲ್ಲಿ, ವಿಧೇಯವಾಗಬೇಕಾಗಿರುವ ಆಜ್ಞೆಗಳನ್ನು ಯೇಸುವು ಕೊಟ್ಟಿರುತ್ತಾನೆ.[40] ಇವುಗಳು ದೇವರ ಮತ್ತು ಕ್ರಿಸ್ತನ ಧರ್ಮಶಾಸ್ತ್ರ (1 ಕೊರಿಂಥ 7:19; 9:21; ಗಲಾತ್ಯ 6:2), ಬಿಡುಗಡೆ ಮಾಡುವ ಸರ್ವೋತ್ತಮ ಧರ್ಮಪ್ರಮಾಣ ಆಗುತ್ತವೆ (ಯಾಕೋಬ 1:25; 2:12). ಕಟ್ಟಳೆಗಳಿರುವಲ್ಲೆಲ್ಲಾ ಧರ್ಮಶಾಸ್ತ್ರವು ಇರುತ್ತದೆ; ಯಾಕೆಂದರೆ ಕಟ್ಟಳೆಗಳೆಲ್ಲಾ ಸೇರಿಯೇ ಧರ್ಮಶಾಸ್ತ್ರವಾಗಿರುತ್ತದೆ. ನಿತ್ಯಜೀವವನ್ನು ಹೊಂದಿಕೊಳ್ಳುವದಕ್ಕೋಸ್ಕರ ಎಲ್ಲರೂ ವಿಧೇಯರಾಗತಕ್ಕ ಆಜ್ಞೆಗಳನ್ನು ಯೇಸು ಕೊಟ್ಟಿರುತ್ತಾನೆ (ಯೋಹಾನ 12:49, 50).

ದೇವರ ಕೋಪವು ವಾಸ್ತವಿಕವಾದದ್ದು. ಆತನ ಕಟ್ಟಳೆಗಳನ್ನು ಮತ್ತು ಕ್ರಿಸ್ತನ ಕಟ್ಟಳೆಗಳನ್ನು ಕೈಕೊಂಡು ನಡೆಯಲು ಆಯ್ಕೆ ಮಾಡಿಕೊಳ್ಳದವರ ಮೇಲೆ ಆತನ ಕೋಪವು ಸುರಿಸಲ್ಪಡುವದು. ದೇವರನ್ನು ಅರ್ಥಮಾಡಿಕೊಳ್ಳುವದರಲ್ಲಿ ಆತನ ಪ್ರೀತಿ ಮತ್ತು ಕರುಣೆ ಮಾತ್ರವಲ್ಲದೆ ಆತನ ನ್ಯಾಯಶೀಲತೆಯನ್ನು ಸಹ ತಿಳಿದುಕೊಳ್ಳುವದು ಸೇರಿರುತ್ತದೆ.

## ಅನ್ವಯಿಸುವಿಕೆ

### ದೂರವಿರಬೇಕಾದ ನಿರ್ದಿಷ್ಟವಾದ ಪಾಪಗಳು (3:5-7)

5ನೇ ವಚನದಲ್ಲಿ ನಾವು ಕ್ರೈಸ್ತರಾದ ಮೇಲೆ ಯಾವ ಪಾಪಗಳ "ಪಾಲಿಗೆ ಸತ್ತವರಾಗಿರಬೇಕು" ಎಂದು ಪಟ್ಟಿ ಮಾಡಲಾಗಿರುತ್ತದೆ?

ಜಾರತ್ವ – ಎಲ್ಲಾ ವಿಧವಾದ ಅನೈತಿಕವಾದ ಲೈಂಗಿಕ ಕ್ರಿಯೆಗಳು.

ಬಂಡುತನ – ಕ್ರೈಸ್ತನು ಮನಸ್ಸಿನಲ್ಲಿ ಇಟ್ಟುಕೊಂಡಿರಬಹುದಾದ ಯಾವದೇ ಅಶುದ್ಧ

ಯೋಚನೆಗಳು (ಮತ್ತಾಯ 5:27, 28; ರೋಮಾ 1:32).

ಕಾಮಾಭಿಲಾಷೆ – ಕ್ರೈಸ್ತರು ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳಲು ಕಲಿತುಕೊಳ್ಳಬೇಕು.

ದುರಾಶೆ – ಅನೈತಿಕ ಚಟುವಟಿಕೆಯನ್ನು ನಡಿಸಬೇಕೆಂಬ ಉತ್ಕಟವಾದ ಅಭಿಲಾಷೆಗಳೆಲ್ಲಾ.

ಲೋಭ – ಸ್ವತ್ತುಗಳ ಕಡೆಗೆ, ಅವುಗಳನ್ನು ಪೂಜಿಸುವಷ್ಟರ ಮಟ್ಟಿಗೆ, ವಿಪರೀತವಾದ ಹಂಬಲಿಕೆ, ಅಥವಾ ಅವುಗಳನ್ನು ಪಡೆದುಕೊಳ್ಳಬೇಕೆಂದು ನಿಷ್ಠೆಯಿಂದ ಪ್ರಯತ್ನಿಸುವಷ್ಟರ ಮಟ್ಟಿಗೆ ಅನಾರೋಗ್ಯಕರ ಮನೋಭಾವವನ್ನು ಹೊಂದಿರುವದು.

ಅನೈತಿಕ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವವರ ಮೇಲೆ ದೈವಿಕ ಕೋಪವು ಬರುತ್ತದೆ (ವ. 6). ದೇವರು ನೀತಿಯನ್ನು ಪ್ರೀತಿಸುತ್ತಾನೆ ಮತ್ತು ಅಧರ್ಮವನ್ನು ದ್ವೇಷಿಸುತ್ತಾನೆ (ಇಬ್ರಿಯ 1:9). ದೇವರು ತನ್ನ ಚಿತ್ತವನ್ನು ಉದ್ಧಟತನದಿಂದ ತಿರಸ್ಕರಿಸಿ ದುಷ್ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವವರಿಗೆ ವಿರುದ್ಧವಾಗಿರುತ್ತಾನೆ.

ತಮ್ಮ ಹಿಂದಿನ ಜೀವನಗಳಲ್ಲಿ ಕೊಲೊಸ್ಸೆಯವರು ಈ ಪಾಪಗಳಿಗೆ ಒಪ್ಪಿಸಿಕೊಂಡಿದ್ದರು ಮತ್ತು ಅವರು ದೇವರ ಕೋಪಕ್ಕೆ ಗುರಿಯಾದವರಾಗಿದ್ದರು (ವ. 7). ಅವರು ತಮ್ಮ ಈ ನಡವಳಿಕೆಗಳ ಪಾಲಿಗೆ ಸತ್ತವರಾದಾಗ, ಅವರ ಕಡೆಗಿನ ದೇವರ ದೃಷ್ಟಿಯು ಬದಲಾಯಿತು. ಈ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದವರಿಗೆ ದೇವರ ಮನಸ್ಸಿನಲ್ಲಾದ ಬದಲಾವಣೆಯು ಕ್ಷಮಾಪಣೆಯ ಯಾವ ಭರವಸೆಯನ್ನು ನೀಡಿತು? ಮೊದಲ ಪೇತ್ರ 2:10 ಹೀಗೆ ಹೇಳುತ್ತದೆ, "ನೀವು ಮೊದಲು . . . ವಾತ್ಸಲ್ಯ ಹೊಂದಿರಲಿಲ್ಲ, ಈಗ ವಾತ್ಸಲ್ಯಹೊಂದಿದವರಾಗಿದ್ದೀರಿ."

## ಯೇಸುವಿನ ಸಾರೂಪ್ಯವುಳ್ಳವರಾಗುವದು (3:8-11)

ನಾವು ಕೋಪ, ಹರಟೆ, ಮತ್ತು ಸುಳ್ಳಾಡುವದಕ್ಕೆ ಒಳಗಾಗುವದಾದರೆ, ನಾವು ಹೇಗೆ ಯೇಸುವನ್ನು ಅನುಕರಣ ಮಾಡುವದಕ್ಕೆ ಸಾಧ್ಯ? ಕ್ರೈಸ್ತರಿಗೆ ಈ ಕೆಳಗಿನವುಗಳನ್ನು ವಿಸರ್ಜಿಸುವಂತೆ ಬೋಧಿಸಲಾಗಿರುತ್ತದೆ:

ಕ್ರೋಧ – ಒಂದು ಸಿಟ್ಟಿನ ಕಿಡಿ.

ಕೋಪ – ತೀವ್ರವಾದ ರೋಷ.

ಮತ್ಸರ – ತುಚ್ಛಭಾವನೆ ಉಳ್ಳವರಾಗಿರುವದು.

ದೂಷಣೆ – ಯಾರೋ ಒಬ್ಬರ ಅಥವಾ ಯಾವದೋ ಒಂದರ ಹೆಸರನ್ನು ಕೆಡಿಸುವ ಪ್ರಯತ್ನ.

ದುರ್ಭಾಷೆ – ಕಠೋರ ಭಾಷೆ.

ಸುಳ್ಳಾಡುವದು – ಸತ್ಯವನ್ನು ವಿಕೃತಗೊಳಿಸುವದು.

ಈ ಪಾಪದ ಕೃತ್ಯಗಳನ್ನು ಮಾಡದೆ ದೂರವಿದ್ದರೆ ಕ್ರೈಸ್ತ ಗುಣಸ್ವಭಾವವು ಬರುವದೆಂಬ

ಭರವಸೆಯಿರುವದಿಲ್ಲ; ಕ್ರಿಸ್ತನ ಸಾರೂಪ್ಯದ ಗುಣಗಳನ್ನು ಧರಿಸಿಕೊಳ್ಳುವದು ಸಹ ಅವಶ್ಯಕವಾಗಿರುತ್ತದೆ (ವ. 10). ಕ್ರೈಸ್ತರು ಯೇಸುವನ್ನು ತಿಳಿದುಕೊಳ್ಳುವಾಗ ಮಾತ್ರವೇ ಈ ಗುಣಗಳನ್ನು ಧರಿಸಿಕೊಳ್ಳುವದಕ್ಕೆ ಸಾಧ್ಯವಿರುತ್ತದೆ. ಯೇಸುವಿನಿಂದ ಮುಂದಿಡಲ್ಪಟ್ಟಿದ್ದ ಅತ್ಯುನ್ನತ ಗುರಿಯನ್ನು ತಲುಪುವದಕ್ಕೆ ತನಗೆ ಸಾಧ್ಯವಾಗುವಂತೆ ಯೇಸುವನ್ನು ತಿಳಿದುಕೊಳ್ಳುವದೇ ಪೌಲನ ಲಕ್ಷ್ಯವಾಗಿತ್ತು (ಫಿಲಿಪ್ಪಿ 3:10-14). ನಮ್ಮ ದೃಷ್ಟಿಯು ಯೇಸುವಿನ ಮೇಲೆಯೇ ಕೇಂದ್ರಿಕೃತವಾಗಿರಬೇಕು (ಇಬ್ರಿಯ 12:2).

Great Stone Face ಎಂಬ ಕಥೆಯಲ್ಲಿ, ಒಬ್ಬ ಬಾಲಕನು ತನ್ನ ಬಾಲ್ಯದಿಂದ ಆತನ ಗ್ರಾಮಕ್ಕೆ ಒಬ್ಬ ಮಹಾನ್ ವ್ಯಕ್ತಿಯು ಬರುವನೆಂಬ ಬಗ್ಗೆ ಕೇಳಿಸಿಕೊಂಡಿದ್ದನು. ಆ ವ್ಯಕ್ತಿಯ ಮುಖವು ಬೆಟ್ಟದ ಮೇಲಿನ ಒಂದು ದೊಡ್ಡ ಬಂಡೆಯಂತೆ ಕಾಣಿಸುವದು. ಆವ್ಯಕ್ತಿಯ ಬಗ್ಗೆ ಹಲವಾರು ವರ್ಷಗಳಿಂದ ವರ್ಣಿಸಲ್ಪಡುವದನ್ನು ಕೇಳಿ ಈ ಬಾಲಕನು ವ್ಯಕ್ತಿಯ ಪಾತ್ರವನ್ನು ಬಹಳ ಮೆಚ್ಚಿಕೊಂಡಿದ್ದನು, ಮತ್ತು ಒಂದು ದಿನ ಆತನನ್ನು ಸಂಧಿಸುವೆನೆಂಬ ನಿರೀಕ್ಷೆಯನ್ನು ಹೊಂದಿದ್ದನು. ಆತನು ಅದನ್ನು ಗ್ರಹಿಸಿಕೊಳ್ಳಲಿಲ್ಲ, ಆದರೆ ಆತನು ದೊಡ್ಡವನಾಗಿ ಈ ವ್ಯಕ್ತಿಯ ಪಾತ್ರದ ಮೇಲೆಯೇ ಮುಖ್ಯ ಗಮನವನ್ನು ಕೊಡುತ್ತಾ ಬಂದ ಹಾಗೆ, ಈ ಬಾಲಕನು ಗ್ರಾಮಸ್ಥರು ವರ್ಣಿಸುತ್ತಿದ್ದ ಆ ಮಹಾನ್ ಮನುಷ್ಯನಂತಾದನು. ಒಂದು ದಿನ ಈ ಬಾಲಕನು – ಈಗ ಒಬ್ಬ ವೃದ್ಧ ಮನುಷ್ಯನಾಗಿದ್ದನು – ಬೆಟ್ಟದ ಮೇಲಿದ್ದ ಕಲ್ಲಿನ ಮುಖವನ್ನು ನೋಡುತ್ತಾ ನಿಂತಿದ್ದನು, ಗ್ರಾಮಸ್ಥರು ಈತನು ಆ ಮಹಾ ಬಂಡೆಯ ಮುಖದಂತೆಯೇ ಕಾಣುತ್ತಾನೆಂಬುದನ್ನು ಗುರುತಿಸಿದರು.[41] ಆತನು ಆ ಮನುಷ್ಯನನ್ನು ಮೆಚ್ಚಿಕೊಂಡು ಆತನ ಚಹರೆಯನ್ನು ಅನುಕರಣ ಮಾಡಿದ್ದರಿಂದಾಗಿ ಆತನು ಅವನಂತೆಯೇ ಮಾರ್ಪಟ್ಟಿದ್ದನು. ಯೇಸುವನ್ನು ದೃಷ್ಟಿಸುವ ಮೂಲಕ, ಆತನನ್ನು ಮೆಚ್ಚಿಕೊಳ್ಳುವ ಮೂಲಕ, ಮತ್ತು ಆತನ ಮೇಲೆಯೇ ಮುಖ್ಯ ಗಮನವನ್ನು ಕೇಂದ್ರಿಕರಿಸುವ ಮೂಲಕ, ನಾವು ಆತನಂತೆಯೇ ಮಾರ್ಪಡಬಲ್ಲೆವು (2 ಕೊರಿಂಥ 3:18).

## ಕ್ರೈಸ್ತರ ಆತ್ಮೀಕ ಗುಣಲಕ್ಷಣಗಳು (3:12-14)

ನೂತನಸ್ವಭಾವದ ಗುಣಲಕ್ಷಣಗಳನ್ನು ಧರಿಸಿಕೊಳ್ಳುವದರಿಂದ ಹಿಂದಿನ ಇಷ್ಟವಾಗದ ಅಭ್ಯಾಸಗಳನ್ನು ವಿಸರ್ಜಿಸುವದಕ್ಕೆ ಸಹಾಯವಾಗುವದು. ಒಂದು ಬಟ್ಟಲಿನಲ್ಲಿ ನೀರನ್ನು ತುಂಬಿಸುವದರಿಂದ ಗಾಳಿಯನ್ನು ಪಾತ್ರೆಯೊಳಗಿಂದ ಹೊರದೊಬ್ಬುವದು; ಅದೇ ರೀತಿಯಲ್ಲಿ, ಸಕಾರಾತ್ಮಕವಾದ ಕ್ರೈಸ್ತ ಗುಣಸ್ವಭಾವಗಳನ್ನು ಬೆಳೆಸಿಕೊಳ್ಳುವದರಿಂದ ನಮ್ಮ ಜೀವಿತಗಳೊಳಗಿಂದ ನಕಾರಾತ್ಮಕ ನಡವಳಿಕೆಗಳನ್ನು ಹೊರಗೆ ನೂಕುವದಕ್ಕೆ ಸಹಾಯವಾಗುತ್ತದೆ.

ನೂತನಸ್ವಭಾವವನ್ನು ಧರಿಸಿಕೊಳ್ಳುವದಕ್ಕೆ ಪೌಲನು ನಮಗೆ ಮೂರು ಕಾರಣಗಳನ್ನು ನೀಡುತ್ತಾನೆ: ನಾವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿದ್ದೇವೆ (ವ. 12). ದೇವರು ನಮ್ಮನ್ನು ತನ್ನವರನ್ನಾಗಿ ಆರಿಸಿಕೊಳ್ಳುವದರಲ್ಲಿ ನಮ್ಮ ಮೇಲೆ ತೋರ್ಪಡಿಸಿರುವ ಭರವಸೆಯನ್ನು ಪ್ರತಿಫಲನಗೊಳಿಸುವವರಾಗತಕ್ಕದ್ದು. ನಾವು ದುಷ್ಟ ಲೋಕದಿಂದ ಪ್ರತ್ಯೇಕಗೊಳಿಸಲ್ಪಟ್ಟವರಾಗಿದ್ದೇವೆ ಮತ್ತು ಆತನಿಗೆ ಪ್ರಿಯರಾದ ಜನರಾಗಿದ್ದೇವೆಂಬುದನ್ನು ಗ್ರಹಿಸಿಕೊಳ್ಳತಕ್ಕದ್ದು. ಒಂದು ವಿಶೇಷ ಕೆಲಸಕ್ಕಾಗಿ ಆರಿಸಿಕೊಳ್ಳಲ್ಪಟ್ಟಿರುವ ಮಗುವೊಂದು ತನ್ನ ಕೆಲಸದಲ್ಲಿ ಹೆಮ್ಮೆ ಪಡಬಹುದು ಯಾಕೆಂದರೆ

ಆತನ ಹಾಗೆ ಉತ್ತಮವಾಗಿ ಬೇರೆಯವರಿಂದ ನೆರವೇರಿಸಲಿಕ್ಕಾಗದಂಥ ಜವಾಬ್ದಾರಿಯು ಆತನಿಗೆ ವಹಿಸಲ್ಪಟ್ಟಿರುತ್ತದೆಂದು ಆತನು ಬಲ್ಲವನಾಗಿದ್ದಾನೆ. ಅದೇ ರೀತಿಯಲ್ಲಿ, ನಮ್ಮನ್ನು ವ್ಯತ್ಯಾಸವಾದವರೂ ಪ್ರಿಯ ಜನರೂ ಆಗಿರುವಂತೆ ಯೇಸು ಆರಿಸಿಕೊಂಡಿದ್ದಾನೆಂಬುದನ್ನು ಕ್ರೈಸ್ತರು ಅರಿತುಕೊಳ್ಳಬೇಕು.

ಕ್ರೈಸ್ತರು ಆತ್ಮೀಕ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳಬೇಕು (ವಚನಗಳು 12-14). ಒಬ್ಬ ವ್ಯಕ್ತಿಯು ಈ ಸದ್ಗುಣಗಳನ್ನು ಬೆಳೆಸಿಕೊಂಡಾಗ ಹೇಗಿರುವನು? ಆತನು ಹೇಗೆ ವರ್ತಿಸುತ್ತಾನೆ? ಆತನು ಈ ರೀತಿಯಲ್ಲಿರುವನು . . .

ಕನಿಕರವುಳ್ಳವನು – ಬೇರೆಯವರ ಅಗತ್ಯತೆಗಳ ಬಗ್ಗೆ ಕಾಳಜಿ ಹೊಂದಿರುವದು.

ದಯೆಯುಳ್ಳವನು – ಬೇರೆಯವರ ಹಿತವನ್ನು ಅಪೇಕ್ಷಿಸುವದರಲ್ಲಿ ಆಸಕ್ತಿಯನ್ನು ಹೊಂದಿರುವದು.

ದೀನಭಾವವುಳ್ಳವನು – ಬೇರೆಯವರಿಂದ ಪ್ರತ್ಯೇಕವಾಗಿರದಂತೆ ಅವರಿಗೆ ಸಮಾನವಾಗಿ ತನ್ನನ್ನು ಭಾವಿಸಿಕೊಳ್ಳುವದು.

ಸಾತ್ವಿಕತ್ವವುಳ್ಳವನು – ಬೇರೆಯವರ ಕಡೆಗೆ ಕೋಮಲತೆಯುಳ್ಳವನಾಗಿರುವದು, ಬೇರೆಯವರೊಂದಿಗೆ ವ್ಯವಹರಿಸುವಾಗ ಕಠೋರತೆ ಮತ್ತು ಒರಟುತನದಿಂದ ದೂರವಿರುವದು.

ದೀರ್ಘಶಾಂತಿ – ಒತ್ತಾಯ ಮತ್ತು ಒತ್ತಡದಲ್ಲಿರುವಾಗ ಸಹಿಸಿಕೊಳ್ಳಲು ಸಿದ್ಧನಿರುವದು.

ಒಬ್ಬರಿಗೊಬ್ಬರು ಸೈರಿಸಿಕೊಳ್ಳುವದು – ಅವಮಾನಗಳನ್ನು ನಿರ್ಲಕ್ಷಿಸುವದು, ಅಡೆತಡೆಗಳನ್ನು ಅನುಭವಿಸುವದು, ಮತ್ತು ತನಗೆ ತಪ್ಪು ಮಾಡಲ್ಪಟ್ಟಾಗ ಪ್ರತಿಕಾರ ಸಲ್ಲಿಸದಿರುವದು.

ಕ್ಷಮಿಸುವದು – ತಪ್ಪು ಮಾಡಿದವನ ವಿರುದ್ಧ ಇನ್ನು ಮೇಲೆ ಹಗೆತನ ಸಾಧಿಸದಿರುವದು. ಈ ಕ್ಷಮಿಸುವಿಕೆಗೆ ತಳಹದಿಯು ಯೇಸುವಿನಿಂದ ಸ್ವೀಕರಿಸಿಕೊಂಡ ಕ್ಷಮಾಪಣೆಯೇ ಆಗಿರುತ್ತದೆ.

ಪ್ರೀತಿಸುವದು – ಬೇರೆಯವರು ಹಿತವನ್ನು ಅಪೇಕ್ಷಿಸುವದರಲ್ಲಿ ಫಲಿತಗೊಳ್ಳುವಂಥ ಮಮತೆಯನ್ನು ಹೊಂದಿರುವದು. ಬೇರೆಯವರನ್ನು ಪ್ರೀತಿಸುವ ಕ್ರೈಸ್ತರ ಹೃದಯಗಳನ್ನು ಮಿಕ್ಕ ಎಲ್ಲಾ ಗುಣಲಕ್ಷಣಗಳು ಒಂದಾಗಿ ಕೂಡಿಸಲ್ಪಟ್ಟು ಅಭಿವೃದ್ಧಿಗೊಳ್ಳುವವು. ಇದು ಸದ್ಗುಣಗಳೆಲ್ಲಲ್ಲಾ ಅತ್ಯಂಥ ಪ್ರಾಮುಖ್ಯವಾದದ್ದಾಗಿದೆ.

## ಕ್ಷಮಿಸುವದೆಂದರೆ ಮರೆತು ಬಿಡುವದೆಂದು ಅರ್ಥವೋ? (3:13)

ಗತಕಾಲದ ನೋವಿನ ಅನುಭವಗಳನ್ನು ಎಂದಿಗೂ ಮರೆಯಲಾಗುವದಿಲ್ಲ, ಯಥಾರ್ಥವಾದ ಕ್ಷಮಾಪಣೆಯನ್ನು ನೀಡಿದ ಬಳಿಕವೂ ಅದು ಕಷ್ಟಕರವಾಗಿರುತ್ತದೆ. ತಾನು ಕೈಸರ ನ್ಯಾಯಾಲಯದಲ್ಲಿ ವಿಚಾರಣೆಗೊಳಗಾದ ಸಂದರ್ಭದಲ್ಲಿ ತನ್ನನ್ನು ತೊರೆದು ಹೋದವರನ್ನು ನೆನಪಿಟ್ಟುಕೊಂಡಿದ್ದನು, ಆದರೆ ಆತನು ಅವರನ್ನು ಕ್ಷಮಿಸಿದ್ದನು ಸಹ. ಆತನು ಹೀಗೆ ಬೇಡಿಕೊಂಡನು, "ಅದು ಅವರ ಲೆಕ್ಕಕ್ಕೆ ಸೇರಿಸಲ್ಪಡದೆ ಇರಲಿ" (2 ತಿಮೊಥೆ

4:16).

ಒಬ್ಬ ವ್ಯಕ್ತಿಯು ತನಗಾದ ತಪ್ಪನ್ನು ಜ್ಞಾಪಕದಲ್ಲಿಟ್ಟುಕೊಂಡಿರುತ್ತಾನೋ ಅಥವಾ ಇಲ್ಲವೋ ಎಂಬುದರ ಮೇಲೆ ಕ್ಷಮಾಪಣೆಯು ನಿರ್ಣಯಿಸಲ್ಪಡುತ್ತದೋ? ಇಲ್ಲ, ಅದು ನೋವನ್ನು ಹೇಗೆ ಜ್ಞಾಪಕದಲ್ಲಿಟ್ಟುಕೊಳ್ಳಲಾಗಿದೆ ಎಂಬುದನ್ನು ಒಳಗೊಂಡಿರುತ್ತದೆ. ಅದು ಜ್ಞಾಪಕದಲ್ಲಿದ್ದರೂ ತಪ್ಪು ಮಾಡಿದವನಿಗೆ ವಿರೋಧವಾಗಿ ಲೆಕ್ಕದಲ್ಲಿ ಇಟ್ಟುಕೊಳ್ಳಲ್ಪಟ್ಟಿಲ್ಲವಾದರೆ, ಅದು ಕ್ಷಮಿಸಲ್ಪಟ್ಟಿದೆ ಎಂದಾಗಿರುತ್ತದೆ. ಹೇಗೂ, ಅದು ಜ್ಞಾಪಕದಲ್ಲಿಟ್ಟುಕೊಳ್ಳಲ್ಪಟ್ಟು ಅದನ್ನು ಮಾಡಿದವನಿಗೆ ವಿರುದ್ಧವಾಗಿ ಲೆಕ್ಕದಲ್ಲಿಡಲ್ಪಟ್ಟಿದ್ದರೆ, ಅದು ಕ್ಷಮಿಸಲ್ಪಟ್ಟಿಲ್ಲ ಎಂದರ್ಥವಾಗುತ್ತದೆ.

## ತಪ್ಪು ಮಾಡಿದವನು ಪಶ್ಚಾತ್ತಾಪ ಪಡದಿರುವಾಗ (3:13)

ಒಬ್ಬ ವ್ಯಕ್ತಿಯು ಪಶ್ಚಾತ್ತಾಪ ಪಡದಿದ್ದರೂ ಆತನನ್ನು ಕ್ಷಮಿಸಬೇಕೋ? ತಾವು ಪಶ್ಚಾತ್ತಾಪ ಪಟ್ಟಿದ್ದೇವೆಂದು ಹೇಳುವವರನ್ನು ಕ್ಷಮಿಸಬೇಕೆಂದು ಯೇಸು ಹೇಳಿರುತ್ತಾನೆ. "ನಿನ್ನ ಸಹೋದರನು ತಪ್ಪು ಮಾಡಿದರೆ ಅವನನ್ನು ಗದರಿಸು; ಅವನು ಪಶ್ಚಾತ್ತಾಪಪಟ್ಟರೆ ಅವನ ತಪ್ಪನ್ನು ಕ್ಷಮಿಸಿ ಬಿಡು. ಅವನು ದಿನಕ್ಕೆ ಏಳು ಸಾರಿ ನಿನಗೆ ತಪ್ಪು ಮಾಡಿ ಏಳು ಸಾರಿಯೂ ನಿನ್ನ ಕಡೆಗೆ ತಿರುಗಿಕೊಂಡು — ನನಗೆ ಪಶ್ಚಾತ್ತಾಪವಾಯಿತು ಎಂದು ಹೇಳಿದರೆ ಅವನಿಗೆ ಕ್ಷಮಿಸು" (ಲೂಕ 17:3, 4). ಒಬ್ಬ ವ್ಯಕ್ತಿಯು ಮತ್ತೊಬ್ಬನ ವಿರೋಧವಾಗಿ ಏನನ್ನು ಲೆಕ್ಕದಲ್ಲಿಟ್ಟುಕೊಳ್ಳಬೇಕೆಂದು ಶಾಸ್ತ್ರಗಳು ಹೇಳುವದಿಲ್ಲ, ಆದರೆ ಅವರು ಪಶ್ಚಾತ್ತಾಪ ಪಡುವದಾದರೆ ತನ್ನ ಹಿಂಬಾಲಕರು ಅವರನ್ನು ಕ್ಷಮಿಸಬೇಕೆಂದು ಯೇಸು ಹೇಳಿರುತ್ತಾನೆ.

ಒಬ್ಬನು ತನ್ನನ್ನು ಕ್ಷಮಿಸುವಂತೆ ನಮ್ಮನ್ನು ಕೇಳಿದಾಗ ಏನು ಮಾಡಬೇಕೆಂಬದರ ಬಗ್ಗೆ ತಿಳಿದ ಬಳಿಕ, ಈಗ ನಮ್ಮನ್ನು ಕೇಳಿಕೊಳ್ಳೋಣ, "ಆತನು ನಮ್ಮಿಂದ ಕ್ಷಮಾಪಣೆಯನ್ನು ಕೇಳಲಿಲ್ಲವೆಂದಾದರೆ ಏನು ಮಾಡುವದು; ನಾವು ಅವನನ್ನು ಕ್ಷಮಿಸಬೇಕೋ? ದೇವರ ಕ್ಷಮಾಪಣೆಯು ಪಶ್ಚಾತ್ತಾಪದ ಶರತ್ತಿನ ಮೇಲೆ ಅವಲಂಬಿತವಾಗಿದೆ" (2 ಪೇತ್ರ 3:9), ಆದ್ದರಿಂದ ಪಶ್ಚಾತ್ತಾಪ ಪಡದವರನ್ನು ಕ್ಷಮಿಸಬೇಕೆಂಬ ನಿರ್ಬಂಧದಲ್ಲಿ ಕ್ರೈಸ್ತರು ಇರುವದಿಲ್ಲವೆಂದು ತೋರುವದು. ಕ್ರೈಸ್ತರ ವಿಷಯದಲ್ಲಿ ಇದು ಸತ್ಯವೋ? ಒಬ್ಬ ಕ್ರೈಸ್ತನು ತನಗೆ ವಿರುದ್ಧ ತಪ್ಪು ಮಾಡಿರುವ ಆದರೆ ಕ್ಷಮಾಪಣೆಯನ್ನು ಕೇಳದಂಥ — ಆ ವ್ಯಕ್ತಿಯು ತನ್ನ ಕೃತ್ಯಕ್ಕಾಗಿ ವಿಷಾದವನ್ನು ತೋರಿದಾಗ್ಯೂ — ವ್ಯಕ್ತಿಯನ್ನು ಕ್ಷಮಿಸಬೇಕೋ? ಒಬ್ಬ ವ್ಯಕ್ತಿಯು ನಿಜವಾಗಿಯೂ ಪಶ್ಚಾತ್ತಾಪ ಪಡದಿದ್ದಾಗ್ಯೂ ಕ್ಷಮಾಪಣೆಯನ್ನು ಕೇಳುವವನಂತೆ ನಟಿಸುವದಾದರೆ ಏನು ಮಾಡುವದು? ಆ ವ್ಯಕ್ತಿಯನ್ನು ಕ್ಷಮಿಸುವದು ತಪ್ಪೋ?

ಈ ಪ್ರಶ್ನೆಗಳಿಗೆ ಉತ್ತರವು ಮಾರ್ಕ 11:25ರಲ್ಲಿ ಸಿಕ್ಕುವಂತೆ ತೋರುತ್ತದೆ. ಯೇಸು ಅಲ್ಲಿ ಹೀಗೆ ಕಲಿಸುತ್ತಾನೆ, "ಇದಲ್ಲದೆ ನೀವು ನಿಂತುಕೊಂಡು ಪ್ರಾರ್ಥನೆಮಾಡುವಾಗೆಲ್ಲಾ ಯಾರ ಮೇಲೆ ಏನಾದರೂ ವಿರೋಧವಿದ್ದರೆ ಅದನ್ನು ಅವನಿಗೆ ಕ್ಷಮಿಸಿರಿ; ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ನಿಮಗೆ ಕ್ಷಮಿಸಿ ಬಿಡುವನು" (ಮಾರ್ಕ 11:25). ಬಹುಶಃ ಇದು ಕ್ಷಮೆಯನ್ನು ಕೇಳದಂಥ ವ್ಯಕ್ತಿಯನ್ನು ಕ್ಷಮಿಸಬೇಕೆಂಬುದಕ್ಕೆ ಒಂದು ಉದಾಹರಣೆಯಾಗಿರಬಹುದಾಗಿದೆ. ತನ್ನಲ್ಲಿ ಕ್ಷಮಿಸುವಂತೆ ಕೇಳಿರದಂಥ ಜನರಿಗೋಸ್ಕರ ಯೇಸು ಅವರಿಗೆ ಕ್ಷಮಾಪಣೆಯಾಗುವಂತೆ ಪ್ರಾರ್ಥಿಸಿದನು — ಆತನನ್ನು ಶಿಲುಬೆಗೆ ಜಡಿದವರನ್ನು ಸಹ ಕ್ಷಮಿಸುವಂತೆ ಪ್ರಾರ್ಥಿಸಿದನು (ಲೂಕ 23:34).

ಸ್ತೇಫನನು ಸಹ ಕಲ್ಲೆಸೆಯಲ್ಪಟ್ಟು ಕೊಲ್ಲಲ್ಪಡುತ್ತಿರುವಾಗ ಅದೇ ಕ್ಷಮಾಪಣೆಯ ಸ್ವಭಾವವನ್ನು ತೋರ್ಪಡಿಸಿದನು (ಅಪೊಸ್ತಲರ ಕೃತ್ಯಗಳು 7:60).

## ಅಡಿಟಿಪ್ಪಣಿಗಳು

[1]Eduard Lohse, *Colossians and Philemon,* trans. William R. Poehlmann and Robert J. Karris, Hermeneia (Philadelphia: Fortress Press, 1971), 137. [2]Ibid. [3]ಮತ್ತಾಯ 5:32; 15:19; 19:9; ಮಾರ್ಕ 7:21; ಅಪೊಸ್ತಲರ ಕೃತ್ಯಗಳು 15:20, 29; 21:25; 1 ಕೊರಿಂಥ 5:1; 6:13, 18; 7:2; 10:8; 2 ಕೊರಿಂಥ 12:21; ಗಲಾತ್ಯ 5:19; ಎಫೆಸ 5:3; 1 ಥೆಸಲೋನಿಕ 4:3; ಪ್ರಕಟನೆ 2:14, 20, 21; 9:21. [4]ಮತ್ತಾಯ 15:19; ಮಾರ್ಕ 7:22; ಯೋಹಾನ 8:3. [5]ಮತ್ತಾಯ 5:27, 28; 19:18; ಮಾರ್ಕ 10:19; ಲೂಕ 16:18; 18:20; ಯೋಹಾನ 8:4; ರೋಮಾ 2:22; 13:9; ಯಾಕೋಬ 2:11. [6]ಮತ್ತಾಯ 13:17; ಲೂಕ 15:16; 16:21; 17:22; 22:15; 1 ತಿಮೊಥೆ 3:1; ಇಬ್ರಿಯ 6:11; 1 ಪೇತ್ರ 1:12. [7]ಲೂಕ 12:15; ರೋಮಾ 1:29; ಎಫೆಸ 4:19; 5:3; 1 ಥೆಸಲೋನಿಕ 2:5; 2 ಪೇತ್ರ 2:3, 14. [8]ವಿಮೋಚನಕಾಂಡ 4:14; ಅರಣ್ಯಕಾಂಡ 11:10; ಧರ್ಮೋಪದೇಶಕಾಂಡ 11:17; ಯೆಹೋಶುವ 7:1; ನ್ಯಾಯಸ್ಥಾಪಕರು 2:12; 2 ಸಮುವೇಲ 6:7; 1 ಅರಸು 15:30; 2 ಅರಸು 13:3; ಎಜ್ರನು 10:14; ಯೋಬ 9:13; ಕೀರ್ತನೆ 78:31; ಯೇಶಾಯ 5:25; ಯೆರೆಮೀಯ 4:8; ಯೆಹೆಜ್ಕೇಲ 5:13; ಹೋಶೇಯ 8:5; ಮೀಕ 5:15; ನಹೂಮ 1:6; ಚೆಫನ್ಯ 2:2; ಜಕರ್ಯ 1:2. [9]ಅರಣ್ಯಕಾಂಡ 16:46; ಧರ್ಮೋ. 9:8; ಯೆಹೋ. 22:20; 1 ಸಮು 28:18; 2 ಅರಸು 22:13; ಯೋಬ 42:7; ಕೀರ್ತನೆ 21:9; ಯೆಶಾಯ 51:20; ಯೆರೆ 7:20; ಯೆಹೆ 13:13-15; ದಾನಿ 9:16; ಹೋಶೇ 13:11; ಮೀಕ 5:15; ಚೆಪನ್ಯ 1:18; ಜೆಕ 7:12. [10]ಮಾರ್ಕ 3:5; ಯೋಹಾನ 3:36; ರೋಮಾ 1:18; 5:9; ಎಫೆಸ 5:6; ಇಬ್ರಿಯ 3:11; ಪ್ರಕಟನೆ 14:10; 15:1; 16:19; 19:15.

[11]William Hendriksen, *Exposition of Colossians and Philemon,* New Testament Commentary (Grand Rapids, Mich.: Baker Book House, 1964), 147. [12]Bruce M. Metzger, *A Textual Commentary on the Greek New Testament*, 2d. ed. (New York: United Bible Societies, 1971), 625. [13]Herbert M. Carson, *The Epistles of Paul to the Colossians and Philemon: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 82. [14]ಯೋಹಾನ 11:9; 12:35; ರೋಮಾ 6:4; 1 ಕೊರಿಂಥ 7:17; 2 ಕೊರಿಂಥ 5:7; ಗಲಾತ್ಯ 5:16, 25; 6:16; ಎಫೆಸ 2:10; 4:1; 5:8, 15; ಫಿಲಿಪ್ಪಿ 3:17; ಕೊಲೊಸ್ಸೆ 1:10; 1 ಕೊರಿಂಥ 2:12; 4:1; 1 ಯೋಹಾನ 1:7; 2:6; 2 ಯೋಹಾನ 4, 6; 3 ಯೋಹಾನ 3, 4. [15]ಯೋಹಾನ 8:12; 11:10; 12:35; 1 ಯೋಹಾನ 3:3; 2 ಕೊರಿಂಥ 4:2; 10:3; ಎಫೆಸ 2:2; 4:17; ಫಿಲಿಪ್ಪಿ 3:18; 1 ಯೋಹಾನ 1:6; 2:11. [16]Hendriksen, 149. [17]NASBಯಲ್ಲಿ, *orgē ಯು* ಆರು ಸಾರಿ "ಕ್ರೋಧ" ಎಂದು ಮತ್ತು ಮೂವತ್ತು ಸಾರಿ "ಕೋಪ" ಎಂದು ಅನುವಾದಿಸಲ್ಪಟ್ಟಿದೆ. [18]ಮತ್ತಾಯ 3:7; ಲೂಕ 3:7; 21:23; ರೋಮಾ 2:5, 8; 3:5; 5:9; 9:22; 12:19; ಎಫೆಸ 2:3; 5:6; ಕೊಲೊಸ್ಸೆ 3:6; 1 ಥೆಸಲೋನಿಕ 1:10; 2:16; 5:9; ಪ್ರಕಟನೆ 6:16, 17; 11:18; 14:10; 16:19; 19:15. [19]Robert G. Bratcher and Eugene A. Nida, *A Translators Handbook on Paul's Letters to the Colossians and to Philemon,* Helps for Translators (New York: United Bible Societies, 1977), 82. [20]ಮತ್ತಾಯ 15:19; ಮಾರ್ಕ 7:22; ಕೊಲೊ 3:8; 1 ತಿಮೊಥೆ 6:4; 2 ತಿಮೊಥೆ 3:2.

[21]David M. Hay, *Colossians,* Abingdon New Testament Commentaries (Nashville: Abingdon Press, 2000), 126. [22]ರೋಮಾ 13:12-14; ಗಲಾತ್ಯ 3:27; ಎಫೆಸ 4:22, 24; 1 ಥೆಸಲೋನಿಕ 5:8. [23]Eduard Schweizer, *The Letter to the Colossians: A Commentary*, trans. Andrew Chester (Zürich: Benziger Verlag, 1976; reprint, Minneapolis: Augsburg Publishing House, 1982), 197. [24]ಅಪೊಸ್ತಲರ ಕೃತ್ಯಗಳು 15:1, 2; 1 ಕೊರಿಂಥ 12:12, 13, 20; ಗಲಾತ್ಯ 2:11-14; 3:26-28. [25]Josephus *Against Apion* 2:269; see also Philo *On the Embassy to Gaius* 10. [26]Herodotus, *History* 4.64, 65, 75; quoted in Hendriksen, 154. [27]Peter T. O'Brien, *Colossians, Philemon*, Word Biblical Commentary, vol. 44 (Waco, Tex.: Word Books, 1982), 193. [28]A. T. Robertson, *Paul and the*

*Intellectuals: The Epistle to the Colossians*, rev. and ed. W. C. Strickland (Nashville: Broadman Press, 1959), 107. [29]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 861. [30]ನೋಡಿರಿ 1 ಕೊರಿಂಥ 4:21; 2 ಕೊರಿಂಥ 10:1; ಗಲಾತ್ಯ 5:23; 6:1; ಎಫೆಸ 4:2; 2 ತಿಮೊಥೆ 2:25; ತೀತನಿಗೆ 3:2.

[31]Bauer, 612. [32]ಅಪೊಸ್ತಲರ ಕೃತ್ಯಗಳು 18:14; 2 ಕೊರಿಂಥ 11:1, 4, 19, 20; ಎಫೆಸ 4:2; 2 ತಿಮೊಥೆ 4:3; ಇಬ್ರಿಯ 13:22. [33]ನೋಡಿರಿ ರೋಮಾ 12:17-21; 2 ಕೊರಿಂಥ 2:5-11; ಗಲಾತ್ಯ 6:1, 2; ಫಿಲೆಮೋನ 17, 18. [34]ರೋಮಾ 15:7, 8; ಎಫೆಸ 5:2, 25, 29. [35]ರೋಮಾ 5:15, 18; 11:31; 1 ಕೊರಿಂಥ 2:11. [36]Bauer, 6. [37]"ಹೊಸ ಒಡಂಬಡಿಕೆಯಲ್ಲಿ φιλέω ಮತ್ತು ἀγαπάω ನಡುವೆ ವ್ಯತ್ಯಾಸವನ್ನು ಮಾಡುವದಾದರೆ, ಮೊದಲನೆಯದ್ದು ಸ್ನೇಹದ ಪ್ರೀತಿಯಾದರೆ, ಎರಡಮೆಯದ್ದು ಗೌರವಪೂರ್ವಕವಾದ ಪ್ರೀತಿ ಆಗಿರುವದು: ಆದರೆ ಎರಡು ಕ್ರಿಯಾಪದಗಳನ್ನು ಸಮಾನಾರ್ಥಕವುಳ್ಳ ಪದಗಳೆಂದು ಪರಿಗಣಿಸುವ ಒಲವು ಅಧಿಕವಾಗುತ್ತಲೇ ಇರುವಂತೆ ತೋರುತ್ತಿದೆ" (James Hope Moulton and George Milligan, *The Vocabulary of the Greek Testament* [Grand Rapids, Mich.: Wm. B. Eerdmans Publishing Co., 1930], 669–70). [38]ಮತ್ತಾಯ 26:28; ಮಾರ್ಕ 1:4; 3:29; ಲೂಕ 1:77; 3:3; 4:18; 24:47; ಅಪೊಸ್ತಲರ ಕೃತ್ಯಗಳು 2:28; 5:31; 10:43; 13:38; 26:18; ಎಫೆಸ 1:7; ಕೊಲೊಸ್ಸೆ 1:14; ಇಬ್ರಿಯ 9:22; 10:18. [39]David L. Roper, *The Life of Christ, 1: A Supplement*, Truth for Today Commentary (Searcy, Ark.: Resource Publications, 2003), 581. [40]ಮತ್ತಾಯ 28:20; ಯೋಹಾನ 12:50; 14:15, 21, 24; 15:10; 1 ಕೊರಿಂಥ 14:37; 1 ಯೋಹಾನ 2:3, 4; 3:22, 24; 5:2, 3.

[41]Nathaniel Hawthorne, "The Great Stone Face," in *The Complete Short Stories of Nathaniel Hawthorne* (Garden City, N.Y.: Doubleday & Co., 1959), 451.